ವೃಷಭ ಸಂಸ್ಕೃತಿ

ಶ್ರೀಶೈಲ ಸೂರ್ಯ ಸಿಂಹಾಸನಾಧೀಶ್ವರ
ಡಾ॥ ಶ್ರೀ ಜ. ಚ. ನಿ.

ಶ್ರೀಶೈಲ ಸೂರ್ಯ ಸಿಂಹಾಸನಾಧೀಶ್ವರ
ಡಾ॥ ಶ್ರೀ ಜ. ಚ. ನಿ

ಪ್ರಕಾಶಕರು :
ಶ್ರೀ ಜ. ಚ. ನಿ. ಅಧ್ಯಯನ ಪೀಠ ಮತ್ತು
ಸಂಶೋಧನ ಸಂಸ್ಥೆ ಬೆಂಗಳೂರು.

Sosodhan Sunstha

ಪ್ರಕಾಶಕರು :

ಶ್ರೀ ಜ. ಚ. ನಿ. ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ
ಶಿವಾಚಾರ್ಯ ತತ್ತ್ವತುಂಗೋತ್ರಿ-ಚೈತನ್ಯ ಪಥ
ನಿಜಾನುಭಾವ ನಿವಾಸ, ಬೆಂಗಳೂರು-೪

ಮೊದಲ ಮುದ್ರಣ : ೧೯೮೯

ಬೆಲೆ : ಆರು ರೂಪಾಯಿ

ಮುದ್ರಕರು :

ಫ. ಶಿ. ಭಾಂಡಗೆ, ತ್ವರಿತ ಮುದ್ರಣ,
ಗಂಗಾಪೂರಪೇಟ, ಗದಗ-೫೮೨೧೦೧

ಮುನ್ನುಡಿ

ಭಾರತೀಯ ಸಂಸ್ಕೃತಿಗೆ ಬುನಾದಿಯನ್ನು ಹಾಕಿದ, ಹಾಕಿ ಸರ್ವಾದರ್ಶವಾಗಿ ಸಂವೃದ್ಧಿಸಿದ ವೃಷಭ ಯಾರು? ವೃಷಭ ಪದದ ಮೂಲಾರ್ಥವೇನು? ಮಹತ್ವವೇನು? ಎತ್ತಿಗೆ ವೃಷಭವೆಂದು ಹೇಳುವ ರೂಢಿ ಯಾರಿಂದ ಮೊದಲಾಯಿತು? ವೃಷಭಾರಾಧನೆ–ವೃಷಭೇಶ್ವರಾರಾಧನೆ ಏಕೆ ಬಂತು? ಇವೆರಡು ಪದ ಪದಾರ್ಥ ವಿಶ್ಲೇಷಣೆಯನ್ನು ಇದೀಗ ಮಾಡುವಷ್ಟು ಮಾಡದೆ ಮರೆಯಾದುದೇಕೆ? ಪೀಠದ ಶಿಷ್ಯರೂ 'ವಿಮರ್ಶಾವಿಶಾರದರೂ ಧರ್ಮಸಂಶೋಧನಾಸಕ್ತರೂ ಆಗಿದ್ದ ಶಿವೈಕ್ಯ ಗು. ತಿ. ಅಕ್ಕುಲಯ್ಯ ದೀಕ್ಷಿತರು ೧೯೫೩ ರಲ್ಲಿ ರೂಪಿಸಿದ "ವೃಷಭ ರಹಸ್ಯಮು" ಎಂಬ ಸಂಶೋಧನಾತ್ಮಕ ವಿಮರ್ಶಾತ್ಮಕ ಗ್ರಂಥ ಈ ದಿಸೆಯಲ್ಲಿ ಒಂದೇ ಒಂದು. ಇಂತಿದ್ದರೂ ವೃಷಭ ರಹಸ್ಯ ರಹಸ್ಯವಾಗಿಯೇ ಉಳಿದಿದೆ. ಮೂಲಭೂತವಾಗಿ ವಸ್ತುನಿಷ್ಠ ವಿಷಯ ಅವರಿಗೂ ವಿದಿತವಾಗಿಲ್ಲ. ನಿಗಮ, ಆಗಮ, ಶಾಸನ, ಪುರಾತತ್ತ್ವಶೋಧನ, ಪುರಾತನ ನಾಣ್ಯ, ಭಾಷ್ಯ ಅವತಾರ, ಮುದ್ರೆ, ಧ್ವಜ ಹೀಗೆ ವೈವಿಧ್ಯಮಯವಾಗಿ ಶೋಧಿಸಲು ಸಾಕಷ್ಟು ಸಾಹಸಮಾಡಿದ್ದರೂ ಮುಖ್ಯವಾದ ಮೂಲವನ್ನು ಕಂಡು ಹಿಡಿಯಲಾಗಿಲ್ಲ, ಪಾಶ್ಚಾತ್ಯರ ಪರಿಶೋಧನೆಗೂ ಮೂಲ ಸಿಕ್ಕಿಲ್ಲ. ತಾತ್ತ್ವಿಕ ಸಿದ್ಧಾಂತಕ್ಕೂ ಸಾಧ್ಯವಾಗಿಲ್ಲ. ವೃಷಭ ರಹಸ್ಯ ಗ್ರಂಥ ವಿದ್ವಜ್ಜನರನ್ನು ವಿಸ್ಮಯಗೊಳಿಸಿದೆಯಾದರೂ ಮೂಲ ಗುರಿಗೆ ಮುಟ್ಟಲಾಗಿಲ್ಲ. ಪರಿಶೋಧಕರಿಗೆ ಪ್ರಚೋದಕವಾಗಿದೆಯೆಂದು ಮಾತ್ರ ಹೇಳಬಹುದಾಗಿದೆ. ಅಕ್ಕುಲಯ್ಯನವರ ಮಿಕ್ಕಿನ ಸಾಹಸ ಮೆಚ್ಚತಕ್ಕುದಾಗಿದೆ. ಪರಿಶೋಧನ ಪ್ರತಿಭೆ ಪ್ರಶಂಸನೀಯವಾಗಿದೆ. ಪ್ರಬುದ್ಧ ವಿದ್ವಾಂಸರು ಪ್ರಶಂಸಿಸಿದ್ದಾರೆ. ಪಂಡಿತರ 'ನಭೂತೋ ನ ಭವಿಷ್ಯತಿ' ಎಂಬ ಪ್ರಶಂಸಪರ ಮಾತಿನಲ್ಲಿನ 'ನ ಭೂತೋ' ಪದವನ್ನು ಒಪ್ಪಬಹುದಾಗಿದೆ. ನ ಭವಿಷ್ಯತಿ ಪದವನ್ನು ಒಪ್ಪಲು ಮನಸ್ಸು ಹಿಂಜರಿಯುತ್ತದೆ. ಮಾರ್ಗ ಲಭಿಸಿರುವಾಗ ಮುಂದುವರಿಯುವವರಿರಲಾರರೆ? ಪರಿಶೋಧನೆಗೆ ಪರಿಸಮಾಪ್ತಿಯಿದೆಯೆ? ಭಾರತೀಯ ಸಾಹಿತ್ಯ ಬೃಹತ್ತಾದುದು; ಸಂಸ್ಕೃತಿ ಮಹತ್ತಾದುದು. ಪರಿಶೋಧಕರು ಅದೆಷ್ಟು ಪರಿಶೋಧಿಸಿದರೂ ತೀರದಷ್ಟಿದೆ. ಚಿಲುಮೆಯ ನೀರಿನಂತೆ ಮೊಗೆದಷ್ಟೂ ಊರುತ್ತದೆ.

ಅಂದರೆ ಹೊರಚಿಮ್ಮಿ ಬರುತ್ತದೆ. ಭಾರತೀಯ ಸಂಸ್ಕೃತಿ ಅದೊಂದು ಸುರ ತರು. ಬೇಡುವವರೇ ಬೇಸರಿಸಬೇಕು. ತೋಡುವವರೆ ತೊಳಲಬೇಕು. ಬೇಡುವವರಿಗೆ ಭಾವ-ಭಾಷಾಪರಿಮಿತಿಯುಂಟು; ಅಂತೆಯೇ ತೋಡುವವರಿಗೆ ತನುಸತ್ವಗಳ ಪರಿಮಿತಿಯುಂಟು. ಈವ ಸುರತರುವಿಗೆ ಯಾವ ಪರಿಮಿತಿ ಯುಂಟು? ಭಾರತೀಯ ಪುರಾತನ ಸಂಸ್ಕೃತಿಗೆ ಪರಿಮಿತಿಯೆಂಬುದಿರದು, ಇಲ್ಲ. ಅಂದು ಆ ಕೃತಿಗೆ ಕೃತಿಕರ್ತರಿಗೆ ಆಶೀರ್ವದಿಸಿರುವವರಲ್ಲಿ ಅಭಿಪ್ರಾಯ ಅಭಿವ್ಯಕ್ತಿ ಗೊಳಿಸಿರುವವರಲ್ಲಿ ನಾವೂ ಒಬ್ಬರು. "ಪ್ರಮಾಣ ಪೂರ್ವಕವಾಗಿ ವೃಷಭ ವೈಶಿಷ್ಟ್ಯವನ್ನು-ವ್ಯಾಪ್ತಿಯನ್ನು ನಿರೂಪಿಸಿರುವುದು ನಿರ್ವಿವಾದವಾಗಿದೆ; ವೃಷಭ ಸಂಸ್ಕೃತಿಯನ್ನು ತಿಳಿದುಕೊಳ್ಳುವವರಿಗೆ ಇದು ಉತ್ತಮ ಕೃತಿಯಾಗಿದೆ.." ಎಂದು ಮುಂತಾಗಿ ಅಂದು ಅಭಿಪ್ರಾಯ ಪಟ್ಟಿದ್ದೆವು. ಇಂದು ಆ ಅಭಿಪ್ರಾಯ ವಿಲ್ಲವಾಗಿ ಈ ಕೃತಿಯ ರೂಪಿಸುವ ಸಾಹಸಮಾಡಿದ್ದೇವೆ.

ವೃಷಭ ಸಂಸ್ಕೃತಿಯೆಂದರೆ ಶ್ರೇಷ್ಠ ಸಂಸ್ಕೃತಿ, ಧರ್ಮ ಸಂಸ್ಕೃತಿ ಮತ್ತು ಶಕ್ತಿವಂತ ಸಂಸ್ಕೃತಿ! ವೃಷಭ ಸಂಸ್ಕೃತಿ ವಿಶ್ವ ಸಂಸ್ಕೃತಿ! ಅದರ ನಿಲವು ಅತ್ಯಂತ ಎತ್ತರ; ಬಿತ್ತರ. ಈ ಕಿರು ಹೊತ್ತಿಗೆಯಲ್ಲಿ ಕಥಿಸಿ ಮುಗಿಸಲು ಸಾಧ್ಯವಿಲ್ಲವಾದರೂ ಹೊಲಬುದೋರುವ ಕೈಮರವಾದರೆ ಸಾಕೆಂದು ಬಗೆದು ಸಾಹಸಗೈಯಲಾಗಿದೆ.

ಕಾಡಿನಲ್ಲಿ ಹುಟ್ಟಿ, ನಾಡ ಜೀವಿಯಾಗಿ, ನಾಡಿಗರ ಜೀವನಾಧಾರವಾಗಿ, ಜೀವನ ದರ್ಶನವಾಗಿ, ಧರ್ಮ ಪರಾಕ್ರಮಗಳ ಪ್ರತೀಕವಾಗಿ, ಶ್ರೀಶೈಲ ಪೀಠದ ಗಜಕರ್ಣ ಶಿವಾಚಾರ್ಯರ ಗೋತ್ರಪುರುಷನಾಗಿ, ಜೈನ ಧರ್ಮದ ಪ್ರಪ್ರಥಮ ತೀರ್ಥಂಕರನಾಗಿ, ಅಪರಶಿವನ ವಾಹನವಾಗಿ, ರುದ್ರದೇವನನ್ನು ವೃಷಭ ಧ್ವಜನೆನಿಸಿ, ಓಂಕಾರಮಂತ್ರವೆನಿಸಿ, ವೀರಶೈವಕರಸ್ಥಲದ ಲಿಂಗಾಕಾರ ಸಂಕೇತವೆನಿಸಿ, ನಾಲ್ಕು ವೇದ ಸೂಚಕ ನಾಮವೆನಿಸಿ, ಎಲ್ಲ ದೇವತೆಗಳನ್ನು ತನ್ನಲ್ಲಿ ಸಮೀಕರಿಸಿಕೊಂಡುದೆನಿಸಿ, 'ವೃಷೋ ಹಿ ಭಗವಾನ್ ಧರ್ಮಃ' ಎಂಬು ದಾಗಿ ಮನುವಿನ ಮನನ ಕಾರಣವೆನಿಸಿ, ಕೃಷಿ ಚೇತನನೆನಿಸಿ, ವಿಶ್ವಸ್ವರೂಪ ನೆನಿಸಿ ವೃಷಭ ವಿಖ್ಯಾತವಾದುದಕ್ಕೆ ಮೂಲ ಕಾರಣನು ವೃಷಭ ರುದ್ರದೇವ ನೆಂಬುದನ್ನು ಸೂತ್ರಪ್ರಾಯವಾಗಿ ಅಂದರೆ ಸಂಕ್ಷಿಪ್ತವಾಗಿ ಅರಿಯಬೇಕೆಂಬುದೇ ಈ ಕಿರುಕೃತಿಯ ಗುರಿಯಾಗಿದೆ.

ವೃಷಭನೆಂದು ವಿಶಿಷ್ಟ ಪ್ರಶಸ್ತಿಯನ್ನು ಪಡೆದ ಅನಂತರುದ್ರನ ಕಾಲ ಋಗ್ವೇದಕ್ಕೆ ಪೂರ್ವದ್ದಾಗಿದೆ, ಅನಾದಿಯಾಗಿದೆ, ಋಗ್ವೇದದಲ್ಲಿ ವೃಷಭ ರುದ್ರನ ವರ್ಣನೆಯಿದೆ. ವೃಷಭ ವಿಶೇಷಣದ ಉಲ್ಲೇಖವಿದೆ. ಈ ವಿಶೇಷಣ

ದಿಂದ ರುದ್ರದೇವನ ಜೀವನ ಮೌಲ್ಯ ಮನದಟ್ಟಾಗುತ್ತದೆ. ಅಲ್ಲದೆ ರುದ್ರ ದೇವನಿಂದ ವೃಷಭ ಸಂಸ್ಕೃತಿ ಭಾರತಾದ್ಯಂತ ಭಾರತೀಯರೆಲ್ಲರ ಜೀವನದಲ್ಲಿ ಅಪ್ರತಿಮವಾಗಿ ಬೆಳೆದು ಬಂದುದರ ಕಿರಿನೋಟವೇ ಈ ಕಿರುಕೃತಿಯ ಉದ್ದೇಶ ವಾಗಿದೆ. ಇದೊಂದು ಹೊಸ ಹೆಜ್ಜೆ, ಗುರಿಮುಟ್ಟಿದೆಯೆಂದು ಹೇಳಲಾರೆ ವಾದರೂ ಇದರಲ್ಲಿ ಪರಿಶೋಧನ ಪರಿಶೀಲನ ದೃಷ್ಟಿಯಿದೆಯೆಂದು ಹೇಳದಿರ ಲಾರೆವು.

ಲಿಂಗಸಂಸ್ಕೃತಿಯು ವೃಷಭ ರುದ್ರನಿಂದ ಉಗಮ. ಸಾಕ್ಷಾತ್ ರುದ್ರ ದೇವನೇ ಲಿಂಗತತ್ತ್ವವೆಂದು ಸಂಸ್ಕೃತ ಮತ್ತು ವಚನವಾಙ್ಮಯದಲ್ಲಿ ವಿಖ್ಯಾತ ವಾಗಿದೆ. "ದ್ವಾಪರದಲ್ಲಿ ಲಿಂಗಪ್ರಾಣ ಸಂಯೋಗವಾಗಿ ವೃಷಭನೆಂಬ ಗಣೇಶ್ವರನಾಗಿರ್ದನು...."ಎಂದು ಚನ್ನಬಸವಣ್ಣನವರ ನಿರೂಪಣೆ! ಲಿಂಗತತ್ತ್ವ ಈಚೆಯದೆಂದು ಹೇಳುವವರು ಕಣ್ದೆರೆಯಬೇಕು.

ಪುಸ್ತಕವನ್ನು ಅಂದವಾಗಿ ಅಲ್ಪಸಮಯದಲ್ಲಿ ಮುದ್ರಿಸಿದ ಗದುಗಿನ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣದ ಸಂಚಾಲಕರಾದ ಶ್ರೀ ಅಶೋಕ ಅವರಿಗೂ ಕೃತಜ್ಞತೆಗಳು.

ಪರಿವಿಡಿ



ದಾನಿ ಸಿ. ಬಿ. ದಾನೇಶರವರ ಕಿರುಪರಿಚಯ

ಚಿತ್ರದುರ್ಗ ಜಿಲ್ಲೆಯ ಚಿಕ್ಕಪ್ಪನಹಳ್ಳಿ ಗ್ರಾಮದ ಭಕ್ತ ಶಿರೋಮಣಿಗಳಾದ ತಂದೆ ಶ್ರೀಮಾನ್ ಬಸಪ್ಪ ತಾಯಿ ಶ್ರೀಮತಿ ಮುರಿಗಮ್ಮನವರ ಉದರದಲ್ಲಿ ಸನ್ ಸಾವಿರದ ಒಂಭೈನೂರಾ ಮೂವತ್ತೇಳನೇ ಇಸ್ವಿ ಆಗಸ್ಟ್ ತಿಂಗಳು ಹದಿನಾಲ್ಕರಂದು ಶ್ರೀ ಸಿ. ಬಿ. ದಾನೇಶರವರು ಜನ್ಮವೆತ್ತಿದರು.

ಬಡ ರೈತಾಪಿ ಕುಟುಂಬಕ್ಕೆ ಸೇರಿದ ಇವರ ಕಷ್ಟ ಕಾರ್ಪಣ್ಯಗಳ ಕಾರಣ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಲಾಗಲಿಲ್ಲ. ಬಾಲ್ಯದಿಂದಲೂ ಮಿತ್ರ ಪ್ರೇಮಿಗಳಾಗಿ, ಕಲೋಪಾಸಕರಾಗಿ, ಸಾಹಿತ್ಯಾಭಿರುಚಿಯಿಂದ ಕೂಡಿದವರಾಗಿ ಫೋಟೋಗ್ರಫಿಯಲ್ಲಿ ನೈಪುಣ್ಯತೆಯನ್ನು ಹೊಂದಿ ಅದರಲ್ಲಿಯೇ ಉದ್ಯೋಗ ನಿರತರಾಗಿರುತ್ತಾ ಜನಸೇವೆಗೆ ಹೆಚ್ಚು ಸಮಯವನ್ನು ಕಳೆಯುತ್ತಾ ಭಾರತದ ಸ್ವಾತಂತ್ರ್ಯ ನಂತರ ಭಾರತೀಯರ ಮನದಲ್ಲಿ ರಾಷ್ಟ್ರಪ್ರೇಮ, ಜನಸೇವೆ, ಶಿಸ್ತು, ಧಾರ್ಮಿಕ ಜೀವನ ಮೊದಲಾದವುಗಳ ಬೆಳವಣಿಗೆಗಾಗಿ ಜನ ಸಂಘಟನಾ ಕಾರ್ಯದಲ್ಲಿ ನಿರತರಾಗಿದ್ದು ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ಸಂಘಟನಾ ಕಾರ್ಯದಲ್ಲಿ ಕೆಲವಾರು ವರ್ಷಗಳು ದುಡಿದು ಜನಪ್ರಿಯರಾದರು.

೧೯೩೯ ರಲ್ಲಿ ಅಂದಿನ ರಾಷ್ಟ್ರನಾಯಕರ ಪ್ರೇರಣೆಯಿಂದ ಜನಸಂಘದ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯವೆಸಗತೊಡಗಿದ್ದ ಕಾರಣ ೧೯೭೫ ರಲ್ಲಿ ಜೆ.ಪಿ. ಯವರ ಕರೆಯ ಮೇರೆಗೆ ಬಂಧನಕ್ಕೊಳಪಟ್ಟರು, ಅಂಜದೇ ದಿಟ್ಟ ತನದಿಂದ ಹಿಡಿದ ಕೆಲಸವನ್ನು ಬಿಡದೇ ಜನಸೇವಾ ಕಾರ್ಯದಲ್ಲಿಯೇ ಮಗ್ನ ರಾಗಿ ದುಡಿಯುತ್ತಾ ಶಿವಶರಣ, ಸಾಧು ಸಂತರ ದರ್ಶನ, ಸ್ಪರ್ಶನ, ಸಂಭಾಷಣಗಳಿಂದ ಪ್ರೇರೇಪಣೆ ಹೊಂದಿ ದಾನ ಧರ್ಮಾದಿ ಕಾರ್ಯಗಳಿಗೆ ಕಷ್ಟಾರ್ಜಿತವಾಗಿ ಗಳಿಸಿದ ಹಣದಲ್ಲಿ ಅಲ್ಪಭಾಗವನ್ನು ದಾನರೂಪದಲ್ಲಿ ಕೊಡುತ್ತಾ ತ್ಯಾಗಜೀವಿಗಳಾಗಿ ಸಾಹಿತ್ಯ, ಸಂಗೀತ, ಕಲೆ ಮೊದಲಾದವುಗಳ ಬೆಳವಣಿಗೆಗೆ ಅಳಿಲು ಸೇವೆ ಎಂಬಂತೆ ಕೈಲಾದಷ್ಟು ಧನ ಸಹಾಯ ಮಾಡುತ್ತಾ ಬಂದಿದ್ದಾರೆ.

ಚಿತ್ರದುರ್ಗ ಜಿಲ್ಲಾ ವೀರಶೈವ ಮಹಾಸಭೆಯವರು ಧರ್ಮ ಗುರು ಸಾಹಿತ್ಯ ಚಕ್ರವರ್ತಿ ಎಂದು ಬಿರುದಾಂಕಿತರಾದ ಶ್ರೀ ಶ್ರೀ ಜ.ಚ.ನಿ.ಯವರಿಗೆ ಸೆಪ್ಟಂಬರ್ ೧೯೮೯ ರಂದು ಸ್ಥಳೀಯ ರಂಗಯ್ಯನ ಬಾಗಿಲ ಬಳಿ ಏರ್ಪಡಿಸಿದ್ದ ಸನ್ಮಾನ ಸಮಾರಂಭದಂದು ಶ್ರೀ ದಾನೇಶರವರು ಮತ್ತು ಶ್ರೀಮತಿ ಶಾಂತಮ್ಮ, ಶ್ರೀಗಳವರ ಕೃತಿಗಳ ಮುದ್ರಣಕ್ಕಾಗಿ ೧೦೦೦೮ ರೂಪಾಯಿಗಳ ಧನಸಹಾಯ ಮಾಡಿರುವುದು ಇವರ ತ್ಯಾಗ ಬುದ್ಧಿಯ ಪ್ರತೀಕವಾಗಿದೆ. ಇವರಿಗೆ ೩ ಜನ ಗಂಡು ಮಕ್ಕಳೂ, ೩ ಜನ ಹೆಣ್ಣು ಮಕ್ಕಳೂ ಇದ್ದಾರೆ. ಇವರು ಶ್ರೀ ಶ್ರೀ ಜ. ಚ. ನಿ ಯವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದಾರೆ. ಭಗವಂತನು ಇವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲೆಂದು ಹಾರೈಸಲಾಗಿದೆ.

ವೃಷಭ-ರುದ್ರ

ಭಾರತೀಯ ಸಂಸ್ಕೃತಿಗಳಲ್ಲಿ ವೃಷಭ ಸಂಸ್ಕೃತಿ ಪ್ರಮುಖ ಮತ್ತು ಪ್ರಾಚೀನ. ಅನಾದಿ ಶ್ರೀರುದ್ರ ದೇವನಿಂದಲೆ ಪ್ರಾರಂಭವಾದುದು. 'ವೃಷಭೋ ರುದ್ರಃ' ರುದ್ರನಿಗೆ ಅನ್ವರ್ಥಕ ನಾಮ; ವಿಶೇಷಣ. ರುದ್ರದೇವನು ಧರ್ಮ-ಪರಾಕ್ರಮಿಯಾಗಿದ್ದುದರಿಂದ ಆತನನ್ನು ವೃಷಭನೆಂದು ಸಂಬೋಧಿಸುವರು ಆರ್ಯರು. ವೃಷಭ ಪದದರ್ಥ ಮೂಲಭೂತವಾಗಿ ಎತ್ತು ಎಂದಲ್ಲ.ಮೂಲಭೂತ ವಾದರ್ಥ ಧರ್ಮ-ಪರಾಕ್ರಮ ಎಂದಿರುತ್ತದೆ. ಇವೆರಡೂ ರುದ್ರದೇವನ ಸ್ವಾಭಾವಿಕ ಗುಣಧರ್ಮಗಳಾಗಿದ್ದವು, ಸಾಧಿತಗಳೂ ಆಗಿದ್ದವು. ರೋಗ-ಭವ ರೋಗಗಳೆರಡನ್ನು ಕಳೆದು ಜನರನ್ನು ಹದುಳಿಗರನ್ನಾಗಿ ಮಾಡುವುದೇ ಮುಖ್ಯ ವೃತ್ತಿ ಅಂದರೆ ಧರ್ಮವಾಗಿತ್ತು ರುದ್ರದೇವನಿಗೆ। 'ರುತಂ(ದಂ) ಸಂಸಾರ ದುಃಖಂ ರೋಗತಾಪಂ ವ್ಯತೀತಿ ದ್ರಾವಯತೀತಿವಾ ರುದ್ರಃ। ರುತಿಂ ಶಬ್ದಂ ವೇದಾತ್ಮಾನಂ ಬ್ರಹ್ಮಣೇ ದದಾತೀತಿ (ಕಲ್ಪಾದೌ) ರುದ್ರಃ। ಅಲ್ಲದೆ ರುದ್ರನು ಪರಾಕ್ರಮಿಯೆಂಬುದು ಪ್ರಸಿದ್ಧ.ಅಂತೆಯೇ ಆತನು 'ವಿಶ್ವಾಧಿಕ-ವಿಶ್ವಾಧಿಪ-ವಿಶ್ವರೂಪ ಎಂದು ವಿಖ್ಯಾತನಾಗಿದ್ದಾನೆ. ಜೊತೆಗೆ ಪಶು(ಗೋ) ಪೋಷಣ ವೃತ್ತಿಯನ್ನು ಪ್ರಪ್ರಥಮವಾಗಿ ಪ್ರಧಾನವಾಗಿ ಇರಿಸಿಕೊಂಡು 'ಪಶುಪತಿ' ಯೆಂದೆನಿಸಿದ್ದಾನೆ. ಪಶುಪತಿ ಕಾಳಿಕಾಪತಿ ರುದ್ರನಲ್ಲದೆ; ಪಾರ್ವತೀಪತಿ ಶಿವ ನಲ್ಲ. ಸ್ವಯ ಶಕ್ತಿಯೊಡನೆ ಗಣಶಕ್ತಿಯನ್ನು ಸಂವೃದ್ಧಿಸಿದ್ದನು. ರುದ್ರಗಣರ ಮರುದ್ಗಣರ, ರುದ್ರಕನ್ನೆಯರ ಸರ್ವತೋಮುಖವಾದ ಬೆಳವಣಿಗೆ ಏಳ್ಗೆಗಳನ್ನೆ ತನ್ನ ದೃಷ್ಟಿಯಲ್ಲಿ ಇರಿಸಿಕೊಂಡು ವೈದ್ಯ, ಕೃಷಿ, ಯೋಗ, ವನ್ಯರಕ್ಷಣ, ಆರ್ಥಿಕ ಸಮೃದ್ಧಿ, ಆತ್ಮಿಕ ಶ್ರೇಯೋಭ್ಯುದಯ ಇತ್ಯಾದಿ ಇವನ್ನೆಲ್ಲ ತನ್ನ ಜೀವನ ಧ್ಯೇಯವನ್ನಾಗಿರಿಸಿಕೊಂಡು ಈ ವೃತ್ತಿಗಳಲ್ಲೆಲ್ಲ ಸಫಲತೆಯನ್ನು ಸಂಪೂರ್ಣವಾಗಿ ಸಂಪಾದಿಸಿದ್ದನು. ದಿಟವಾಗಿ ರುದ್ರದೇವನು ಗಣರಾಜ್ಯ ರಚನಾಶಿಲ್ಪಿಯಾಗಿದ್ದನು. ರುದ್ರಗಣ, ರುದ್ರಕನ್ನೆಯರನ್ನು ಮತ್ತು ಮರುದ್ಗ ಣರನ್ನು ಮುಪ್ಪಿಗೆ ತುತ್ತಾಗಿ ತೊಳಲದಂತೆ ಬಾಳಿನುದ್ದಕ್ಕೂ ಜವ್ವನಿಗ ರಾಗಿಯೇ ಇರುವಂತೆ ಮಾಡಿ ತನ್ನ ವೈದ್ಯ ವೃತ್ತಿಯ ಪಾರಮ್ಯವನ್ನು ಮೆರೆ ದನು. ಇದರಿಂದಾಗಿ ಆತನನ್ನು ಆರ್ಯರು 'ಭಿಷಕ್ತಮ'ನೆಂದು ಬಿರುದಿತ್ತು ಗೌರವಿಸಿದರು. ಆದಿಕವಿಯಾಗಿ ಋಗ್ವೇದ ಋಕ್‌ಗಳನ್ನು ರಚಿಸಿದನು.

ಆದರೆ ಅವೆಲ್ಲ ಸಿಕ್ಕುವುದಿಲ್ಲ; ಸಿಕ್ಕುವಂತೆ ಉಳಿಸಿಲ್ಲ. ಬರೀ ಕೇಳಿಕೆಯಲ್ಲಿ (ಶ್ರುತಿಯಲ್ಲಿ) ಮಾತ್ರವಿದೆ.

"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ,
ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ;
ತಂ ದೇವಮಾತ್ಮ ಬುದ್ಧಿಪ್ರಕಾಶಂ,
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ"

–ಶ್ವೇತಾಶ್ವತರ, ೬–೧೮

ಇನ್ನು ಯೋಗ ಪರಿಣತ ಪರಾಕ್ರಮಕ್ಕೆ ತ್ರಿಪುರ ಸಂಹಾರವೇ ಸಾಕ್ಷಿಯಾಗಿದೆ. ರುದ್ರದೇವನಿಗಿರುವ 'ಸಂಕರ್ಪಣ ಮೂರ್ತಿ ಸ್ವರೂಪಃ' ಎಂಬ ಪ್ರಶಸ್ತಿಯೇ ಕೃಷಿ ಕೌಶಲ್ಯತೆಗೆ ಪ್ರಮಾಣವಾಗಿದೆ. ವನಾನಾಂಪತಿ, ಪಶೂನಾಂಪತಿ ಇತ್ಯಾದಿ ಶ್ರೀರುದ್ರ ಸೂಕ್ತಿಗಳು ಆತನ ವನ್ಯ ಪೋಷಣ ಪರಾಕ್ರಮ ಪ್ರವೀಣತೆಗೆ ಪ್ರಮಾಣವಾಗಿವೆ. ಇವೆಲ್ಲ ಧರ್ಮ ಪರಾಕ್ರಮ ಗುಣಗಳನ್ನು ಮನಗಂಡು ಆರ್ಯರು ಋಗ್ವೇದ ಮಂತ್ರಗಳಲ್ಲಿ ಆತನನ್ನು 'ವೃಷಭ'ನೆಂಬ ವಿಶೇಷಣದಿಂದ ಗೌರವಿಸಿದ್ದಾರೆ:

"ಮಾತ್ವಾ ರುದ್ರ ಚಕ್ರು ಧಾಮಾ ನಮೋಭಿರ್ಮಾ,
ದುಷ್ಟತೀ ವೃಷಭ ಮಾ ಸಹೂತಿ;
ಉನ್ನೋ ವೀರಾನ್ ಅರ್ಪಯ ಭೇಷಜೇಭಿಷಕ್ತಮಂ
ತ್ವಾ ಭಿಷಜಾಂ ಶ್ರುಣೋಮಿ"

–ಋಗ್ವೇದ

'ಧರ್ಮ ಪರಾಕ್ರಮಗಳಿಂದ 'ವೃಷಭ' ಪ್ರಶಸ್ತಿಯನ್ನು ಪಡೆದ ರುದ್ರದೇವನೆ, ನಮ್ಮ ನಮಸ್ಕಾರಗಳಿಂದ ನಿನ್ನ ಸಿಟ್ಟು ಶಾಂತವಾಗಲಿ. ನಮ್ಮ ಹೊಗಳಿಕೆ–ಕರೆಯುವಿಕೆಗಳಿಂದ ನಿನ್ನ ಕ್ರೋಧ ಕೊನೆಗೊಳ್ಳಲಿ. ನಮ್ಮ ವೀರರನ್ನು ನಿನ್ನ ಔಷಧಿಗಳಿಂದ ಬಲವಂತರನ್ನಾಗಿಸು; ನೀನು ಸರ್ವೋತ್ತಮ ಚಿಕಿತ್ಸಕನಾಗಿರುವೆ. ಅಂದರೆ ಭಿಷಕ್ತಮ (ವೈದ್ಯ ಶ್ರೇಷ್ಠ)ನಾಗಿರುವೆ.'

"ಉನ್ಮಾಮಮಂದ ವೃಷಭೋ ಮರುತ್ವಾನ್
ತ್ವಕ್ಷೀಯಸಾ ವಯಸಾ ನಾಧಮಾನಂ ।
ಘೃಣೀವಚ್ಛಾಯಾ ಮರಪಾ ಆಶೀಯಾ
ವಿವಾಸೇಯಂ ರುದ್ರಸ್ಯ ಸುಮ್ನಂ॥"

–ಋಗ್ವೇದ, ೨–೬–೧೭

'ಅನುಕೂಲ ಮರುತ್ ಸಹಾಯದಿಂದ ಮಳೆಗರೆವ ಮೇಘವು ರೈತರನ್ನು ತೃಪ್ತಿಪಡಿಸುವಂತೆ, ಇಷ್ಟಾರ್ಥಗಳನ್ನು ಕೊಡುವ ಓ ವೃಷಭ ರುದ್ರನೆ, ನಿನ್ನ

ಕರುಣೆಯ ನೆರಳಿನಲ್ಲಿ ನಮ್ಮ ತಾಪವು ತಣ್ಣಗಾಗಲಿ.'

ಈ ಎರಡು ಋಗ್ವೇದ ಮಂತ್ರಗಳಲ್ಲಿ ವೃಷಭ ಪದವು ರುದ್ರದೇವನಿಗೆ ವಿಶೇಷಿಸಿ ಉಪಯುಕ್ತವಾಗಿದೆ. ಇದರಿಂದ ತಿಳಿದುಬರುತ್ತದೆ ಅನಾದಿ ಕಾಲದಲ್ಲಿಯೆ ವೃಷಭ ವಾಚ್ಯನು ರುದ್ರನು ಎಂಬುದಾಗಿ! ಅದು ಆತನ ಧರ್ಮ-ಪರಾಕ್ರಮ ಚಾರಿತ್ರ ಶ್ರೇಷ್ಠತೆಯನ್ನು ಪ್ರತಿನಿಧಿಸುತ್ತದೆ. ಅಂತೆಯೆ ದೀಕ್ಷೆಯನ್ನಿತ್ತು ಭವರೋಗವನ್ನು, ಔಷಧಿಗಳನ್ನಿತ್ತು ತನು ರೋಗಗಳನ್ನು ತೊಡೆದು ಹಾಕುವ ರುದ್ರದೇವನ ಹಸ್ತವೂ ಧರ್ಮ ಯುಕ್ತವೂ ದಿವ್ಯವೂ ಆಗಿತ್ತು. ಧೃತಿಗುಣ ಸಂಯುಕ್ತವೂ ಆಗಿತ್ತು:

"ಕ್ವಸ್ಯತೇ ರುದ್ರ ಮೃಡಯಾಕುರ್ ಹಸ್ತೋಯೋ ಅಸ್ತಿ ಭೇಷಜೋ ಜಲಾಷಃ । ಅಪರ್‌ಬರ್ತಾ ರಪಸೋ ದೈವ್ಯಸ್ಯಾಭೀನಂಯಾ ವೃಷಭ ಚಕ್ಷಮೀಥೆ। ಓ ವೃಷಭ ರುದ್ರನೆ, ಎಲ್ಲ ಬೇನೆಗಳನ್ನು ಕಳೆದು ನಲಿವನ್ನೀವ ನಿನ್ನ ಆ ಪವಿತ್ರವಾದ ವರದ ಹಸ್ತವೆಲ್ಲಿ? ದೇವತೆಗಳ ತಪ್ಪುಗಳನ್ನೆಲ್ಲ ಮನ್ನಿಸುವ ಅಂದರೆ ಕ್ಷಮಿಸುವ ಕರುಣಾಳುವಾದ ರುದ್ರದೇವನೆ, ನಮಗೆ ನಲಿವನ್ನುಂಟು ಮಾಡು ಎಂದು ಆರ್ಯರು ಪ್ರಾರ್ಥೇಯತೆಯಿಂದ ಪ್ರಾರ್ಥಿಸುತ್ತಿದ್ದರು. ಇದರಿಂದಾಗಿ ಅನ್ವರ್ಥಕವಾದ ವೃಷಭ ವಾಚ್ಯನು ರುದ್ರನಾಗಿದ್ದನು. ರುದ್ರ, ಕಾಲಾಗ್ನಿ ರುದ್ರ,-ಶಿವರುದ್ರ, ವೃಷಭರುದ್ರ, ಮಹಾರುದ್ರ, ಪಶುಪತಿರುದ್ರ, ಹರ ರುದ್ರ ಇವೇ ಮೊದಲಾದ ನಾಮಗಳು ರುದ್ರದೇವನಿಗಿರುವವು. ಜನರ ಮತ್ತು ಗಣರ ದುರಾಚಾರ-ದುಃಖಗಳನ್ನು ದೂರಮಾಡಿ ಶಿವಾಚಾರ ಸೂಳ್ನುಡಿಗಳನ್ನು ಕರುಣಿಸುವ ಅನ್ವರ್ಥದಲ್ಲಿ ರುದ್ರನಾಮ ಸಾರ್ಥಕತೆಯನ್ನು ಪಡೆದಿದೆ. ಕಾಲಾಗ್ನಿರುದ್ರ-ಶಿವರುದ್ರ ನಾಮದ್ವಯಗಳು ಘೋರಾಂಘೋರ ರೂಪಗಳನ್ನು ಮತ್ತು ಕಾಲಕ್ಕೆ ಕಾಲನಾಗಿರುವಿಕೆಯನ್ನು ಮಂಗಳಕರತ್ವವನ್ನು ಭದ್ರತ್ವವನ್ನು ಬೋಧಿಸುತ್ತವೆ. ಕಾಲಕ್ಕೆ ಅಂದರೆ ಯಮನಿಗೆ ಕಾಲನಾಗಿರುವಿಕೆಯೆಂದರೆ ಯಮನಾಗಿರುವಿಕೆಯೆಂದರ್ಥ ! ಶಿವರುದ್ರ ಭಕ್ತನಾದ ಶ್ವೇತನ ಮೇಲೆ ಕಾಲ (ಯಮ)ನು ಕೈಮಾಡಿದ್ದಕ್ಕೆ ರುದ್ರದೇವನು ತನ್ನ ಭಕ್ತರಕ್ಷಣೆಗಾಗಿ ತನ್ನ ಅಗ್ನಿ ನೇತ್ರದಿಂದ ಕಾಲನನ್ನು ಸಂಹರಿಸುತ್ತಾನೆ. ಆದರಿಂದ ಅಂದಿನಿಂದ ಕಾಲಾಗ್ನಿ ರುದ್ರನೆಂಬ ಹೆಸರಿಗೆ ಹೊಲಬುಂಟಾಯಿತು. ಆಗ ಯಮನು ಲಿಂಗಕ್ಕೆ 'ರುದ್ರ ಮುದ್ರೆ' ಎಂದು ಹೆಸರಿಸುವನು. ಇನ್ನು 'ವೃಷಭರುದ್ರ' ಎಂಬ ನಾಮ ಧರ್ಮ ಪರಾಕ್ರಮಗಳುಳ್ಳ ರುದ್ರನೆಂಬುದನ್ನು ಸಂಕೇತಿಸುತ್ತದೆ. ಮಹಾರುದ್ರ ನಾಮವು ಅಸಂಖ್ಯ ರುದ್ರಗಣರಲ್ಲಿ ಶ್ರೇಷ್ಠತೆಯನ್ನು ಸೂಚಿಸುತ್ತದೆ. ಪಶು

ಪತಿರುದ್ರ ಎಂಬ ಹೆಸರು ಅನಾದಿ ಕಾಲದಲ್ಲಿ ಕಾಡ ಹಸುಗಳನ್ನು ನಾಡ ಹಸುಗಳನ್ನಾಗಿ ಮಾಡಿ ಹಾಲು ಮೊಸರು ಬೆಣ್ಣೆ ತುಪ್ಪಗಳನ್ನು ದೇಶೀಯರಿಗೆ ಮುಮ್ಮೊದಲು ಒದಗುವಂತೆ ಮಾಡಿದ್ದರಿಂದ ಬಂದುದೊಂದು ಬಗೆಯಾದರೆ, ಮಾನವರ ಪಶುವೃತ್ತಿಯನ್ನು ಕಂಡುಕೊಂಡು, ಪಶುವೃತ್ತಿಗೆ ಮೂಲಕಾರಣವಾದ ಮಲತ್ರಯಗಳನ್ನು ದೀಕ್ಷಾತ್ರಯಗಳಿಂದ ದೂರಮಾಡಿ ಅಂಗತ್ರಯದಲ್ಲಿ ಲಿಂಗತ್ರಯವನ್ನು ಅಂದರೆ ಪತಿಧರ್ಮವನ್ನು ಅಳವಡಿಸಿ, ಪತಿಧರ್ಮದ ಅನುಷ್ಠಾನಕ್ಕೆಬೇಕಾದ ಅಷ್ಟಾವರಣವನ್ನು ಉತ್ಪಾದಿಸುವನು. ಶಿವಾಚಾರ ಧರ್ಮಕ್ಕೆ ನಾಂದಿಯನ್ನು ಗೀತಿಸುವನು. ತನಗಿರುವ ಪಶುಪತಿ ನಾಮವನ್ನು ಸಾರ್ಥಕಪಡಿಸುವನು. ಪ್ರಾಕೃತಿಕವಾಗಿ ಹುಟ್ಟಿದ ಪಶುಗಳು ಮಾತ್ರ ಪಶುಗಳಲ್ಲ; ಮಲತ್ರಯವುಳ್ಳ ಮಾನವರೂ ಪಶುಗಳೆಂಬುದನ್ನು ಸಿದ್ಧಾಂತೀಕರಿಸುವನು ರುದ್ರಗುರುದೇವನು. ವಿಶೇಷವೇನೆಂದರೆ ರುದ್ರದೇವನು ಗುರುದೇವನಾದಂತೆ ಲಿಂಗ–ಜಂಗಮ ಸ್ವರೂಪನೂ ಆಗಿ ರುದ್ರಗಣ ಪ್ರವರ್ತಕನೂ ಆಗುವನು. ಆ ರುದ್ರಗಣರೇ ಗಣಂಗಳು. ಅಂತೆಯೆ 'ಹರ' ನಾಮವೂ ಸಹ ರುದ್ರದೇವನದಲ್ಲದೆ ಅಪರ ಶಿವನದಲ್ಲ. ಜನಜೀವನದ ಮಲಗಳನ್ನೆಲ್ಲ ಬಾಳಿನುದ್ದಕ್ಕೂ ಹರಣ ಮಾಡುವ ಸತ್ಕ್ರಿಯಾಶಾಲಿ ಶ್ರೀರುದ್ರನಾದುದರಿಂದ ಇದರ ಅನ್ವರ್ಥಕ್ಕಾಗಿ ಹರನೆಂಬ ಹೆಸರು ರುದ್ರದೇವನದು. ಹರ, ಪಶುಪತಿ, ಮಹೇಶ್ವರ, ಗಿರೀಶ ಎಂಬೀ ಆತನ ಹೆಸರುಗಳನ್ನು ಅಪರ ಶಿವನಿಗೂ ತಿಳಿಯದೆ ಹೇಳಿಕೊಳ್ಳುವ ಮೂಢ ಸಂಪ್ರದಾಯ ಮೂಡಿ ಬಂದಿದೆ.

ರುದ್ರ ಜನ್ಯ ಧರ್ಮ

"ಕಥಿತಾಃ ಶ್ರೀರುದ್ರೇಣೈವ ಲಿಂಗಸ್ಯಾರ್ಚನ ಸೂಚಿತಾಃ ।
ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಃ ಸನಾತನಾಃ ॥ ಸ್ಕಾಂದ

ವೃಷಭ ವಾಚ್ಯ ರುದ್ರನು ಧರ್ಮ ಮೂಲನು. ವೃಷಭವೆಂದರೆ ಧರ್ಮ, ಧರ್ಮವೆಂದರೆ ವೃಷಭ. ಇದರಿಂದಾಗಿ ಧರ್ಮ ಹೃದಯನೂ ಧರ್ಮ ಮೂರ್ತಿಯೂ ಆದ ರುದ್ರನಿಗೆ ವೃಷಭವೆಂದು ಋಗ್ವೇದ ಅನ್ವರ್ಥಕವಾಗಿ ಅಂಕಿತಿಸಿದೆ. ಲಿಂಗ ತತ್ತ್ವ, ಲಿಂಗ (ಶಿವ) ಧರ್ಮಗಳು ಸನಾತನಗಳು. ಅವು ರುದ್ರವೃಷಭನಿಂದಲೇ ಸೂಚಿತಗಳಾಗಿ ಕಥಿತಗಳಾಗಿ ನಿಡುಗಾಲದಿಂದ ನೆಲಸಿವೆ.

"ರುದ್ರೇಣ ದೀಕ್ಷಿತೋ ಭೂತ್ವಾ ಸ್ಕಂದಃ ಶಿವಸವೋಽ ಭವತ್ ।
ಶಿವಾಚಾರ ರಹಸ್ಯಸ್ಯ ಪಾತ್ರತಾಂ ಪ್ರಥಮಾಂ ಗತಃ ॥"

ಈ ಪುರಾತನೋಕ್ತಿಯನ್ನು ಷಟ್‌ಸ್ಥಲ ಚಕ್ರವರ್ತಿ ಶಿವಾಚಾರ್ಯ ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಎತ್ತಿ ಉದ್ಧರಿಸಿ ರುದ್ರದೇವನಿಂದ ಶಿವಾಚಾರ ಧರ್ಮವುದಯಿಸಿತೆಂದು ಸಂದೇಹವಿಲ್ಲದೆ ಒಪ್ಪಿಕೊಂಡಿದ್ದಾರೆ.

"ರುದ್ರನೆಂಬಾತನೊಬ್ಬ ಗಣೇಶ್ವರನು,
ಭದ್ರನೆಂಬಾತನೊಬ್ಬ ಗಣೇಶ್ವರನು;
ಶಂಕರನೆಂಬಾತನೊಬ್ಬ ಗಣೇಶ್ವರನು............
ಇವರೆಲ್ಲರೂ ನಮ್ಮ ಗುಹೇಶ್ವರಲಿಂಗದಲ್ಲಿ ಅಡಗಿಪ್ಪರು."

ರುದ್ರನ ಲಿಂಗಧಾರಿಯಾಗಿ ಲಿಂಗಭೋಗೋಪಭೋಗಿಯಾಗಿ ಲಿಂಗೈಕ್ಯನಾಗಿರುವನೆಂದು ಪ್ರಭು ನಿರೂಪಿಸಿರುವಾಗ ರುದ್ರಭವಿಯೆಂದು ಈಚೆಗೆ ಅರಿವಿಲ್ಲದೆ ಆಡುವವರ ಬಾಯಲ್ಲಿ ಹುಳಗಳು ಬೀಳದಿರುವವೆ ? "ರುದ್ರೋಲಿಂಗಂ" "ಸರ್ವದೇವಾತ್ಮಕೋರುದ್ರಃ" "ರುದ್ರೇಣ ಕಥಿತಾಃ ಶಿವಧರ್ಮಾಃ" ಎಂದು ಮುಂತಾಗಿ ಹೇಳಿರುವ ಕಾರಣ ರುದ್ರ ಜನ್ಯ ಧರ್ಮವೆಂಬುದನ್ನು ವೃಷಭ (ಧರ್ಮ)ಸ್ವರೂಪನೆಂಬುದನ್ನು ಯಾರೂ ಅಲ್ಲಗಳೆಯಲು ಆಗುವಂತಿಲ್ಲ. ಋಗ್ವೇದದ ನೂರಾರು ಋಕ್‌ಗಳಲ್ಲಿ ವೃಷಭ ಎಂಬ ಪದವು ನಿರೂಪಿತವಾಗಿದೆ. ವೃಷಭರುದ್ರನೆ ಧರ್ಮಸ್ವರೂಪನೆಂಬುದನ್ನು ಪರ್ಯಾಯವಾಗಿ ಪ್ರತಿಪಾದಿಸಿದೆ. ಪುರುಷರೂಪ ವೃಷಭನೆಂದೊಪ್ಪಿಕೊಂಡಿದೆ. "ಪುಮಾನ್ ಅಂತರ್ವಾನ್ ಸ್ಥವಿರಃ ಪಯಸ್ವಾನ್ ವಸೋಃ ಕಬಂಧಮೃಷಭೋಬಿಭರ್ತಿ..." ಎಂದಿದೆ ಋಗ್ವೇದ. "ಯಶ್ಛಂದಸಾಂ ವೃಷಭೋ ವಿಶ್ವರೂಪಃ........" ಎಂದಿದೆ ತೈತ್ತರೀಯ ಶ್ರುತಿ! "...ವೃಷ ಉತಃ । ವೃಷಾಧರ್ಮಾಣ...." ಎಂದು ಸಾಮವೇದ ಧರ್ಮವೆಂದೇ ಹೇಳಿದೆ. ಹೆಚ್ಚೇನು ವೃಷಭರುದ್ರನನ್ನು ನಾಲ್ಕು ವೇದಗಳೊಪ್ಪಿಕೊಂಡಿದೆ. ಅನೇಕ ಉಪನಿಷತ್ತುಗಳು (ಸು. ಇಪ್ಪತ್ತೆರಡು) ರುದ್ರದೇವನ ವೃಷಭತ್ವವನ್ನೊಪ್ಪಿಕೊಂಡಿವೆ. "ವೃಷೋಹಿ ಭಗವಾನ್ ಧರ್ಮಃ..." ಎಂದು ಮನುಸ್ಮೃತಿ ಸಮ್ಮತಿಸಿದೆ. ವೃಷವೆಂದರೆ ಭಗವಂತ ಮತ್ತು ಧರ್ಮ ಎಂದರ್ಥ.

ರುದ್ರ ಜನ್ಯದರ್ಶನ

ಶ್ರೀ ರುದ್ರದೇವನು ಭಾರತನ ಪ್ರಪ್ರಥಮ ಭಿಷಕ್ತಮ, ಯೋಗದ್ರಷ್ಟಾರನಾಗಿದ್ದಂತೆ ಕವಿಯಾಗಿ ದರ್ಶನ ದ್ರಷ್ಟಾರ ಸ್ರಷ್ಟಾರನೂ ಆಗಿದ್ದಾನೆ.

ಅಲ್ಲದೆ ಕ್ರಾಂತದರ್ಶಿಯೂ ಕ್ರಾಂತಿಕಾರಿಯೂ ಆಗಿದ್ದಾನೆ. ಅಹಿಂಸಾತ್ಮಕ ನಿಷ್ಕಂಟಕ ನಿರ್ಮಲ ಶೋಷಣರಹಿತ ದ್ರಾವಿಡ ಸಂಸ್ಕೃತಿಯ ಸಂಕೇತವಾದ ಯಜ್ಞಕರ್ತನೂ ಆಗಿದ್ದಾನೆ. ಆದ್ದರಿಂದ ರುದ್ರದೇವನನ್ನು ಋಗ್ವೇದ ಗಾಥ (ವೇದಮಂತ್ರ) ಪತಿ, ಮೇಧ (ಯಜ್ಞ) ಪತಿ ಎಂದು ಕೀರ್ತಿಸಿದೆ. ಕವಿಯೆಂದು ಕಥಿಸಿದೆ :

"ತ್ವೇಷಂ ವಯಂ ರುದ್ರಂ ಯಜ್ಞಸಾಧಂ ವಙ್ಕುಂ
ಕವಿಮವಸೇ ನಿಹ್ವಯಾಮಹೇ ।
ಆರೇ ಅಸ್ಮದ್ದೈವ್ಯಂ ಹೇಳೋ ಅಸ್ಯತು,
ಸುಮತಿಮಿದ್ವಯಮಸ್ಯಾವೃಣೀಮಹೇ"

–ಋಗ್ವೇದ

'ನಿಸರ್ಗವಾಗಿ ಯಜ್ಞ ಸಾಧ್ಯವಾಗುವಂತೆ ಎಸಗುವವನೂ ದಿಟಕ್ಕೆ ಬಾಗಿ ಅಂದರೆ ವಿನಯವಾಗಿ ನಡೆವವನೂ ಕವಿಯೂ ಅಂದರೆ ಆತ್ಮದ್ರಷ್ಟನಾಗಿ ಕ್ರಾಂತದರ್ಶಿಯೂ ಆದ ಆ ರುದ್ರದೇವನು ತನ್ನ ದೈವೀ ಪ್ರಕೋಪವನ್ನು ತ್ಯಜಿಸುವಂತಾಗಲಿ. ನಮಗೂ ಕೋಪ ತಾಪ ಬಾರದಂತೆಸಗಲಿ. ಆತನ ಅತ್ಯಂತ ಶುಭಕರವಾದ ಅನುಗ್ರಹವನ್ನು ನಮಗೆ ದಯಪಾಲಿಸಲಿ.'

ರುದ್ರದೇವನ ಸಾಮರ್ಥ್ಯ ಸಾಮಾನ್ಯವಲ್ಲ, ಸೀಮಿತವಲ್ಲ; ಮತ್ತು ಏಕವಿಧವಲ್ಲ, ಆತನ ಆ ಸಾಮರ್ಥ್ಯಕ್ಕೆ ಅನೇಕ ಮುಖ. ಅಂತೆಯೇ ಆತನು ಅನಂತ ರುದ್ರನೆನಿಸಿದ್ದಾನೆ.

ಶ್ರೀ ರುದ್ರದೇವನು ಚಿನ್ನಾದಾನುಸಂದಾನಿ, ಚಿದ್ರಸಾನುಭಾವಿ; ಮತ್ತು ಚಿದ್ರಸಾನಂದಿ: ಚಿತ್ಕಳಾನ್ವಿತ ತೇಜಸ್ವಿ, ಓಂಕಾರಜ್ಯೋತಿ. ತತ್ತ್ವಜ್ಞಾನಿ; ತತ್ತ್ವಾನುಭಾವಿ. ಆದ್ದರಿಂದ ಏನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಸಂಪಾದಿಸಿ ಏನೆಲ್ಲ ಕ್ರಾಂತಿಗಳನ್ನೆಸಗಿದನಲ್ಲದೆ ವೇದ ಮಂತ್ರಗಳನ್ನು ವಿರಚಿಸಿ ಕವಿಯಾಗಿದ್ದನು. "ಗಾಥಪತಿಂ ಮೇಧಪತಿಂ ರುದ್ರಂ ಜಲಾಷಭೇಷಜಂ–ತಚ್ಛಂಯೋಃ ಸುಮ್ನಮೀಮಹೇಳಿ" ಎಂದು ಋಗ್ವೇದ ನಿರೂಪಿಸಿದೆ. ಮಂತ್ರ ಮತ್ತು ಸ್ತೋತ್ರರೂಪ ಗಾಥಕ್ಕೆ ಯಾಗಕ್ಕೆ ಒಡೆಯನೂ ಸುಖಪ್ರದ ಔಷಧಿಗಳಿಂದ ರೋಗನಿವಾರಕನೂ ಆದ ರುದ್ರದೇವನನ್ನು ನಮ್ಮೆಲ್ಲರಿಗೆ ನೆಮ್ಮದಿಯನ್ನು ಅಂದರೆ ಹದುಳತೆಯನ್ನೀಯಲೆಂದು ಬೇಡಿಕೊಳ್ಳುವೆವು. "ರುತಂ ನಾದಂ ಶಬ್ದಂ (ಮಂತ್ರಂ) ದದಾತೀತಿ ರುದ್ರಃ" "ರುತ್ಯಾ–ವೇದರೂಪಯಾ ಧರ್ಮಾದೀನವ ಲೋಕಯತಿ ಪ್ರಾಪಯತೀತಿ ರುದ್ರಃ" ಮತ್ತು "ರುತ್ಯಾ ವಾಗ್ರೂಪಯಾ ವಾಚ್ಯಂ ದದಾತೀತಿ ರುದ್ರಃ।" "ರುತ್ಯಾ ಪ್ರಣವರೂಪಯಾ ಸ್ವಾತ್ಮಾನಂ ಪ್ರಾಪಯತೀತಿ ರುದ್ರಃ।" "ರುತಿಂ ವೇದಂರಾತಿ ದದಾತೀತಿ ರುದ್ರಃ।" ಇವೆಲ್ಲ

ವಿಶ್ಲೇಷಣಗಳು ರುದ್ರದೇವನ ಕವಿ ಶಕ್ತಿಯನ್ನು ಸಮರ್ಥಿಸುತ್ತವೆ. ಮೊಟ್ಟ ಮೊದಲು ಋಗ್ವೇದವನ್ನು ರಚಿಸಿದಾತನು ರುದ್ರಕವಿ! ಆತನು ರಚಿಸಿದ ಋಕ್‌ಗಳು ಸಿಕ್ಕದಂತಾಗಿವೆ. ಇದಕ್ಕೆ ಕಾರಣವೇನೋ ಶೋಧಿಸಬೇಕಾಗಿದೆ.

ವೃಷಭ ಶಬ್ದ ಬಾಹ್ಯ ವಿಶ್ವನಿಷ್ಠ ಅಥವಾ ಭೌಮನಿಷ್ಠ ಸರ್ವ ಸಾಮರ್ಥ್ಯ ವನ್ನು ಸೂಚಿಸಿದರೆ ಕವಿ ಮಹರ್ಷಿ ವಿಶೇಷಣಗಳು ರುದ್ರದೇವನ ಬುದ್ಧಿಶಕ್ತಿ ಯನ್ನು ವಿದ್ಯಾಶಕ್ತಿಯನ್ನು ಆತ್ಮಶಕ್ತಿಯನ್ನು ಸೂಚಿಸುತ್ತವೆ.

ಒಮ್ಮೆ ದೇವತೆಗಳ ದೇವಲೋಕಕ್ಕೆ ಪ್ರಯಾಣ ಮಾಡುತ್ತ ಮಧ್ಯದಲ್ಲಿ ಕಂಡ ರುದ್ರನನ್ನು ನೀನಾರು? ಎಂದು ಕೇಳಲು, ರುದ್ರನು ಹೇಳಿದುದನ್ನು ಅಥರ್ವ ಶಿರೋಪನಿಷತ್ತು ಹೀಗೆ ಸಂಗ್ರಹಿಸಿದೆ:

"ಸೋಽಬ್ರವೀದಹಮೇಕಃ ಪ್ರಥಮಂ ಆಸಂ, ವರ್ತಾಮಿ, ಭವಿಷ್ಯಾಮಿಚ ನಾನ್ಯಃ ಕಶ್ಚಿನ್ ಮತ್ತೋ ವ್ಯತಿರಿಕ್ತಃ।"–ಎಂದು ಹೇಳುತ್ತ ಮುಂದುವರಿದು,

"ಗಾಯತ್ರ್ಯಹಂ, ಸಾವಿತ್ರ್ಯಹಂ, ತ್ರಿಷ್ಟುಬ್ ಜಗತ್ಯನುಷ್ಟುಪ್ ಚಾಹಂ.... ಸತ್ಯೋಽಹಂ ಗೌರಹಂ....ಯಜುರಹಂ........ಹವಿರ್‌ಹವಿಷಾ, ಆಯುರಾ ಯುಷಾ, ಸತ್ಯೇನ ಸತ್ಯಂ, ಧರ್ಮೇಣಧರ್ಮ ತರ್ಪಯಾಮಿ ಸ್ವೇನತೇಜಸಾ....॥" ಎಂದು ತನ್ನ ದಾರ್ಶನಿಕ ದಿವ್ಯ ಶಕ್ತಿಮತ್ತ್ವವನ್ನು ಗಾಯತ್ರ್ಯಾದಿ ಛಂದಸ್ಸುಗಳ ಸ್ರಷ್ಟೃತ್ವವನ್ನು ವೇದ ಆಯುರ್ವೇದಾದಿಗಳಿಗೆ ಕಾರಣತ್ವವನ್ನು ಧಾರ್ಮಿಕ ದಾರ್ಶನಿಕ ದೀಪ್ತಿತ್ವವನ್ನು ವಿಶ್ವ ಶಕ್ತಿತ್ವವನ್ನು ನೈಜವಾಗಿ ನಿರೂಪಿಸುವನು. ಅದನ್ನು ದೇವತೆಗಳು ಕೇಳಿದರು, ಆತನನ್ನು ಕಂಡರು; ಕಂಡು ಕಡು ಸಂತೋಷದಿಂದ ಧ್ವನಿಯೆತ್ತಿ ಸ್ತುತಿಸುವರು. "ತೇ ದೇವಾ ರುದ್ರಂ ಅಧ್ಯಾಯನ್, ತತೋ ದೇವಾ ಊರ್ಧ್ವ ಬಾಹವೋ ರುದ್ರಂ ಸ್ತುವಂತಿ।" ಅವರ ಹಿಗ್ಗು ಬುಗ್ಗೆಯಾಗಿ ರುದ್ರನನ್ನು ಅಧ್ಯಯನಿಸಿ ಬಗೆದುಂಬಿ ತಮ್ಮ ನೀಳಾದ ಬಾಹುಗಳನ್ನು ಮೇಲಕ್ಕೆತ್ತಿ ಬಗೆ ಬಗೆಯಾಗಿ ಹೀಗೆ ಬಣ್ಣಿಸುವರು:

"ಭೂಸ್ತೇ ಆದಿರ್ಮಧ್ಯಂ ಭುವಃ ಸ್ವಸ್ತೇ ಶೀರ್ಷಂ ವಿಶ್ವರೂಪೋಽಸಿ,
ಬ್ರಹ್ಮೈಕಸ್ತ್ವಂದ್ವಿಧಾತ್ರಿಧಾ ವೃದ್ಧಿಸ್ತ್ವಂಶಾಂತಿಸ್ತ್ವಂಪುಷ್ಟಿಸ್ತ್ವಂ;
ಹುತಮಹುತಂ ದತ್ತಮದತ್ತಂ ಸರ್ವಮಸರ್ವಂ ವಿಶ್ವಮವಿಶ್ವಂ
ಕೃತಮಕೃತಂ ಪರಮಪರಂ ಪರಾಯಣಂ ಚ ತ್ವಮ್॥"

ದೇವತೆಗಳ ಈ ಸ್ತುತಿಯಲ್ಲಿ ಶಬ್ದ ಶಬ್ದಕ್ಕೂ ವಾಕ್ಯ ವಾಕ್ಯಕ್ಕೂ ಅರ್ಥ ಬಾಹುಲ್ಯವಿದೆ; ಭಾವಗರ್ಭವಿದೆ. ಈ ಸ್ತುತಿ ರುದ್ರದೇವನ ಬರೀ ಧರ್ಮ ದರ್ಶನ ಗಳ ಮಾತಲ್ಲ, ಆತನ ಅನಂತ ಮಹಂತ ಶಕ್ತಿ ಯೋಗಕ್ಕೆ ಸತ್ಯ ಸಂಕೇತವಾಗಿದೆ. ಮಾತು ಮಾತನ್ನೂ ಚಿಂತನ ಮಾಡಿದಷ್ಟು ರುದ್ರ ವೃಷಭ ಶಕ್ತಿ ವೈಭವದ ವೈವಿಧ್ಯ ಭಾವಗಳು ಚಲುವಾಗಿ ಚಿಗುರೊಡೆಯುತ್ತವೆ. ಎಲೆ ಮೊಗ್ಗು ಹೂವು

ಹಣ್ಣುಗಳಾಗಿ ಅಂದ ಗಂಧ ರಸಗಳು ಹೊರಹೊಮ್ಮಿ ಕೊನೆಗೆ ಹೆಮ್ಮರವೆಲ್ಲ ಮೂಲ ಬಿತ್ತಾಗಿ ನಿಲ್ಲುತ್ತದೆ. ಸಾರ್ವಕಾಲಿಕವಾಗಿ ಸಲ್ಲುತ್ತದೆ. ಭೂ ಭುವಲ್ಲೋಕಾದಿ ವ್ಯಾಪ್ತಿತ್ವವನ್ನು ದೀಪ್ತಿತ್ವಗಳನ್ನು ಉಚ್ಚಮಟ್ಟದಲ್ಲಿ ಉಗ್ಗಡಿಸಲಾಗಿದೆ. ರುದ್ರನು ತನ್ನ ಲೋಕೋತ್ತರ ಸಾಧನೆಯಿಂದ ಪರಬ್ರಹ್ಮ ಲಿಂಗಸ್ವರೂಪನಾಗಿ ಒಬ್ಬನಾದರೂ ಆತನ ವ್ಯಕ್ತಿತ್ವದ ವಿಶ್ವವಿಕಾಸ ಪಥದಲ್ಲಿ 'ಲಿಂಗಮಧ್ಯೇ ಜಗತ್ ಸರ್ವಂ' ಎಂಬ ತಾತ್ತ್ವಿಕಾರ್ಥ ಭಾವಗಳಲ್ಲಿ ಎರಡಾಗಿ ಮೂರಾಗಿನೂರಾಗಿ ಸಾಸಿರಾಗಿ ವೃದ್ಧಿಗೊಂಡಿರುವನು. ಆದರೂ ಶಾಂತನು, ಪುಷ್ಟನು ಅರ್ಥಾತ್ ವೃಷಭನು; ಕೊರಗು ಮರಗುಗಳಿಗೆ ಒಳಗಾಗುವವನಲ್ಲ. ಕಂದಿ ಕುಂದುವನಲ್ಲ. ಹತ ತೇಜಸ್ಕನಲ್ಲ. ಸದಾ ಹೃಷ್ಟಿ ಪುಷ್ಟಿಗಳಿಂದಿರುವಾತನು. ಜಾಗತಿಕ ಹಿತಕ್ಕಾಗಿ ಏನೆಲ್ಲವನ್ನೂ ಮಾಡಬಲ್ಲೆ; ಏನೆಲ್ಲವೂ ಆಗಬಲ್ಲೆ. ರುದ್ರನೇ ನೀನು ಪರಾತ್ಪರ ಪುರಾಣನು—ಎಂದು ಪರಿಣಾಮಕಾರಿಯಾಗಿ ಪರಮಾನುಭೂತಿಯಿಂದ ರುದ್ರಭಕ್ತರಾಗಿ—ಶರಣರಾಗಿ ಸ್ತುತಿಸುವರು. ಇದರ ವಿವರವನ್ನು ಇನ್ನೂ ಮಿಗಿಲಾಗಿ ಮನದಟ್ಟಾಗಿಸಿಕೊಳ್ಳುವ ಮನಸ್ಸಿದ್ದವರು ನಾವೇ ಬರೆದು ರೂಪಿಸಿದ "ರುದ್ರದೇವನ ವಿಶ್ವವೈಭವ ಕ್ರಾಂತಿ" ಎಂಬ ಕೃತಿಯನ್ನು ಓದಿ ನೋಡಬೇಕು.

"ಅಥ ಕಸ್ಮಾದುಚ್ಯತೇ ರುದ್ರಃ ? ಯಸ್ಮಾದ್ ಋಷಿಭಿರ್–
ನಾನ್ಯೈರ್ ಭಕ್ತೈರ್–ದ್ರುತಮಸ್ಯ ರೂಪಮುಪಲಭ್ಯತೇ;
ತಸ್ಮಾದುಚ್ಯತೇ ರುದ್ರಃ।"

ಋಷಿಗಳು ಹಾಗೂ ಉಪಾಸಕರಾದ ಭಕ್ತರು ಧರ್ಮಿಯಾದ ರುದ್ರದೇವನ ದರ್ಶನ ಮಾತ್ರದಿಂದ ಬೇಗನೆ ರುದ್ರ ರೂಪರಾಗುವುದರಿಂದ ರುದ್ರನೆಂಬ ಮಹಿಮಾನ್ವಿತ ಪಾವನನಾಮ ಬಂದಿದೆ. ಆತನ ವೃಷಭತ್ವಕ್ಕೆ ಅಂದರೆ ಶ್ರೇಷ್ಠತೆಗೆ ಇನ್ನೇನಾಗಬೇಕು. ವೃಷಭ ಧರ್ಮಕ್ಕೆ ದರ್ಶನಕ್ಕೆ ಭದ್ರ ಭಂಡಾರವಾಗಿದ್ದನು ರುದ್ರದೇವನು. ಇದರಿಂದಾಗಿ ರುದ್ರನು ಋಷಿ ವೃಷಭ—ಕವಿ ವೃಷಭ—ಶಿವಾಚಾರ ವೃಷಭ—ಎಂದೆನಿಸಿದ್ದನು.

ಪಶುಪಾಲನ, ಎತ್ತಿಗೆ ವೃಷಭ ನಾಮಕರಣ !

ಶ್ರೀ ರುದ್ರದೇವನದು ವೈದ್ಯಕಾಯಕ. ಜೀವನಕ್ಕಾಗಿ ಆತನು ಆ ಕಾಯಕವನ್ನು ಕೈಕೊಂಡಿರಲಿಲ್ಲ. ಜನರ ಕಲ್ಯಾಣಕ್ಕಾಗಿ ಕೈಕೊಂಡಿದ್ದನು. ಹಿರಣ್ಯಪತಿಯಾದ ಶ್ರೀರುದ್ರದೇವನು ಜೀವನ ನಿರ್ವಹಣಕ್ಕಾಗಿ ದುಡಿಯಬೇಕಾಗಿರಲಿಲ್ಲ;

ದುಡ್ಡಿಗಾಗಿ ವೈದ್ಯವೃತ್ತಿಯನ್ನು ಕೈಕೊಂಡಾತನಲ್ಲ. ಎಲ್ಲರೂ ಬೇನೆ ಬೇಸರಿಕೆಗಳಿಲ್ಲದೆ ಬಾಳಬೇಕೆಂಬುದೇ ಆತನ ಧ್ಯೇಯ. ಉಪಕಾರವೇ ಆತನ ಉದ್ದೇಶ. ವೈದ್ಯಕಾರ್ಯವನ್ನು ಅಷ್ಟೋ ಇಷ್ಟೋ ಮಾಡಿ ಬಿಡುತ್ತಿರಲಿಲ್ಲ. ಚಿಕಿತ್ಸೆಯನ್ನು ತಲಸ್ಪರ್ಶಿಯಾಗಿ ಕಂಡುಕೊಂಡಿದ್ದನು. ಎಂತಹ ರೋಗಗಳನ್ನಾದರೂ ವಾಸಿ ಮಾಡುತ್ತಿದ್ದನು. ಇಷ್ಟೇ ಅಲ್ಲ ಮುಪ್ಪೂ ಒಂದು ರೋಗ; ಅದನ್ನೂ ಬಾರದಂತೆ ಮಾಡುವ ಮದ್ದನ್ನು ಕಂಡುಕೊಂಡಿದ್ದನು. ಆತನು ಒಂದಲ್ಲ ಎರಡಲ್ಲ ನೂರಲ್ಲ, ಸಾವಿರಾರು ಔಷಧಿಗಳನ್ನು ಮಾಡಿರಿಸಿಕೊಂಡಿದ್ದನು. ಇದಕ್ಕಾಗಿ ಅಂದರೆ ನಾರು ಬೇರುಗಳಿಗಾಗಿ ಗಿಡಮೂಲಿಕೆಗಳಿಗಾಗಿ ಯಾವಾಗಲೂ ಬೆಟ್ಟಗುಡ್ಡಗಳಲ್ಲಿ ಸುಳಿದಾಡುತ್ತಿದ್ದನು. ಎಲ್ಲ ವನೌಷಧಿಗಳ ಪರಿಚಯ-ಪರಿಜ್ಞಾನಗಳು ಆತನಿಗಿದ್ದವು. ಬೇಸರವಿಲ್ಲದೆ ಬಿಡುವಿಲ್ಲದೆ ವನಗಳಲ್ಲಿ ಸಂಚರಿಸುತ್ತಿದ್ದನು. ಹೀಗೆ ಅರಣ್ಯಗಳಲ್ಲಿ ಹೆಚ್ಚು ವೇಳೆ ಕಳೆಯುತ್ತಿದ್ದನು. ಆಗ ಆ ಕಾಡಮೃಗಗಳಲ್ಲಿ ಮೂರು ಬಗೆಯ ಪ್ರಾಣಿಗಳನ್ನು ಪರಿಗಣಿಸಿ ವಿಂಗಡಿಸಿದನು. ಹೊಟ್ಟೆಪಾಡಿಗಾಗಿ ದುರ್ಬಲ ಪ್ರಾಣಿಗಳನ್ನು ತಾವೇ ಕೊಂದು, ಮಾಂಸ ತಿಂದು ಬದುಕುವ ಹಿಂಸ್ರಪ್ರಾಣಿಗಳದು ಗುಂಪು. ಇವು ಕೊಂದು ತಿಂದು ಹೋದ ಬಳಿಕ ಉಳಿದ ಮಾಂಸವನ್ನು ತಿಂದು ಬದುಕುವ ಪ್ರಾಣಿಗಳದು ಇನ್ನೊಂದು ಗುಂಪು. ಇವುಗಳಿಗೆ ಹಿಂಸಿಸುವ ಸ್ವಭಾವವಿರುವುದಿಲ್ಲ. ಇನ್ನು ಕೊಲ್ಲುವುದೂ ಇಲ್ಲ, ಮಾಂಸವನ್ನು ತಿನ್ನುವುದೂ ಇಲ್ಲ; ನಿಸರ್ಗವಾಗಿರುವ ಹುಲ್ಲು ಸೊಪ್ಪುಗಳನ್ನು ಮೆಯ್ದು ಬಾಳುವ ಪ್ರಾಣಿಗಳದು ಮತ್ತೊಂದು ಗುಂಪು. ಈ ಗುಂಪಿನ ಸಾತ್ವಿಕ ಪ್ರಾಣಿಗಳೇ ಹಸುಗಳು. ವನಚರ ಪ್ರಾಣಿಗಳ ಮೇಲೆಲ್ಲ ಒಂದೇ ದಯೆ ಒಂದೇ ಅಂತಃಕರಣವುಳ್ಳ ಮತ್ತು ಅಹಿಂಸೆಯ ಸಿದ್ಧಿಯುಳ್ಳ ರುದ್ರದೇವನು ಗೋವುಗಳ ಮೇಲೆ ಹೆಚ್ಚಿನ ಗಮನವನ್ನು ಹರಿಸುವನು. ಇವುಗಳಿಂದ ಜನಜೀವನ ಬಾಳಿಗೆ ಪ್ರಯೋಜನವಾಗಬಹುದೆಂದ ಚಿಂತಿಸುತ್ತ, ಕೆಲಕಾಲ ಕಳೆದ ಬಳಿಕ ಹೋರಿಕರುವನ್ನು ಈನ್ದ ಹಸುವನ್ನು ಹಿಡಿದು ತರುವನು. ಹಸುವಿನ ಹಾಲಿನಲ್ಲಿ ಔಷಧಿಗಳನ್ನು ಕೊಡಮಾಡುವನು. ಬೇರೆ ಅನುಪಾನಗಳಿಗಿಂತ ಹಸುಹಾಲಿನ ಅನುಪಾನದಲ್ಲಿ ಬೇನೆಗಳು ಬೇಗ ವಾಸಿಯಾಗ ಹತ್ತುವವು. ಕುತೂಹಲ ಕೆರಳುವುದು. ಆಹಾರವಾಗಿ ಬಳಸತೊಡಗುವನು. ಜೀವ ಸತ್ವ ಹೆಚ್ಚಿರುವುದನ್ನು ಮನಗಂಡನು. ಬಳಿಕ ಹೆಚ್ಚೆಚ್ಚಾಗಿ ಹಸುಗಳನ್ನು ಸಾಕತೊಡಗುವನು. ಗಂಡುಗರು ಬೆಳೆದಂತೆ ಬಲಶಾಲಿಯಾಗಿರುವಿಕೆಯನ್ನೂ ಸಾತ್ವಿಕವಾಗಿರುವಿಕೆಯನ್ನೂ

ಕಂಡು ಅದಕ್ಕೆ ಆರ್ಯರು ತನಗಿತ್ತ ಉಪನಾಮ (ಪ್ರಶಸ್ತಿ) ವನ್ನು ಆಲೋಚಿಸಿ ಅಕ್ಕರೆಗಾಗಿ ಇರಿಸುವನು. ವೃಷಭ ವೃಷಭ ಎಂದೆ ನಿಚ್ಚ ನಿಚ್ಚ ಕರೆಯುತೊಡಗುವನು. ಇದರಿಂದಾಗಿ ಎತ್ತುಗಳಿಗೆ ವೃಷಭವೆಂಬ ಹೆಸರೇ ಪ್ರಸಿದ್ಧಿಗೆ ಬರುವುದು.

ಬರಬರುತ್ತ ರುದ್ರದೇವನು ಸಾವಿರಾರು ಹಸುಗಳನ್ನು ಸಾಕುವನು. ಅವುಗಳಿಂದ ಹುಟ್ಟಿದ ಹೋರಿಗಳನ್ನು ಅಂದರೆ ರುದ್ರದೇವ ನಾಮಕರಣ ಮಾಡಿರುವಂತೆ ವೃಷಭಗಳನ್ನು ವ್ಯರ್ಥವಾಗಿ ಇರಿಸಿಕೊಂಡು ಪಾಲನಮಾಡುವುದಕ್ಕೆ ಆತನ ಮನಸ್ಸೊಪ್ಪದಾಯಿತು. ಯೋಚಿಸಿ ಬೇಸಾಯಕ್ಕೆ ಯೋಜಿಸುವನು. ಅಲ್ಲಿಂದ ಬೇಸಾಯ ಮೊದಲಾಗುವುದು. ಬರಬರುತ್ತ ವೃಷಭ ಬೇಸಾಯ ಭಾರತದಲ್ಲೆಲ್ಲಾ ಹಬ್ಬುಗೆಯಾಗುವುದು.

ವೃಷಭ ಕೃಷಿಯಿಂದ ನಮಗೆ ಆಹಾರವೊದಗುವಂತಾಯ್ತೆಂದು ಬಗೆದು ಜನರು ಸಿಪ್ಸ್ತೆಯಿಂದ ವೃಷಭವನ್ನು ದೇವಭಾವದಿಂದ ಕಾಣತೊಡಗುವರು. ಕಾಲಕ್ರಮದಲ್ಲಿ ವೃಷಭಗಳ ಶಿಲಾಮೂರ್ತಿಗಳನ್ನು ಮಾಡಿಸಿ, ಮಂದಿರಗಳನ್ನು ಕಟ್ಟಿಸಿ ಅದರಲ್ಲಿ ಪ್ರತಿಷ್ಠಾಪನ ಮಾಡಿಸಿ ಪೂಜಿಸಲು ಪ್ರಾರಂಭಿಸುವರು. ಒಬ್ಬರು ಮಾಡುವುದನ್ನು ನೋಡಿ ಇನ್ನೊಬ್ಬರು ಮತ್ತೊಬ್ಬರು ಮಾಡತೊಡಗಿ ಭಾರತಾದ್ಯಂತ ವೃಷಭಾರಾಧನೆ ಪ್ರಾರಂಭವಾಗುವುದು. ವೃಷಭಮಂದಿರಗಳನ್ನು ಬಸವಮಂದಿರಗಳೆಂದು ಬಸವಗುಡಿಗಳೆಂದು ಹೇಳುವುದು ವಿಚಾರ ರಮಣೀಯವಲ್ಲ; ಔಚಿತ್ಯವೂ ಅಲ್ಲ. ವೃಷಭದ ತದ್ಭವ ಬಸವ ಎಂದು ಅದೆಷ್ಟೇ ತಿಣಕಾಡಿ ಸಾಧಿಸಿದರೂ ಸಾಧಿಸುತ್ತಿದ್ದರೂ ಇದು ಸರಿಯಲ್ಲ. 'ವ-ಬಯೋರಭೇದಃ' ಎಂಬ ನೇಮವನ್ನು ಅಧಿಕರಿಸಿ ವೃಷಭ ಪದಕ್ಕೆ 'ಬಸವ' ಎಂಬ ತದ್ಭವವನ್ನು ಸಾಧಿಸುವರು. ಇದು ಎಷ್ಟಕ್ಕೂ ಸರಿಯಲ್ಲ. ನಿದರ್ಶನಕ್ಕಾಗಿ ವ್ಯಾಘ್ರ ಎಂಬೀ ಸಂಸ್ಕೃತ ಪದಕ್ಕೆ ಬಗ್ಗ ಎಂಬ ಕನ್ನಡ ತದ್ಭವವನ್ನು ಸಾಧಿಸಿದಂತೆ ಎಂದು ಹೇಳಬಹುದು. ಹೀಗೆ ಹೇಳಿದರೂ ಒಂದು ಕೊರತೆಯುಂಟಾಗುತ್ತದೆ. ವ್ಯಾಘ್ರವೆಂದರೂ ಬಗ್ಗವೆಂದರೂ ಹುಲಿ ಎಂಬ ಪ್ರಾಣಿಯನ್ನೇ ಬೋಧಿಸುತ್ತವೆಯಲ್ಲವೆ? ಬಗ್ಗವೆಂದರೆ ಮನುಷ್ಯನೆಂದಾಗುವುದೇ ಇಲ್ಲ. ಹೀಗೆ ವೃಷಭ ಎಂಬ ಸಂಸ್ಕೃತ ಪದದರ್ಥ ಎತ್ತು; ಅದರಿಂದ ತದ್ಭವವಾದ ಬಸವ ಎಂಬುದಕ್ಕೂ ಎತ್ತೆ ಎಂದು ಅರ್ಥವಿಸುವುದಾದರೆ ಯಾವ ಆಕ್ಷೇಪಣೆಯಿರುವುದಿಲ್ಲ. ಇಲ್ಲಿ ರೂಢಿ ಹೀಗಿರುವುದಿಲ್ಲ. ಬಸವ ಎಂದರೆ ಮನುಷ್ಯ ಅಥವಾ ಕಲ್ಯಾಣದಲ್ಲಿದ್ದ ಮಂತ್ರಿ ಮತ್ತು ಭಕ್ತಿ ಭಂಡಾರಿ ಬಸವಣ್ಣ ಎಂದು

ಅರ್ಥವಿಸುವುದರಲ್ಲಿ ಯಾವ ಉಚಿತತೆಯಿಲ್ಲೆಂಬುದು ನಿಸ್ಸಂದೇಹ!

ಈ ಇಪ್ಪತ್ತನೆಯ ಶತಮಾನದ ಬಸವಾಯತರು ಹಳ್ಳಿಹಳ್ಳಿಗೂ ಇರುವ ವೃಷಭ ಮಂದಿರಗಳೆಲ್ಲ ಕಲ್ಯಾಣದ ಬಸವಗುಡಿಗಳೆಂದು ಹೇಳತೊಡಗಿರುವುದು ಅಜ್ಞಾನಪೂರಿತ ದುರಭಿಮಾನ. ಭಾಷಾಭಿಜ್ಞತೆ ಶೂನ್ಯ. 'ವಿಜ್ಞಾನದೊಳಗಿನ ಅಜ್ಞಾನವಿದೇನೊ?' ಎಂದು ವಿಧಿಯಿಲ್ಲದೆ ಕೇಳಬೇಕಾಗುತ್ತದೆ.

ಕರ್ನಾಟಕದಲ್ಲೆಲ್ಲ ಇರುವ ವೃಷಭ ಮಂದಿರಗಳಿಗೆಲ್ಲ ಬಸವಗುಡಿಗಳೆಂದೇ ಹೇಳುತ್ತಿರುವರು ಕನ್ನಡಿಗರು. ಆಂಧ್ರದಲ್ಲಿ ಈ ಪೊರಪಾಟು ಮಾಡಿ ಹೇಳುವ ಪರಿಸ್ಥಿತಿಯಿಲ್ಲ. ವೃಷಭ ಮಂದಿರಗಳೆಂದೆ ಆಂಧ್ರರು ಹೇಳುವರು. ಬಸವ ಮಂದಿರಗಳೆಂದು ಹೇಳುವವರಿಗೆ "ಕಣ್ಣಿಲ್ಲದ ಕನ್ನಡಿಗರು" ಎಂದು ಹೀಯಾಳಿಸುವರು.

ಕನ್ನಡನಾಡಿನಲ್ಲಿ 'ಎತ್ತಿನ ಹಬ್ಬ' 'ಮಣ್ಣೆತ್ತಿನ ಹಬ್ಬ'ಗಳನ್ನು ಮುಂಗಾರು ಮಳೆಯ ಮುನ್ನ ಮಾಡುವರು. ಎತ್ತಿನ ಹಬ್ಬವನ್ನು ಗಂಡಸರು (ರೈತರು) ಊರಿನಲ್ಲಿ ಎತ್ತುಗಳನ್ನು ಮೈದೊಳೆದು ಕೊಂಬುಗಳಿಗೆ ಬಣ್ಣ ಬಳಿದು ಬೆನ್ನ ಮೇಲೆ ಬಣ್ಣ ಬಣ್ಣದ ಬಟ್ಟೆಯ ಗಲೀಪುಗಳನ್ನು ಹೊದಿಸಿ ಸಿಂಗರಿಸಿ ಬೀದಿಬೀದಿಗಳಲ್ಲಿ ವಾದ್ಯಗಳೊಡನೆ ಮೆರೆಸುವರು. ಓಟದ ಸ್ಪರ್ಧೆಯನ್ನು ಹೂಡುವರು. ಯಾವ ಬಣ್ಣದ ಎತ್ತು ಮುಂದಾದರೆ ಆ ಬಣ್ಣದ ಧಾನ್ಯಗಳ ಬೆಳೆ ಹುಲುಸಾಗುವುದು ಅಂದರೆ ಹೆಚ್ಚಾಗುವುದೆಂದು ಭಾವಿಸುವರು.

ಮಣ್ಣೆತ್ತಿನ ಹಬ್ಬವನ್ನು ಹೆಣ್ಣುಮಕ್ಕಳು ತಂತಮ್ಮ ಮನೆ ಮನೆಗಳಲ್ಲಿ ವಿಜೃಂಭಣೆಯಿಂದ ಆಚರಿಸುವರು ಇಡೀ ತಿಂಗಳೆಲ್ಲ. ಮಣ್ಣಿನ ಎತ್ತುಗಳನ್ನು ಮಾಡಿ, ಅಯ್ದು ಮಣ್ಣಿನ ಮಂಟಪಗಳನ್ನು ಒಂದರ ಮೇಲೊಂದು ಕಟ್ಟಿ, ಹಲವು ಬಣ್ಣದ ಹೂವುಗಳಿಂದ ಮಣ್ಣೆತ್ತುಗಳನ್ನು ಮಣ್ಣಮಂಟಪಗಳನ್ನು ಗೋಪುರಗಳನ್ನು ಸಿಂಗರಿಸಿ ಮಂಟಪಕ್ಕೊಂದು ಮಣ್ಣೆತ್ತನ್ನಿರಿಸಿ ಪರಿಪರಿಯಾಗಿ ಪೂಜಿಸುವರು. ದೀಪಗಳ ಹಚ್ಚಿ ಧೂಪವನ್ನು ಹಾಕುವರು ಪಕ್ವಾನ್ನಗಳನ್ನೆಡೆ ಮಾಡಿ ಹಾಡಿ ಹಾಡಿ ಹರುಷಿಸುವರು. ವರುಷದಲ್ಲಿ ಜ್ಯೇಷ್ಠ ಮಾಸ, ಆಷಾಢ ಮಾಸ, ಕಾರ್ತಿಕ ಮಾಸಗಳಲ್ಲಿ ಮಾಡುವರೆಂದು ಹೇಳಿದ್ದನ್ನು ಕೇಳಿದ್ದೇವೆ. ಮಣ್ಣೆತ್ತಿನ–ಮಣ್ಣು ಮಂಟಪಗಳ ಸಂಕೇತವೆಂದರೆ ಪೃಥ್ವಿತತ್ತ್ವದಿಂದ ಹೊಲಮನೆಗಳನ್ನು ಕಂಡೆವೆಂಬುದಾಗಿದೆ. ಮತ್ತು ರುದ್ರದೇವನನೂ ಗ್ರಹಿಸಿದ ಎತ್ತು (ವೃಷಭ) ಗಳಿಂದ ಧಾನ್ಯಗಳನ್ನು ಪಡೆದ ಪ್ರತೀಕಕ್ಕಾಗಿ ವೃಷಭ (ಎತ್ತುಗಳ) ಪೂಜೆ ಜನಜೀವನದಲ್ಲಿ ರುದ್ರಕಾಲದಿಂದ ಹಾಸು

ಹೊಕ್ಕಾಗಿ ಬಂದಿದೆ. ವೃಷಭಾಂಗದಲ್ಲಿ ರುದ್ರಗಣ-ದೇವಗಣರೆಲ್ಲ ಇರುವರೆಂಬ ಭಾವ ಅನಾದಿಕಾಲದಿಂದ ಬಂದಿದೆ. "ಯಶ್ಛಂದಸಾಂ ವೃಷಭೋ ವಿಶ್ವರೂಪಃ।" ರುದ್ರನಂತೆ ವೃಷಭನು ವಿಶ್ವರೂಪನೆಂದು ಋಗ್ವೇದವು ರುದ್ರವೃಷಭ ಇಬ್ಬರನ್ನೂ ಅಧಿಕರಿಸುವ ಧ್ವನಿಯಲ್ಲಿ ಶ್ಲೇಷೋಕ್ತಿಯಿಂದ ಸಂಸ್ತುತಿಸಿದೆ. ಇದಲ್ಲದೆ ವೃಷಭರುದ್ರರನ್ನು ಕುರಿತು ಋಗ್ವೇದ ಅನೇಕ ಋಕ್‌ಗಳಿಂದ ಬಣ್ಣಿಸಿ ಮನ್ನಿಸಿದೆ: ನಿದರ್ಶನಕ್ಕಾಗಿ ಇದೋ ಇಲ್ಲಿ 'ವೃಷಭಾಯ ರುದ್ರಸ್ಯ ನಾಮ....' -೨-೮೮-೮; "ಪ್ರಮಾ ಮಾಹಾತ್ಮ್ಯಂ ವೃಷಭಸ್ಯ...." ೧-೧೧; 'ಭೂರಿ ಕರ್ಮಣೇ ವೃಷಭಾಯ'-೧-೧೦೮-೬; 'ವೃಷಭಂ ಸುರೇತಸಃ ವಿಶ್ವಾಃ....'-೧-೧೬೦-೮; 'ಸಚಾಯುತ ಪ್ರಥಮಃ....ವೃಷಭಸ್ಯ'-೪-೧-೧೧; 'ವಿಶ್ವರೂಪೋ ವೃಷಭೋ ವದಂತಿ '-೮-೧೦೦-೧೧; 'ವೃಷಗಣಾ ಆಯಾಮಃ'-೯-೯೮-೮; 'ವೃಷಾಧರ್ಮಾಣಿದಧಿಷೇ' -೯-೬೪-೧; 'ಬೃಹಸ್ಪತಿ ವೃಷಭಃ'-೧೦-೯೨-೧೦; 'ಸೋಮಂ ವೃಷಭಾಯ'-೨-೧೬-೩; 'ವೃಷಭೋ ಮರುತ್ವಂ'-೨-೩೩-೬; 'ಇಂದ್ರತ್ವಾ ವೃಷಭಂ ವಯಂ'-೮-೪೦-೧; 'ಸದ್ಯೋಹ ಜಾತೋ ವೃಷಭಃ'-೩-೪೮-೧'; 'ಸಹಸ್ರ ಶೃಂಗೋ ವೃಷಭಃ'-೫-೧-೮;'ತ್ರಿಧಾತು ಶೃಂಗೋ ವೃಷಭೋ'-೬-೪೯-೬;'ಪರ್ಜನ್ಯ ವಾತಾವೃಷಭಾ'-೬-೪೯-೬;-ಇತ್ಯಾದಿಯಾಗಿ ಇನ್ನೂ ಅವೆಷ್ಟೋ ವೃಷಭಪದ ಪ್ರಯೋಗ ವೈಶಿಷ್ಟ್ಯವನ್ನು ಋಗ್ವೇದ ಒಂದರಲ್ಲಿಯೇ ನಾವು ಕಾಣುತ್ತೇವೆ. ಇದರಿಂದ ವೇದಕಾಲದಲ್ಲಿಯೇ ವೃಷಭ ಸಂಸ್ಕೃತಿಯ ವೈಭವ ವೈವಿಧ್ಯಮಯವಾಗಿದ್ದಿತೆಂಬುದು ವಿದಿತವಾಗುತ್ತದೆ. ರುದ್ರದೇವನು ಹಾಕಿಕೊಟ್ಟ ವೃಷಭ ವ್ಯವಸಾಯ ಭಾರತದಲ್ಲಿ ಭೂಯಿಷ್ಠವಾಗಿ ಇಂದಿಗೂ ನಡೆದು ಬರುತ್ತಿದೆ ರೈತರಿಂದ! ವೃಷಭ ಮಾಧ್ಯಮದಿಂದ ರುದ್ರನು ಮೊದಲು ಮಾಡಿದ ಭೂಮಿಯ ಸಾಗುವಳಿಯಿಂದ ಭಾರತವು ಸಸ್ಯಶಾಲಿನಿಯಾಗಿ ಶೋಭಿಸುವುದಲ್ಲದೆ ಭಾರತೀಯರ ಜೀವನಕ್ಕೆ ಬೇಕಾದ ಆಹಾರವು ಆಶ್ರಿತವಾಗುತ್ತಿದೆ. ಇಂದಿನ ಯಾಂತ್ರಿಕ ಯುಗದಲ್ಲಿಯೂ ವೃಷಭಗಳನ್ನು ಬಿಟ್ಟರೆ ಗತಿಯಿಲ್ಲ; ಸ್ಥಿತಿಯಿಲ್ಲ. ಬಂಡಿಗಳಿಂದ ಸರಕುಗಳನ್ನು ಸಾಗಿಸುವ ಸಾಧನ ಅಂದರೆ ವಾಹನ ವಿಶೇಷವಾಗಿ ವೃಷಭಗಳೇ ಆಗಿವೆ. ಅಷ್ಟೇ ಅಲ್ಲ, ಮಾನವರ ಮಾತಿರಲಿ ಶಿವನೂ ವೃಷಭ ವಾಹನನಾಗಿದ್ದಾನೆ. ದೊಡ್ಡವರ ಗದ್ದುಗೆಗಳ ಮೇಲೆಯೂ ದೇವಸ್ಥಾನಗಳ ದ್ವಾರಗಳ ಮೇಲೆಯೂ ವೃಷಭಗಳ ಶಿಲಾವಿಗ್ರಹಗಳು ಶೋಭಿಸುತ್ತವೆ ಮತ್ತು ವೃಷಭ ಶಿಲಾವಿಗ್ರಹಗಳನ್ನು ಮಂದಿರಗಳಲ್ಲಿ ಪ್ರತಿಷ್ಠಾಪಿಸಿ ಪೂಜಿಸುವ ಮನ್ನಿಸುವ ಭಾವಿಸುವ ಸಂಸ್ಕೃತಿ ಬಹುವಾಗಿಬೆಳೆದು ಬಂದಿದೆ.

ನಾಣ್ಯಗಳಲ್ಲಿ ಉಂಗುರಗಳಲ್ಲಿ ಪತ್ರಿಕೆಗಳಲ್ಲಿ ವೃಷಭ ವಿಗ್ರಹಗಳನ್ನು ಚಿತ್ರಿಸುವ ಸಂಪ್ರದಾಯ ವಿಶೇಷವಾಗಿ ಬೆಳೆದುಬಂದಿದೆ. ಗೂಳಿಗಳನ್ನು ಬಿಟ್ಟು ಸಾಮೂಹಿಕವಾಗಿ ಪೂಜಿಸುವ ಗೌರವಿಸುವ ಸತ್‌ಸಂಸ್ಕೃತಿ ಜನ ಜೀವನದಲ್ಲಿ ನೆಲೆ ನಿಂತಿದೆ. ಹೋರಿ ಮತ್ತು ಗೂಳಿಗಳ ಹಿಣಿಲುಗಳಿಗೆ ಹೆಚ್ಚುಗಾರಿಕೆ–ಮೆಚ್ಚುವಿಕೆಗಳು ಜನತೆಯಲ್ಲಿ ಮೂಡಿ ಬಂದಿವೆ. ರುದ್ರದೇವನಿಂದ ನಾಮಕರಣ ಪಡೆದು ಬಂದ ವೃಷಭ ಸಾಂಸ್ಕೃತಿಕ ವೈಭವ ವರ್ಣಿಸಲಳವಲ್ಲ.

ವೃಷಭ, ನಂದಿ, ಬಸವ;
(ಪರಿಶೀಲನ–ಪರಿಶೋಧನ)

ಈ ಸಂಬಂಧದ ದಿಸೆಯಲ್ಲಿ ವಿಚಾರವಿಲ್ಲದ ವಿವೇಚನವಿಲ್ಲದ ಮೂಢ ಸಂಪ್ರದಾಯ ಬೆಳದು ಬಂದಿದೆ. ಜನಗಳಲ್ಲಿ ಮಾತ್ರವಲ್ಲ, ಕವಿಗಳಲ್ಲಿ, ಕಲಾವಿದರಲ್ಲಿ, ವಿದ್ವಾಂಸರಲ್ಲಿ, ಪುರಾಣಿಕರಲ್ಲಿ, ಧಾರ್ಮಿಕರಲ್ಲಿ,ಭಾವಿಕರಲ್ಲಿ ಒಂದೇ ವಿಧವಾದ ಭಾವನೆ ಬೆಳದು ಬಂದಿದೆ. ವೃಷಭವೆ ನಂದಿ, ನಂದಿಯೆ ಬಸವ ಎಂಬ ಸಂಬಂಧವಿಲ್ಲದ ಸಂಬಂಧ ರೂಢಿಗತವಾಗಿ ಅವಾಸ್ತವವಾಗಿ ಬುದ್ಧಿ ಭಾವಗಳಲ್ಲಿ ಆರೂಢವಾಗಿ ನಿಂತಿದೆ; ಆಳವಾಗಿ ಇಳಿದಿದೆ. ಈ ದಿಸೆಯಲ್ಲಿ ಪರಿಶೀಲನ–ಪರಿಶೋಧನ ಸಾಗಿ ಬಂದಂತಿಲ್ಲ. ಚಾರಿತ್ರಕವಾಗಿ ಸಮೀಕ್ಷೆ ಸಾಗಿ ಬಂದಿಲ್ಲ. ಇದು ತುಂಬಾ ಗಂಭೀರವಾದ ವಿಷಯ. ಗಹನವಲ್ಲದಿದ್ದರೂ ಗಮನವಿಟ್ಟಿಲ್ಲ. ಇಟ್ಟಿದ್ದರೂ ಹೊರಗೆ ಹಾಕಿಲ್ಲ. ಹಾಕದಿರಲು ಏಕಪಕ್ಷೀಯ ಅರ್ಥವಿಲ್ಲದ ಅಭಿಮಾನ ಕಾರಣ!

ಪೂರ್ವ (ಆದಿ) ಕಾಲದಲ್ಲಿ ಶ್ರೀಶೈಲದಲ್ಲಿ ಶಿಲಾದ ಎಂಬ ಹೆಸರಿನ ಮುನಿಯಿದ್ದನು. ಮುನಿವಾಚ್ಯರು ರುದ್ರಸಂಪ್ರದಾಯದವರು. ಆ ಶಿಲಾದ ಮುನಿಗೆ ಪರ್ವತ, ನಂದಿ, ಭೃಮರಾಂಬೆ ಎಂಬ ಮೂವರು ಮಕ್ಕಳಿದ್ದರು. ಪರ್ವತ ಮತ್ತು ನಂದಿ ಇಬ್ಬರೂ ತಂದೆಯಂತೆ ತುಂಬಾ ಪ್ರಭಾವಶಾಲಿಗಳು. ಪರ್ವತನು ಉತ್ತರ ಭಾರತಕ್ಕೆ ಹೋಗಿ ಹಿಮಾಲಯದ ಒಂದು ಭಾಗಕ್ಕೆ ಒಡೆತನವನ್ನು ಸಾಧಿಸಿ ರಾಜನೆಂದೆನಿಸುವನು. ಮೇನಕೆ ಎಂಬ ಹೆಸರಿನ ಮಡದಿ ಇರುವಳು. ಪರ್ವತರಾಜನಿಗೆ ಅಪರ್ಣಾ, ಏಕಪರ್ಣಾ, ದ್ವಿಪರ್ಣಾ ಎಂದು ಮೂವರು ಹೆಣ್ಣುಮಕ್ಕಳಿರುವರು. ಇವರಲ್ಲಿ ಹಿರಿಯಳಾದ ಅಪರ್ಣೆಯನ್ನು ಕೈಲಾಸದ ಒಡೆಯನಾದ ಶಿವನಿಗೆ ಮದುವೆ ಮಾಡಿಕೊಡುವನು. ಆ ಅಪರ್ಣಾ

ದೇವಿಯನ್ನು ಪಾರ್ವತಿ ಎಂದು ಕರೆವರು. ಪರ್ವತನ ಮಗಳಾದ ಕಾರಣ ಪಾರ್ವತಿಯೆಂದೆನ್ನುವರು.

ಇತ್ತ ಶ್ರೀಶೈಲದಲ್ಲಿದ್ದ ಪರ್ವತನ ತಮ್ಮ ನಂದಿಯೂ ಪ್ರಭಾವಿಯಾಗಿ ಬಾಳಿದನು. ಶ್ರೀಶೈಲದ ಕಿಬ್ಬದಿಯಲ್ಲಿ ಅಥವಾ ಪರಿಸರದಲ್ಲಿ ತನ್ನದೇ ಆದ ಹೆಸರುಳ್ಳ 'ನಂದಿ' ಎಂಬ ಒಂದು ಊರನ್ನು ರೂಪಿಸಿ ಹೆಸರಾಗುವನು. ಶ್ರೀ ಶೈಸೂರ್ಯಸಿಂಹಾಸನ ಪೀಠಕ್ಕೆ ತುಂಬಾ ಭಕ್ತಿಭಾವದಿಂದ ನಡೆದುಕೊಳ್ಳುತ್ತಿದ್ದನು. ಪೀಠಾಧೀಶ್ವರರ ಕರುಣೆಗೆ ಪಾತ್ರನಾಗಿದ್ದನು. ಕಾಲಕಳೆದಂತೆ ಕಾರಣಾಂತರದಿಂದ ಅಣ್ಣ ಪರ್ವತರಾಜನಲ್ಲಿಗೆ ಬರುವನು. ನಂದಿಗೆ ಒಬ್ಬನೇ ಮಗನು. ಆತನ ಹೆಸರು–'ಬಸವ' ನೆಂದಿದ್ದಿತು. ಬಸವನು ತಂದೆಗಿಂತ ತುಂಬಾ ಪ್ರತಿಭಾಶಾಲಿಯಾಗಿದ್ದನು. ತಂದೆ ನಂದಿರೂಪಿಸಿದ 'ನಂದಿ' ಗ್ರಾಮವನ್ನು ಅಭಿವೃದ್ಧಿಗೊಳಿಸುವನು. ಹತ್ತಿರದ ಶ್ರೀಶೈಲ ಕ್ಷೇತ್ರಕ್ಕೆ ಪೀಠಕ್ಕೆ ಆಗಾಗ ಹೋಗಿ ಸೇವೆ ಮಾಡಿ ಬರುತ್ತಿದ್ದರು ತಂದೆಮಗನು. ತಂದೆ ನಂದಿಯು ಅಣ್ಣನ ಬಳಿಗೆ ಬರುವನೆಂದು ಹಿಂದೆ ಹೇಳಲಾಗಿದೆ. ಅಣ್ಣನ ಮಗಳು ಅಪರ್ಣೆಯ ಮದುವೆಯಲ್ಲಿ ಪಾಲ್ಗೊಳ್ಳಲು ಬಂದು ಅಣ್ಣನಲ್ಲಿಯೇ ನಿಂತಿದ್ದನು. ಅಳಿಯನಾದ ಶಿವನು ಅಪರ್ಣೆಯೊಡನೆ ಆಗಾಗ ಬಂದು ಹೋಗುತ್ತಿದ್ದನು. ಶಿವನ ಮೇಲೆ ನಂದಿಗೆ ಶ್ರದ್ಧೆ ಹುಟ್ಟುವುದು. ಹೇಗೂ ಬಾಂಧವ್ಯವೂ ಉಂಟಾಗಿದ್ದಿತು. ಇದರಿಂದ ನಂದಿಯು ತನ್ನ ಅಣ್ಣನ ಮಗಳನ್ನು ನೋಡಿಕೊಳ್ಳುವ ನೆಪದಲ್ಲಿ ಕೈಲಾಸದಲ್ಲಿಯೆ ನಿಂತು ಹೋಗುವನು. ಇಂತಿರುವುದನ್ನರಿಯದೆ ನಂದಿ ವೃಷಭಾವತಾರವೆಂದು, ಕಲ್ಯಾಣ ಬಸವಣ್ಣನಾಗಿ ಬರುವನೆಂದು ಕವಿಗಳು ಕಲ್ಪನೆಯು ಕಟ್ಟಿರುವರು. ಕಲಾವಿದರು ಅರ್ಧಮಾನವ ರೂಪನ್ನು ಕಲ್ಪಿಸಿ ಚಿತ್ರಿಸಿರುವರು. ನಂದಿಯು ಈ ಚಿತ್ರವಾಸ್ತವವಲ್ಲ.

ಶ್ರೀಶೈಲ ಶಿಲಾದ ಮುನಿಯು ಎರಡನೆಯ ಮಗ ನಂದಿ, ಮತ್ತು ನಂದಿಯು ಮಗ ಬಸವನು ಶ್ರೀಶೈಲದಲ್ಲಿದ್ದು ನಿಡುಗಾಲ ಉದಾರವಾಗಿ ಶ್ರೀಶೈಲದ ಸೂರ್ಯಸಿಂಹಾಸನ ಪೀಠಕ್ಕೆ ಉನ್ನತ ಸೇವೆ ಸಲ್ಲಿಸಿದ ನಿಮಿತ್ತ, ವೃಷಭವನ್ನು ಗೋತ್ರಪುರುಷನನ್ನಾಗಿ ಸ್ವೀಕರಿಸಿದಂತೆ ನಂದಿ ವಿಗ್ರಹ ರೂಪಪ್ರತೀಕ ತಂತ್ರದಲ್ಲಿ ನಾಡಿನಾದ್ಯಂತ ಪುಣ್ಯಕ್ಷೇತ್ರಗಳಲ್ಲಿ ಬೆಟ್ಟಗಳಲ್ಲಿ ಶಿಲಾಮೂರ್ತಿಗಳನ್ನು ತಮ್ಮ ಅಮೃತ ಹಸ್ತದಿಂದ ಪ್ರತಿಷ್ಠಿಸಿ ಅಲ್ಲಲ್ಲಿನ ಆ ಆ ಭಕ್ತರ ಸೇವೆಪೂಜೆಗಳು ಸಲ್ಲುವಂತೆ ಪೀಠಾಧೀಶ್ವರರಾದ ಜಗದ್ಗುರು 'ವೀರಶೈವಾಂಬುಧಿ ಚಂದ್ರ' ಚಂದ್ರಗುಂಡ ದೇಶಿಕೇಂದ್ರರು ಮಾಡುವರು. ಅಂತೆಯೇ ವೀರಶೈವ ಪ್ರವರ್ತಕನಾದ ವೀರೇಶ ಪ್ರತಿಮೆಗಳನ್ನು ಶಿಲ್ಪಿಗಳಿಂದ ಮಾಡಿಸಿ ನಾಡಿನಾದ್ಯಂತ

ಪ್ರತಿಷ್ಠಿಸಿರುವರು. ವೀರ ವೃಷಭ ನಂದಿ ಸಂಸ್ಕೃತಿಯನ್ನು ಪ್ರಸಾರ ಮಾಡಿರುವರು. ನಂದಿಯು ನಂದನನಾದ ಬಸವನ ಹೆಸರನ್ನು ತಮ್ಮ ಪೀಠದ ಮೇಲೆ ಬರುವವರಿಗೆಲ್ಲ ಇರಿಸಿ ಕಲ್ಯಾಣ ಬಸವಣ್ಣನಿಗೆ ಪೂರ್ವದಲ್ಲಿರುವ ಬಸವನೆಂಬ ವ್ಯಕ್ತಿಯ ನಾಮ ಮೌಲ್ಯವನ್ನು ಎತ್ತಿಹಿಡಿದಿರುವರು. ಆದಿಕಾಲದಿಂದ ಬಸವನೆಂಬ ಹೆಸರು ರೂಢಿಯಲ್ಲಿ ಬಂದಿದೆ. ಚಾರಿತ್ರಕವಾಗಿ ಪೂರ್ವಕಾಲದಿಂದಲೂ ಬಸವನೆಂಬ ಹೆಸರಿನವರು ಆಗುತ್ತ ಬಂದಿರುವರೆಂದು, ಈ ಇಪ್ಪತ್ತನೆಯ ಶತಮಾನದ 'ಶೀಲ ಶಶಿ' 'ಯೋಗ ರವಿ' 'ಭಾಷ್ಯಾಚಾರ್ಯ'ರೆಂದು ಹೆಸರಾಂತ ಗಿರಿಯಪುರದ ಷಟ್‌ಸ್ಥಲ ಚಕ್ರವರ್ತಿ ಸದಾಶಿವ ಶಿವಾಚಾರ್ಯರು ಆಗಾಗ ಪ್ರಸ್ತಾಪಿಸುತ್ತಿದ್ದರು. ಕೈವಲ್ಯೋಪನಿಷತ್ತಿಗೆ ವೀರಶೈವ ಸಿದ್ಧಾಂತಪರ "ಸಾದಾಶಿವ ಭಾಷ್ಯ" "ಶೈವ-ವೀರಶೈವ ಸಂಸ್ಕೃತಿ" "ಉದ್ಧರಣೆಯ ಸಾಹಿತ್ಯ" ಮೊದಲಾದ ಇಪ್ಪತ್ತಯ್ದು ಗ್ರಂಥಗಳ ಬರೆದು "ಶಿವಾದ್ವೈತ ತತ್ತ್ವ ಪ್ರಚಾರ ಸಮಿತಿ"ಯೊಂದನ್ನು ರಚಿಸಿ 'ಶ್ರೀಗುರುಕುಮಾರಾಶ್ರಮ' ವನ್ನು ಸ್ಥಾಪಿಸಿ ಯೋಗದಲ್ಲಿ ಶೀಲದಲ್ಲಿ ಶಿವಾಗಮಾನುಭೂತಿಯಲ್ಲಿ ಅರ್ಚನಾನುಷ್ಠಾನದಲ್ಲಿ ಅಪ್ರತಿಮರೆನಿಸಿ ಲಿಂಗೈಕ್ಯರಾಗಿ ಅಚ್ಚಳಿಯದೆ ಉಳಿದು ಆದರ್ಶರಾದ ಮಹಾನುಭಾವಿಗಳು; ಶ್ರೇಷ್ಠ ಶಿವಾಚಾರ್ಯರು. ಇವರು ರೂಢಿಯಾಗಿ ಬಂದಿರುವ ನಂದಿವಿಗ್ರಹಗಳನ್ನೊಪ್ಪುತ್ತಿರಲಿಲ್ಲ. ನಂದಿಯೆ ಬಸವನಾದನೆಂಬುದನ್ನೂ ಒಪ್ಪುತ್ತಿರಲಿಲ್ಲ. ಯಾವುದನ್ನೂ ಆಳವಾಗಿ ಆಲೋಚಿಸುತ್ತಿದ್ದರು. ವೃಷಭನೆಂದರೆ ಮನುಷ್ಯನೆಂದಾಗಲಿ, ಎತ್ತೆಂದಾಗಲಿ ಮೂಲಭೂತವಾಗಿ ಅರ್ಥವಿಲ್ಲ. ಧರ್ಮ ಪರಾಕ್ರಮ ಅಗ್ರಗಣ್ಯ ಇವು ವೃಷಭ ಪದದ ಮೂಲಭೂತ ಅರ್ಥಗಳು. ಈ ಅರ್ಥಗಳಲ್ಲಿ ಮೊಮ್ಮೊದಲು ರುದ್ರದೇವನಿಗೆ ಋಗ್ವೇದದಲ್ಲಿ ನಿರೂಪಿತವಾಗಿದೆ. ನಂದಿಯೆಂದರೆ ಅರ್ಧಮಾನವ ಅಥವಾ ರೂಢಿಯಲ್ಲಿರುವ ಹಸು ಅಥವ ಎತ್ತಿನ ಮೊಗವುಳ್ಳ ಚಿತ್ರ, ಮತ್ತು ಅಪರಶಿವನ ವಾಹನ ಎಂದು ಹೇಳುವುದು ಎಷ್ಟಕ್ಕೂ ಸರಿಯಲ್ಲ ನಂದಿಯೆಂಬುದಕ್ಕೆ ಧ್ವಜ ಎಂಬ ಪದವನ್ನು ಸೇರಿಸಿ, ನಂದಿಧ್ವಜವೆಂದು ಹೇಳುವುದು ಒಪ್ಪತಕ್ಕುದಲ್ಲ. ನಂದಿಕೋಲವೆಂದು ಹೇಳಬೇಕಲ್ಲದೆ ನಂದಿಧ್ವಜವೆಂದು ಹೇಳುವುದು ಸರಿಯಲ್ಲ. ನಂದಿಕೋಲ ನಂದ ಕಂಬ ಎಂಬುದು ಹೇಳುವ ವಾಡಿಕೆ ಹೇಗೆ ಬಂದಿದೆಯೊ? ಇದು ಪರಿಶೀಲಿಸಬೇಕಾದ ವಿಷಯವಾಗಿದೆ. ಬಸವನೆಂಬುದು ವೃಷಭದ ತದ್ಭವವೆಂಬುದು ಅದು ಹೇಗೆ ರೂಢಿಯಲ್ಲಿ ಬಂದಿತೋ? ಇದು ಅರ್ಥವಾಗದ ವಿಚಾರ. ಪ್ರಸಿದ್ಧ ಮತ್ತು ಪ್ರಬುದ್ಧ ಕವಿಯಾದ ಷಡಕ್ಷರನು ತನ್ನ ಕಾವ್ಯಕ್ಕೆ ವೃಷಭೇಂದ್ರ ವಿಜಯ ಎಂಬ ಹೆಸರನ್ನಿರಿಸಿದ ಔಚಿತ್ಯವೇನೆಂಬುದು ಚಿಂತನೀಯ.

ಇದಕ್ಕೂ ಮೊದಲು ಪಾಲ್ಕುರಿಕೆ ಸೋಮನಾಥ ಕವಿಯು 'ವೃಷಾಧಿಪ' ಶತಕವನ್ನಿಲ್ಲಿ ಸ್ಮರಿಸಿಕೊಳ್ಳಬೇಕು. 'ನಂದಯತೀತಿ ನಂದಿಃ' ತಂದೆ ತಾಯಿಗಳನ್ನು ಸಾಮಾಜಿಕರನ್ನು ಸಂತೋಷ ಪಡಿಸುವುದರಿಂದ ನಂದಿ ನಾಮ ಬಂದಿದೆ. ಇದನ್ನು ಸಾರ್ಥಕಪಡಿಸಿದ್ದಾನೆ ಶಿಲಾದ ಮುನಿಯ ಮಗನು. ಅವನು ಶಿವನಿಗೆ ಸೇವಕನಲ್ಲದೆ ವಾಹಕನಾಗಿರಲಿಲ್ಲ. "ವೃಷಧ್ವಜ ವೃಷಾರೂಢ ವಿರೂಪಾಕ್ಷ ವಿಷಾದನ। ನ ತೇಕುರ್ವಂತಿಕಿಂ ಸರ್ವೇಲಿಂಗಧಾರಣಮೀಶ್ವರ।" ಪಾರಮೇಶ್ವರಾಗಮದಲ್ಲಿ ಶಿವನು ವೃಷ (ಭ) ವಾಹನನೇ ಹೊರತು ನಂದಿವಾಹನನಲ್ಲ. ಈ ಬಗೆಗೆ ಇತ್ತೀಚಿನ ಬರೆಹಗಾರರು ಅಪಾರ್ಥಮಾಡುತ್ತಿದ್ದಾರೆ. ನಂದಿ ಮಾನವ ರೂಪವುಳ್ಳವನೇ ಹೊರತು; ಅರ್ಧಮಾನವನಲ್ಲ.

ವೃಷಭ–ವೃಷಭೇಶ್ವರ

ಇವೆರಡರ ವಾಸ್ತವ ವಿವೇಚನವಿಲ್ಲದೆ ಕಾಲಾಂತರದಲ್ಲಿ ಎರಡೂ ಒಂದೇ ಎಂಬ ಭಾವನೆ ಬೆಳದು ಬಂದಿದೆ ಭಾರತದಲ್ಲಿ! ವಾಸ್ತವವಾಗಿ ವೃಷಭ ಬೇರೆ, ವೃಷಭೇಶ್ವರ ಬೇರೆ. ಹಿಂದೆ ಹೇಳಿದಂತೆ ವೃಷಭ ರುದ್ರದೇವನು ಹೆಸರಿಟ್ಟ ಎತ್ತು. ವೃಷಭೇಶ್ವರವೆಂದರೆ ತಾನು ಸಾಕಿ ಸಲಹಿದ ವೃಷಭಕ್ಕೆ ಒಡೆಯನಾದ ರುದ್ರನು.

ಕೃಷಿಕಾಯಕಕ್ಕೆ ಚೈತನ್ಯವಾಗಿರುವ ವೃಷಭ (ಎತ್ತು)ಗಳಿಂದ ಆಹಾರ ದೊರಗಿ ಭಾರತೀಯರ ಬಾಳು ಬದುಕು ರೂಪುಗೊಳ್ಳುತ್ತಿರುವುದರ ಕೃತಜ್ಞತೆಗಾಗಿ ವೃಷಭ (ಎತ್ತು) ವಿಗ್ರಹಗಳನ್ನು ಶಿಲ್ಪಿಗಳಿಂದ ಸುಂದರವಾಗಿ ರೂಪಿಸಿ, ಮಂದಿರಗಳನ್ನು ಕಟ್ಟಿ, ಪ್ರತಿಷ್ಠಿಸಿ ಆರಾಧಿಸುವ ಪರಂಪರೆ ಬೆಳದು ಬರುವುದು. ಇವು ಕೇವಲ ವೃಷಭ ಮಂದಿರಗಳು. ಇದನ್ನು ಕಂಡು ಕೆಲವರು ಬುದ್ಧಿವಂತರು ವೃಷಭಾರಾಧನೆಯೇನೋ ಸರಿಯೆ! ಆದರೆ ಆ ವೃಷಭಗಳನ್ನಿತ್ತ ರುದ್ರದೇವನನ್ನು ಆರಾಧಿಸದಿದ್ದರೆ, ಮೂಗುಕೊಟ್ಟ ದೇವರನ್ನು ಮರೆತು ಮೂಗುತಿ ಕೊಟ್ಟ ಅಚಾರಿಯನ್ನು ಅಂಗನೆ ನೆನೆದಂತಾಗುತ್ತದೆಂದು ಭಾವಿಸಿ ವೃಷಭೇಶ್ವರ ಪೂಜೆಯನ್ನು ಪ್ರಾರಂಭಿಸಲು ಪ್ರೇರೇಪಿಸಿದ ಫಲವಾಗಿ ವೃಷಭಕ್ಕೆ ಈಶ್ವರನೆನಿಸಿದ ರುದ್ರದೇವನನ್ನು 'ಲಿಂಗ'ವನ್ನಾಗಿಸಿ (ರುದ್ರೋ ಲಿಂಗಂ) ಗರ್ಭಗುಡಿಯಲ್ಲಿ ಸ್ಥಾಪಿಸಿ, ಎದುರಿನಲ್ಲಿ ವೃಷಭ ವಿಗ್ರಹವನ್ನಿರಿಸಿ

ಪೂಜಿಸಲು ಪ್ರಾರಂಭವಾಗುವುದು. ಇದರ ಫಲವಾಗಿ 'ವೃಷಭೇಶ್ವರ' ಪೂಜೆ ಮಾಡುವ ಸಂಸ್ಕೃತಿ ಬೆಳೆದುಬಂದಿದೆ.

"ರುದ್ರೋ ಲಿಂಗಮುಮಾಪೀಠಂ ತಸ್ಮೈ ತಸ್ಯೈ ನಮೋನಮಃ।
ಸರ್ವದೇವಾತ್ಮಕಂ ರುದ್ರಂ ನಮಸ್ಕುರ್ಯಾತ್ ನಿರಂತರಂ॥"

—ರುದ್ರಹೃದಯೋಪನಿಷತ್

"ರುದ್ರತತ್ತ್ವ ಲಿಂಗಮೂರ್ತಿಯಾಗಿ,
ಈಶ್ವರತತ್ತ್ವ ಶರಣಮೂರ್ತಿಯಾಗಿ;
ಸದಾಶಿವತತ್ತ್ವ ಐಕ್ಯಕೂಟಸ್ಥನಾಗಿ,
ನಾಮರೂಪು ಭಾವವಳಿದಲ್ಲಿ ಪರಶಿವಮೂರ್ತಿ
ಪರಾಪರದೊಳಗಾಯಿತ್ತು......"

—ಮೋಳಿಗೆ ಮಾರಯ್ಯ

"ಅರ್ಥ ಪ್ರಾಣಾಭಿಮಾನದ ಮೇಲೆ ಬಂದಡೂ ಬರಲಿ,
ವ್ರತಹೀನವ ನೆನೆಯಲಾಗದು;
ನೋಡಲು ನುಡಿಸಲು ಎಂತೂ ಆಗದು,
ಹರಹರಾಪಾಪವಶದಿಂದ ನೋಡಿದಡೆ,
ರುದ್ರಜಪ–ಮಾಹೇಶ್ವರಾರಾಧನೆಯ ಮಾಳ್ಪುದು,
ಇಂತಲ್ಲದವರ ಉರಿಲಿಂಗಪೆದ್ದಿಗಳರಸ ನಕ್ಕುಕಳೆವನವ್ವಾ!"

—ಕಾಳವ್ವೆ

ಅನಾದಿಕಾಲದಲ್ಲಿ ಪ್ರತಿಮಾತಂತ್ರದಲ್ಲಿ ಪೂಜೆ ನಡೆಯುತ್ತಿರಲಿಲ್ಲ. ಪ್ರತೀಕ ತಂತ್ರದಲ್ಲಿ ಪೂಜೆ ಮಾಡುವ ರೂಢಿಯಿದ್ದಿತು. ಅದರಂತೆ ರುದ್ರದೇವನನ್ನು ಲಿಂಗ ಪ್ರತೀಕದಲ್ಲಿ ದೇವಸ್ಥಾನಗಳಲ್ಲಿ, ವೀರಶೈವರಾದರೆ ಕರಸ್ಥಲದಲ್ಲಿ ಪೂಜಿಸುತ್ತಿರುವುದಕ್ಕೆ ಪ್ರತ್ಯಕ್ಷ ಪ್ರಮಾಣಗಳಾಗಿವೆ. ವೃಷಭೇಶ್ವರ ದೇವಸ್ಥಾನಗಳು; ಮತ್ತು ರುದ್ರನಿಂದ ರೂಪಗೊಂಡ ಶಿವಾಚಾರದವರು. ಲಿಂಗಮೂರ್ತಿ ಸ್ಥಾವರ ವಿರಲಿ, ಕರಸ್ಥಲದ್ದೇ ಇರಲಿ ಅದು ರುದ್ರತತ್ತ್ವವೆಂದು ವೇದೋಪನಿಷತ್ತು ವಚನಗಳು ಉಗ್ಗಡಿಸಿವೆ.ಅಲ್ಲದೆ "ನಮೋರುದ್ರಾಯ" "ರುದ್ರಾಯನಮಃ" "ಓಂ ನಮೋ ಭಗವತೇ ರುದ್ರಾಯ" ಪಂಚಾಕ್ಷರ, ದಶಾಕ್ಷರ ಮಂತ್ರ ಜಪವಿಧಾನವೂ ಇದ್ದಿತು. ವೃಷಭರುದ್ರ ಸಂಸ್ಕೃತಿ ಜೀವನ ವ್ಯವಸಾಯಾದಿ ಪರಿಶ್ರಮಗಳಲ್ಲಿದ್ದಂತೆ, ಮಂತ್ರಜಪಾದಿರೂಪ ಆರಾಧನದಲ್ಲಿಯೂ ಇದ್ದಿತು. ವೃಷಭರುದ್ರನ ನಿಲವು ಇನಿತಕ್ಕೆ ತೀರಲಿಲ್ಲ: ಇನ್ನೂ ಆಲಿಸಿ!

"ರುದ್ರೋ ಬ್ರಹ್ಮೋಪನಿಷದೋ ಹಂಸಜ್ಯೋತಿಃ।

ಪಶುಪತಿಃ ಪ್ರಣವಸ್ತಾರಕಃ ಸ ಏವಂ ವೇದ॥"

—ಪಾಶುಪತಶ್ರುತಿ

"ಸ ಓಂಕಾರೋ ಯ ಓಂಕಾರಃ, ಸಃಪ್ರಣವೋಯಃ।
ಪ್ರಣವಃ, ಸ ಸರ್ವವ್ಯಾಪೀಯಃ ಸರ್ವವ್ಯಾಪೀ, ಸೋಽನಂತೋ
ಯೋಽನಂತಃ, ಸತ್ತಾರಂ ಯತ್ತಾರಂ, ತತ್‌ಸೂಕ್ಷ್ಮಂ ಯತ್
ಸೂಕ್ಷ್ಮಂ, ತಚ್ಛುಕ್ಲಂ ಯಚ್ಛುಕ್ಲಂ, ತದ್ವೈದ್ಯುತಂ ಯದ್ವೈದ್ಯುತಂ,
ತತ್ಪರಂ ಬ್ರಹ್ಮೇತಿ; ಸ ಏಕಃಯ ಏಕೋ ರುದ್ರಃ
ಸ ಈಶಾನಃ ಸ ಭಗವಾನ್ ಸ ಮಹೇಶ್ವರಃ ಸ ಮಹಾದೇವಃ॥...
ತದೇತತ್ ರುದ್ರಚರಿತಂ॥" —ಷಟ್‌ಸ್ಥಲ ಕೌಮುದಿ

ಇಂತಿದು ಆ ಮಹಾ ರುದ್ರದೇವನ ಮಂತ್ರಮಯ ಚರಿತ; ಅನಂತ ಚರಿತ; ವಿಶ್ವವ್ಯಾಪ್ತ ವಿಶ್ವರೂಪ ಚರಿತ; ಮತ್ತು ಸರ್ವಾಂಗೀಣ ಸಾಂಸ್ಕೃತಿಕ ಚರಿತ.

ವೃಷಭ (ಎತ್ತು) ವಿಗ್ರಹವ್ಯಾಪ್ತಿ ಬೇರೆ ಇನ್ನಾವ ವಿಗ್ರಹಗಳಿಗಿಲ್ಲ. ಬೃಹತ್ತಾದ ವೃಷಭ ವಿಗ್ರಹ ದೇವಾಲಯಗಳಿಗೆ ಕಡಿಮೆಯೇನಿಲ್ಲ. ಗೂಳೂರು ಶ್ರೀಶೈಲ ಪೀಠದಲ್ಲಿ, ಲೇಪಾಕ್ಷಿಯಲ್ಲಿ, ನಂದಿ ಬೆಟ್ಟದಲ್ಲಿ, ಬೆಂಗಳೂರಿನಲ್ಲಿ, ಹನುಮಕೊಂಡ, ... ಬೇರೆ ಎಲ್ಲ ದೇವವಿಗ್ರಹಗಳ ಎದುರಿನಲ್ಲಿ, ಗೋಪುರಗಳಲ್ಲಿ ಗಿರಿಶಿಖರಗಳಲ್ಲಿ ಗುದ್ದುಗೆಗಳಲ್ಲಿ, ದ್ವಾರಗಳಲ್ಲಿ, ಪ್ರಾಕಾರಗಳಲ್ಲಿ, ಸ್ತಂಭ-ದೀಪಸ್ತಂಭಗಳಲ್ಲಿ, ಶಾಸನಗಳಲ್ಲಿ, ಧ್ವಜಗಳಲ್ಲಿ, ಗಂಟೆಗಳ ಓಡಿಗಳಲ್ಲಿ, ಉಂಗುರಗಳಲ್ಲಿ, ಛಲವಾದಿ ಗಂಟೆ ಮುದ್ರಗಳಲ್ಲಿ ಹೆಚ್ಚೇನು? ಎಲ್ಲಿ ಅಂದರೆ ಅಲ್ಲಿ ವೃಷಭ ವಿಗ್ರಹಗಳನ್ನು ನೆಲೆಗೊಳಿಸುವ ಸಂಸ್ಕೃತಿ ಅಸದೃಶವಾಗಿ ಅಭಿವೃದ್ಧಿಸಿದೆ. ವೃಷಭ ಸಂಸ್ಕೃತಿ ರುದ್ರನಷ್ಟೇ ಪ್ರಾಚೀನವಾದುದು; ಪ್ರಭಾವ ಶಾಲಿಯಾದುದು. ಎಲ್ಲ ಮತೀಯರೂ ವೃಷಭ ಸಂಸ್ಕೃತಿಯನ್ನೊಪ್ಪಿಕೊಂಡು ಮನ್ನಿಸಿದ್ದಾರೆ. ಇದಕ್ಕೆ ಕಾರಣಕರ್ತರು ಶ್ರೀಶೈಲ ನಿಡುಮಾಗಡಿ ಮತ್ತು ನೀಡುಮಾಮಿಡಿ ಪೀಠಾಧೀಶ್ವರರು. ವೃಷಭವನ್ನು ಗಜಕರ್ಣ (ಗೋಕರ್ಣ) ಶಿವಾಚಾರ್ಯರು ಗೋತ್ರಪುರುಷನನ್ನಾಗಿ ಅಂಗೀಕರಿಸಿ ಅನುಗ್ರಹಿಸಿರುವರು ಮತ್ತು ತಮ್ಮ ಪೀಠಾಧಿಕಾರಿಗಳ ಗದ್ದುಗೆಗಳ ಮೇಲೆ ವೃಷಭ ವಿಗ್ರಹಗಳನ್ನು ಪ್ರತಿಷ್ಠಿಸುವ ಸಂಸ್ಕೃತಿಯನ್ನು ಪ್ರಪ್ರಥಮದಲ್ಲಿ ಪ್ರಯೋಗದಲ್ಲಿ ತಂದಿರುವರು. ಜೈನ, ಇಸ್ಲಾಂ ಧರ್ಮೀಯರ ಮೇಲೆಯೂ ವೃಷಭ ಸಂಸ್ಕೃತಿಯ ಪ್ರಭಾವವನ್ನು ಬೀರಿರುವರು. ವೃಷಭ ಸಂಸ್ಕೃತಿ ರುದ್ರದೇವನಲ್ಲಿ ಉಗಮಗೊಂಡು ಶ್ರೀಶೈಲಪೀಠ

ದಂತರಲ್ಲಿ ವಿಕಾಸವಾಗಿ ಪ್ರಗತಿಗೊಂಡಿತು.

ಶಿವಾಚಾರ್ಯರ ಅಥವಾ ಪಂಚಾಚಾರ್ಯರ ಪುರಾತನ ವೃಷಭ ಸಂಸ್ಕೃತಿಯನ್ನು ಉತ್ಪಾದಿಸಿ ಪ್ರವರ್ತಕರಾಗಿ ಅಭಿವೃದ್ಧಿಗೊಳಿಸಿದ ಕಾರಣ ಭಾರತೀಯರ ಜೀವನದಲ್ಲಿ ಒಂದು ಹೊಸಯುಗವೇ ಮೊದಲಾಗಿದೆ. ಸಕ್ರಿಯಾಶೀಲ ಜೀವನೋಪಾಯ ವ್ಯವಸಾಯಾದಿ ಉದ್ಯಮಗಳು ಉತ್ಪಾದಿತವಾಗಿ ಆಹಾರ ಆರ್ಥಿಕಗಳು ಅಭಿವೃದ್ಧಿಗೊಳ್ಳಲು ಮೂಲ ಕಾರಣವಾಯಿತು. ಗೋಸಂಪತ್ತು ವೃಷಭ ಸಂಸ್ಕೃತಿ ಬೆಳೆದು ಬೆಳಗಲು ಕಾರಣವಾಯಿತು. "ದ್ವಾಪರದಲ್ಲಿ ವೃಷಭನೆಂಬ ಭಕ್ತನ ಮಾಡುವಲ್ಲಿ ಅನಿಮಿಷನೆಂಬ ಜಂಗಮ........" ಎಂದು ಶಿವಾಚಾರ್ಯ ಚನ್ನಬಸವಣ್ಣನ ನಿರೂಪಣೆ!

ವೃಷಭ ಸಂಸ್ಕೃತಿಯ ಆದ್ಯಪ್ರವರ್ತಕರು ವೇದ್ಯ ಶಿವಾಚಾರ್ಯರು!

ವೃಷಭ ಸಂಸ್ಕೃತಿಯನ್ನು ಅನಾದಿಕಾಲದಲ್ಲಿ ಶ್ರೀರುದ್ರದೇವ ಶಿವಾಚಾರ್ಯನು ಉತ್ಪಾದಿಸಿದರೆ, ಆದಿಕಾಲದಲ್ಲಿ ಆದ್ಯರಾದ ಶಿವಾಚಾರ್ಯರು ಪ್ರಥಮ ಪ್ರವರ್ತಕರಾಗಿರುವರು; ಅಪ್ರತಿಮರಾಗಿರುವರು. ವೀರಶೈವಕ್ಕೆ ಮಾತ್ರವಲ್ಲ, ವಿಶ್ವಕ್ಕೆ ವಿಖ್ಯಾತವೂ ಜೀವನೋಪಕಾರಕವೂ ಧರ್ಮಾಶ್ರಯವೂ ಆದ ವೃಷಭ ಸಂಸ್ಕೃತಿಯನ್ನು ಆದಿಕಾಲದಿಂದಲೂ ಅಂಗೀಕರಿಸಿ ಆದರ್ಶವಾಗಿ ಅಸೀಮಿತವಾಗಿ ಅಭಿವೃದ್ಧಿಗೊಳಿಸಿದ ಅದ್ವಿತೀಯ ಕೀರ್ತಿ ಪಂಚಾಚಾರ್ಯರದು; ಅದರಲ್ಲಿಯೂ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರರಾದ ಗಜ (ಧೇನು) ಕರ್ಣ ಮತ್ತು ಪಂಡಿತಾಚಾರ್ಯರು ಅಲ್ಲದೆ ಸದ್ಧರ್ಮಸಿಂಹಾಸನಾಧೀಶ್ವರರಾದ ದಾರುಕ ಮತ್ತು ಮರುಳಾರಾಧ್ಯರು ಪ್ರಮುಖರು; ಪ್ರಶಂಸನೀಯರು, ಮತ್ತು ಉಳಿದ ಮೂವರು ಆಚಾರ್ಯರು ತಂತಮ್ಮ ಗೋತ್ರಗಳಿಗನುಸರಿಸಿ ಬಲ, ಜ್ಞಾನ, ತ್ಯಾಗ, ಕಲೆಗಳಲ್ಲಿ ತಂತಮ್ಮ ಶಿಷ್ಯರನ್ನು ಕ್ರಿಯಾಶೀಲರನ್ನಾಗಿಸಿ ಮಾನವೀಯ ಸಂಸ್ಕೃತಿಯ ಪ್ರವರ್ತಕರಾಗಿರುವರು; ಪ್ರವರ ಕಾರಣರಾಗಿರುವರು. ಏನೆಲ್ಲ ಶ್ರೇಯೋಭಿವೃದ್ಧಿಯ ಕ್ರಿಯಾಚಾರ ಜ್ಞಾನಾಚಾರ ಭಾವಾಚಾರ ಧರ್ಮಾಚಾರಾದಿಗಳ ಪ್ರಬುದ್ಧ ಪ್ರವಾದಿಗಳಾಗಿರುವರು. ಸಚ್ಚಿತ್ ದೀಕ್ಷಾ ಸಂಸ್ಕಾರಗಳ ಆವಿಷ್ಕಾರಕ್ಕೆ ಪ್ರವರ್ತಕರಾಗಿರುವರು. ಆಚಾರ್ಯರು ಕರುಣಿಸುವ ದೀಕ್ಷಾಸಂಸ್ಕಾರ

ಗಳಿಂದ ಸರ್ವಾಂಗಗಳಲ್ಲಿ ಕಲೆಕಳೆಗಳು ಮುಮ್ಮೊಡಿ ಸರ್ವಾಂಗ ಸಕ್ರಿಯಾಶೀಲತೆ ಶ್ರದ್ಧೆ ನಿಷ್ಠೆ ಅವಧಾನ ಅನುಭವಶಾಲೀನತೆ ಶಿಷ್ಯಜನರಲ್ಲಿ ಸಂವೃದ್ಧಿಸುತ್ತದೆ. ಇದಕ್ಕೆಲ್ಲ ಕಾರಣ ಗೋತ್ರ ಪ್ರವರಗಳು.

"ನಂದೀ ಭೃಂಗೀ ಕಥಾ ವೀರೋ ವೃಷಭಃ ಸ್ಕಂದ ಏವ ಚ।
ಏಕಧೈವ ಮಯಾ ಸೃಷ್ಟಾಸ್ತಸ್ಮಾನ್ಮುಕ್ತಾಭವಂತಿ ತೇ॥
ಮತ್‌ಜ್ಞಾನಮೇವನಂದೀಸ್ಯಾತ್, ಭೃಂಗೀ ವೈರಾಗ್ಯಮೇವ ಚ।
ಪ್ರತಾಪೋ ವೀರಭದ್ರಃಸ್ಯಾತ್ ಸದ್ಧರ್ಮೋ ವೃಷಭಃ ಸ್ಮೃತಃ॥
ಕೀರ್ತಿಃ ಸ್ಕಂದ ಇತಿ ಪ್ರೋಕ್ತಃ ಪಂಚೈತೇ ಮತ್ ಸ್ವರೂಪಿಣಃ॥
ಮತ್‌ಸ್ವರೂಪಾಃ ಸಮುತ್ಪನ್ನಾಃ ಪಂಚಗೋತ್ರಾಧಿಕಾರಿಣಃ।
ದಾರುಕಃ ಶಂಕುಕರ್ಣಶ್ಚ ರೇಣುಕೋ ಧೇನುಕರ್ಣಕಃ।
ವಿಶ್ವಕರ್ಣಶ್ಚ ಪಂಚೈತೇ ಪಂಚಗೋತ್ರಸಮುದ್ಭವಾಃ॥........"

—ಪಾಶುಪತಾಗಮ

ನಂದಿ, ಭೃಂಗಿ, ವೀರ, ವೃಷಭ, ಸ್ಕಂದ ಇವರೈವರು ಗೋತ್ರ ಪುರುಷರು. ಅಪ್ರಾಕೃತ ಶಿವಸೃಷ್ಟಿಯಿಂದಾದವರು ನಿತ್ಯ ಮುಕ್ತರು. ಅವರಲ್ಲಿ ನಂದಿ ಶಿವಜ್ಞಾನಿ, ಭೃಂಗಿ ವಿರಾಗಿ ಮತ್ತು ಕಲಾಕಾರ, ವೀರಭದ್ರ ಪರಾಕ್ರಮಿ, ವೃಷಭ ಸದ್ಧರ್ಮಿ; ಸ್ಕಂದ ಯಶೋವಂತ, ಈ ಅಯ್ವರು ಶಿವಸ್ವರೂಪಿಗಳು ಪರಿವಿಡಿದು ನಂದಿಗೋತ್ರ ಜರುದಾರುಕರು, ಭೃಂಗಿ ಗೋತ್ರಜರು ಶಂಕುಕರ್ಣರು, ವೀರಗೋತ್ರಜರು ರೇಣುಕರು, ವೃಷಭಗೋತ್ರಜರು ಧೇನು (ಗಜ) ಕರ್ಣರು, ಸ್ಕಂದ ಗೋತ್ರಜರು ವಿಶ್ವಕರ್ಣರು. ಇವರೆಲ್ಲರೂ ಜಗದಾಚಾರ್ಯರು; ಜಗದ ಹಿತಕ್ಕಾಗಿ ಅವತರಿಸಿದವರು. ಲಿಂಗಧಾರಣ, ಲಿಂಗಾರ್ಚನ, ಲಿಂಗಾರ್ಪಣ, ಲಿಂಗಾಚಾರ, ಲಿಂಗಧ್ಯಾನ, ಲಿಂಗಾನುಭವ, ಲಿಂಗಾನಂದ, ಲಿಂಗಾಂಗ ಸಾಮರಸ್ಯಗಳನ್ನು ಜನತೆಗೆ ಬೋಧಿಸುವುದೇ ಜಗದಾಚಾರ್ಯರ ಮಹಾಮಣಿಹ.

"ಬೋಧಯಿತ್ವಾ ತು ಪಂಚಾನಾಮಾಚಾರ್ಯಾಣಾಂ ಸದಾಶಿವಃ।
ಯೈರ್ಯೈರ್ಮಂತ್ರೈರ್ದೀಕ್ಷಿತಾ ಯೇ ತೇಗುರೋರ್ಗೋತ್ರ ಸಮ್ಮತಾಃ॥
ಯೋಗ್ಯಾಸ್ತೇ ಗುರುಗೋತ್ರಾಣಾಮಿತಿ ಯೂಯಂ ಸ್ವಶಿಷ್ಯಕಾನ್॥
ಸ್ವಸ್ವಗೋತ್ರಾನುಸಾರೇಣ ದೀಕ್ಷಾಂಕುರುತ ತತ್ತ್ವತಃ॥

ಅವರವರ ಗೋತ್ರಸೂತ್ರಗಳನ್ನನುಸರಿಸಿ ಆ ಆ ಗುಣಕ್ರಿಯೆಗಳನ್ನು ಆಚಾರವಿಚಾರಗಳನ್ನು ಶಿಷ್ಯರಿಗೆ ಬೋಧಿಸಿ ಆ ಆ ಕ್ರಿಯಾನುಷ್ಠಾನಕ್ಕೆ ಪ್ರೇರ

ಯಿಸುವರು. ರುದ್ರಾಗಮ ವಿಧಿವಿಧಾನಗಳನ್ನು ಬೋಧಿಸುವರು. ವೀರಶೈವರಿಗೆ ವೇದಗಳಿಗಿಂತ ಆಗಮಗಳು ಪ್ರಧಾನಗಳು. ಆಗಮ ವಿಧಾನಗಳು ಶೀಘ್ರವಾಗಿ ಮುಕ್ತಿ ಪ್ರದಾಯಕಗಳ ತಾರತಮ್ಯವಿಲ್ಲದೆ ಬಂಧಮೋಚನ ಕಾರಣಗಳು. ಜೀವನದಲ್ಲಿ ಆಗಮ (ಶಬ್ದ) ಪ್ರಮಾಣಗಳೇ ಪ್ರಮಾಣಗಳು. ಅಂತೆಯೇ ಅವು ಸ್ವಯಪ್ರಮಾಣಗಳು, ರುದ್ರರೂಪಿತ ಆಗಮಗಳು ವೀರಶೈವರಿಗೆ ಅತ್ಯಂತ ಪ್ರಧಾನಗಳು. ವೇದಗಳಂತೆ ಇವು ಉಸಿರಿನಿಂದ (ನಾಸಿಕದಿಂದ) ಬಂದವುಗಳಲ್ಲ. ಅಂತೆಯೇ ಅವು ಮುಖದಿಂದ ಶಬ್ದಮಯವಾಗಿ ಬಂದವುಗಳಾದ್ದರಿಂದ ಅರ್ಥವತ್ತಾಗಿದ್ದು ಆಪ್ತ ಪ್ರಮಾಣಗಳಾಗಿವೆ. ನಿಗಮಗಳಂತೆ ಆಗಮಗಳಿಗೆ ತಾರತಮ್ಯಭಾವವಿಲ್ಲ. ಸರ್ವರಲ್ಲಿ ಶಿವತತ್ತ್ವಾಭಿವ್ಯಕ್ತಿಗೊಳಿಸಿ ಶ್ರೇಯೋಭ್ಯುದಯವನ್ನುಂಟು ಮಾಡುವುದೆ ಆಗಿದೆ. ಇದಕ್ಕಾಗಿ ಗುಣಧರ್ಮ ವಿರತಿ ಆತ್ಮಶಕ್ತಿ ಕೀರ್ತಿ ಸ್ವರೂಪರಾದ ನಂದಿ ಭೃಂಗಿ ವೀರ ವೃಷಭ ಸ್ಕಂದ ಚೇತನರು ಕಾರಣಕರ್ತರನ್ನಾಗಿ ಆಯ್ದುಕೊಂಡಿದ್ದಾರೆ. ಇಲ್ಲಿದೆ ಶಿವಾಚಾರ್ಯರ ದಿವ್ಯ ದೃಷ್ಟಿ; ಭಾವ್ಯ ಮನೋಭಾವ! ಈ ಪಂಚಗೋತ್ರ ಪುರುಷರಲ್ಲಿ ನಂದಿ, ವೃಷಭರು ಭಿನ್ನರೆಂಬುದು ಸುಸ್ಪಷ್ಟ, ಅಂತೆಯೇ ಪುರುಷರು ಎಂಬುದೂ ಸುಸ್ಪಷ್ಟ. ನಂದಿ ಶಿಲಾದನ ಮಗ. ಭೃಂಗಿ ಪುರಾತನ ಪ್ರಮಥರಲ್ಲಿ ಅಂದರೆ ಶಿವಗಣರಲ್ಲಿ ಒಬ್ಬ; ಈತನು ಯಾರ ಮಗ ಎಂಬುದು ತಿಳಿಯದು. ವೀರ–ರುದ್ರಪುತ್ರ, ವೃಷಭ–ರುದ್ರ; (ಈತ ಮಹಾದೇವ ಪುತ್ರ). ಸ್ಕಂದ ಅಪರಶಿವ ಪುತ್ರ. ಇವರೆಲ್ಲ ಶಿವಾಚಾರ್ಯ (ರ) ಸಂಸ್ಕೃತಿಗೆ ತಳಹದಿ ಹಾಕಿದವರು. ಆದರೆ ಇವರಲ್ಲಿ ವಿಶಾಲದೃಷ್ಟಿಯುಳ್ಳ ವಿಶ್ವವ್ಯಕ್ತಿತ್ವವುಳ್ಳ ರುದ್ರ ವೃಷಭ (ವೃಷಭ ರುದ್ರ)ನ ಸಂಸ್ಕೃತಿಯ ಪ್ರವರ್ತಕರು ಧೇನು (ಗಜ) ಕರ್ಣರು ಮತ್ತು ಪಂಡಿತಾಚಾರ್ಯರು—ಎಂದು ಬೇರೆ ಹೇಳಬೇಕಾಗಿಲ್ಲ.

ಶಿವಾಚಾರ್ಯರಿಗೂ ಒಂದು ಸನಾತನ ವಿಶಾಲ ವಂಶವಿದೆ. ಅದು ಶಿವಾಚಾರಧಾರ್ಮಿಕ ವಂಶ; ಸಾಂಸ್ಕೃತಿಕ ಸಂತತಿ. ಇಲ್ಲಿ ವಂಶವೆಂದರೆ ವೃಂದ ಮತ್ತು ಸಮೂಹ ಎಂದರ್ಥಗಳು. ಶಿವಾಚಾರ್ಯರದೇ ಒಂದು ಪ್ರಾಮುಖ್ಯವಾದ ಪ್ರವರ; ಪ್ರತಿಭಾಶೀಲ ಪ್ರವರ. ಈ ದೃಷ್ಟಿಯಲ್ಲಿ ಗೋತ್ರಪದ ತುಂಬಾ ಗಂಭೀರವಾದ ಪದ. ಅರ್ಥಬಾಹುಲ್ಯದಿಂದ ಭಾವಭಂಡಾರದಿಂದ ಭರಿತವಾಗಿ ಬಳಕುವ ಪ್ರಭಾವಶಾಲಿಯಾದ ಪದ. ಧ್ವನಿ ಶೀಲವಾದ ಪದ. ವೃಷಭ ರುದ್ರನನ್ನು ಸಂಕೇತಿಸುವ ಸತ್ವ ಸಂಪನ್ನ ಸಾಫಲ್ಯ ಪದ. ಆಚಾರ್ಯ ಸಂತತಿ ಮೂಲ ಪುರುಷರು ರುದ್ರಭದ್ರರು. "ಅನಂತರುದ್ರೋ ಭಗವಾನ್ ಪ್ರಣತೋಽಸ್ಮಿ ಜಗದ್ಗುರೋ" ಎಂದಿದೆ ಚಂದ್ರಜ್ಞಾನಾಗಮ.

"ಯದಾಚಾರ್ಯಕುಲೇ ಜಾತಾ ಸಕಾಮಾಚಾರಮಾತೃಕಾ।
ಶಿವಭಕ್ತಿಃಸ್ಥಿರಾ ಯಸ್ಮಿನ್ ಜಜ್ಞೇ ವಿಗತವಿಪ್ಲವಾ॥"

—ರೇಣುಕಗೀತೆ

ಇಲ್ಲಿ 'ಆಚಾರ್ಯಕುಲೇ' ಎಂಬ ಪದಪ್ರಯೋಗವಿದೆ. ಇದರಿಂದ ಆಚಾರ್ಯ ಸಂತತಿ ಅಥವಾ ವಂಶವಿರುವುದು ಸ್ಪಷ್ಟವಾಗುತ್ತದೆ. ಆದರೆ ಅದು ಜಾತಿ ಸೂಚಕವಲ್ಲ.

ಗೋತ್ರ–ಸೂತ್ರ ಗುಣೋತ್ಕರ್ಷ!

"ನಂದೀ ಭೃಂಗೀ ತಥಾ ವೀರೋ ವೃಷಭಃ ಸ್ಕಂದ ಏವ ಚ।
ಮತ್ಸ್ವರೂಪಾಃಸಮುತ್ಪನ್ನಾಃ ಪಂಚಗೋತ್ರಾಧಿಕಾರಿಣಃ॥
ದಾರುಕಃ ಶಂಕುಕರ್ಣಶ್ಚ ರೇಣುಕೋ ಧೇನುಕರ್ಣಕಃ।
ವಿಶ್ವಕರ್ಣಶ್ಚ ಪಂಚೈತೇ ಪಂಚಗೋತ್ರಸಮುದ್ಭವಾಃ॥"

—ಮಹಾಪಾಶುಪತ ವೀರಶೈವಾಗಮ

'ನಂದಿ ಭೃಂಗಿ ವೀರ ವೃಷಭ ಸ್ಕಂದ–ಈಶ್ವರ ಸ್ವರೂಪರಾಗಿ ಉತ್ಪನ್ನರಾದ ಇವರು ಪಂಚಗೋತ್ರಾಧಿಕಾರಿಗಳು; ದಾರುಕ ಶಂಕುಕರ್ಣ ರೇಣುಕ ಧೇನು (ಗಜ) ಕರ್ಣ, ವಿಶ್ವಕರ್ಣ—ಈ ಅಯ್ದು ಮಂದಿ ಆಚಾರ್ಯರು ಪಂಚ ಗೋತ್ರೋದ್ಭವರು.' ಈ ಮಹಾಪಾಶುಪತ ವೀರಶೈವಾಗಮ ನಿರೂಪಣ ಪ್ರಕಾರ ವೃಷಭ ಎತ್ತಲ್ಲ,—ರುದ್ರ. ವೀರಭದ್ರ, ಸ್ಕಂದ ಅಂದರೆ ಷಣ್ಮುಖ, ಭೃಂಗರು ಹೇಗೆ ವಿಭೂತಿ ಪುರುಷರೋ ಹಾಗೆ ನಂದಿ ವೃಷಭರು ವಿಭೂತಿ ಪುರುಷರು. ಇವರು ಪಂಚಗೋತ್ರಾಧಿಕಾರಿಗಳು. ದಾರುಕಾದಿ ಆಚಾರ್ಯರು ಪಂಚಗೋತ್ರೋತ್ಪನ್ನರು.

ಗೋತ್ರ ಶಬ್ದಾರ್ಥಗಳು ಎಷ್ಟೋ ಇದ್ದರೂ ಇಲ್ಲಿ ಮುಖ್ಯವಾಗಿ ವಂಶ ಸಂತತಿ ಕುಲ ಎಂದೇ ಅರ್ಥವಿಸಬೇಕು. ಹೀಗೆ ಅರ್ಥವಿಸುವುದರಿಂದ ವೃಷಭ ಪದಕ್ಕೆ ಮಹಾದೇವನ ಪುತ್ರನಾದ ವೃಷಭರುದ್ರನೆಂದೇ ಹೇಳಬೇಕು ಮತ್ತು ನಂದಿ ಅಂದರೆ ಶಿಲಾದ ಮುನಿಯು ಮಗ ನಂದಿಯೆಂದೇ ಹೇಳಬೇಕಾಗುತ್ತದೆ ಇದರಿಂದಾಗಿ ಇವರು ಲಿಂಗಾಂಗೈಕ್ಯ ಬೋಧಕ ವಿದ್ಯೆಗೆ 'ಕುಲಪತಿ'ಗಳೆಂದರ್ಥವಾಗುತ್ತದೆ. ಇನ್ನು ಗೋತ್ರಾಧಿಕಾರಿ ವೃಷಭನೆಂದು ನಿರೂಪಿಸಿದಾಗ ಪಶುಪತಿರುದ್ರನೆಂದೇ ಅರ್ಥವಾಗುತ್ತದೆ. ಭಾರತದಲ್ಲಿ ಪ್ರಪ್ರಥಮವಾಗಿ ಗೋಕುಲ

ವನ್ನು ಅಂದರೆ ಪಶುಗಳನ್ನು ಪಾಲನ ಮಾಡಿದಾತನು ರುದ್ರದೇವನು. ಪಶುಗಳೆಂದರೆ ನಾಲ್ಕುಕಾಲಿನ ಹಸು (ಆಕಳು)ಗಳು ಮಾತ್ರವಲ್ಲ, ಪಶುಧರ್ಮದಲ್ಲಿರುವ ಮಾನವರೂ ಎಂದು ಅರ್ಥವಿಸಿ ಜನ-ದನಗಳಿಗೆಲ್ಲ ಒಡೆಯನೆಂದು ನಿರೂಪಿಸುವ ವೃಷಭ ಪದ ರುದ್ರನಿಗೆ ಮೀಸಲಾಯಿತು. ವೃಷಭ ಅಂದರೆ ಶ್ರೇಷ್ಠ ಪ್ರಧಾನ ಎಂದೇ ಅರ್ಥ! ಇನ್ನು ಗೋ ಅಂದರೆ ಇಂದ್ರಿಯಗಳು. ಪಶುತ್ವಕ್ಕೆಳಸುವ ವೈಕೃತಿಕ ಇಂದ್ರಿಯಗಳನ್ನು ಪತಿಧರ್ಮಕ್ಕೆಳಸುವಂತೆ ಸಂಸ್ಕರಿಸಿ ಕಾಪಾಡಿದ ಕಾರಣ ಗೋತ್ರ ಎಂಬ ಸಾರ್ಥಕ ನಾಮ ಸಂಪನ್ನತೆ ಮಹಾಪಾಶುಪತ ಶಿವಾಚಾರ (ವೀರಶೈವ)ದಲ್ಲಿ ಸಾರ್ಥಕವಾಗಿ ಬಂದಿದೆ. ಇಷ್ಟೆಲ್ಲ ವಿವೇಚನೆಯಿಂದ ಗೋತ್ರಪುರುಷರಲ್ಲಿ ಎಣಿಕೆಯಾದ ವೃಷಭ ರುದ್ರನಲ್ಲದೆ ಎತ್ತಲ್ಲ ಎಂದೇ ಸ್ಪಷ್ಟವಾಗುತ್ತದೆ.

ಇನ್ನು ವೃಷ್ಟಿ, ಲಂಬಕ, ಪಡಿವಿಡಿ (ಪಡ್ವಿಡಿ), ಮುಕ್ತಗುಚ್ಛ, ಪಂಚವರ್ಣ ಎಂಬೀ ಪಂಚಸೂತ್ರಗಳಿವೆ. ಇವು ಪರಿವಿಡಿದು ದಾರುಕ, ಶಂಕುಕರ್ಣ, ರೇಣುಕ, ಧೇನು (ಗಜ) ಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಗೆ ಸಂಬಂಧಿಸಿವೆ. ವೀರಶೈವರಲ್ಲಿ ಈ ಸೂತ್ರಗಳನ್ನು ಹೇಳುವ ಮತ್ತು ಅನುಸರಿಸುವ ಪರಂಪರೆಯಿದೆ. ಇದೂ ಸಹ ಮೂಢ ರೂಢಿಯಲ್ಲ. ಇದರಲ್ಲಿಯೂ ಅರ್ಥವತ್ತತೆಯಿದೆ.

ಸೂತ್ರವೆಂದರೆ ನಿಯಮ, ಸೂಕ್ಷ್ಮ, ಕಟ್ಟುಕಟ್ಟಳೆ, ದಾರ, ರಹಸ್ಯ, ಸಂಕ್ಷಿಪ್ತವಾಗಿಸುವ ಒಂದು ಕಲೆ ಎಂದು ಮುಂತಾಗಿ ಅರ್ಥಗಳಿವೆ. ಇದನ್ನೆಲ್ಲ ಕಂಡು ಹಿಡಿದು ಪುರಾತನ ಪಂಚಾಚಾರ್ಯರು ಇವನ್ನು ವೀರಶೈವರಿಗೆ ನಿಯಮಿಸಿರುವರು. ನಿಯಮ ಅಥವಾ ಕಟ್ಟಳೆಗಳಿಲ್ಲದೆ ಉತ್ಕರ್ಷವಾಗದೆಂದು ಬೇರೆ ಹೇಳಬೇಕಾಗಿಲ್ಲ. ಆ ಆ ಆಚಾರ್ಯರು ಅವರವರ ಸೂತ್ರಸಂಬಂಧವನ್ನು ವಿಧಿಸಿ ವೀರಶೈವಧರ್ಮಕ್ಕೆ ಸೂತ್ರಧಾರರಾಗಿದ್ದಾರೆ. ವೀರಶೈವವೆಂಬ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಅಥವಾ ಪ್ರಾಚಾರ್ಯರು ಪಂಚಾಚಾರ್ಯರು. ಇವರು ಹಾಕಿದ ಗೋತ್ರಸೂತ್ರಗಳು ವಿಶ್ವವಿದ್ಯಾಲಯದ ವರ್ಗಗಳು ಅಥವಾ ತರಗತಿಗಳು. ತಾತ್ತ್ವಿಕ ಧಾರ್ಮಿಕ ದಾರ್ಶನಿಕ ರಕ್ಷಣೆಯ (ಗೋತ್ರದ) ನಿಯಮಗಳು ಸೂತ್ರಗಳು. ಜನತೆಯನ್ನು ಶುದ್ಧಿಸಿ ವೃದ್ಧಿಸುವ ಅಂದರೆ ವಿಕಾಸಗೊಳಿಸುವ ಕಟ್ಟಳೆಗಳು ಗೋತ್ರ ಸೂತ್ರಗಳು. ಗೋತ್ರಧರ್ಮ ಸಂಕೇತಗಳು ಷಟ್‌ಸ್ಥಲಗಳು; ಸೂತ್ರ ಧರ್ಮ ಪ್ರತೀಕಗಳು ಪಂಚಾಚಾರ-ಅಷ್ಟಾವರಣಗಳು. ಪ್ರತಿಯೊಬ್ಬರ ದೇಹಾತ್ಮಗಳನ್ನು ಅಂಗಲಿಂಗರನ್ನಾಗಿಸುವ ಶಿವದೀಕ್ಷಾ ಸಂಸ್ಕಾರಗಳು ಗೋತ್ರ

ಸೂತ್ರಗಳು. ಇವನ್ನು ಆಚರಣೆಗೆ ತರುವಂತೆ ಪ್ರೇರೇಪಿಸುವ ಸಂಚಾಲಕರು ಅಂದರೆ ಸೂತ್ರಧಾರರು ಶಿವಾಚಾರ್ಯರು.

ಇದು ನೈಜವೂ ವಾಸ್ತವವೂ ಆದ ವೃಷಭ ಸಂಸ್ಕೃತಿ; ಅಂದರೆ ಶ್ರೇಷ್ಠ ಸಂಸ್ಕೃತಿ; ಶ್ರೀ ರುದ್ರಸಂಸ್ಕೃತಿ. ಇದರ ಸಂಚಾಲಕರು ಮತ್ತು ಸೂತ್ರಧಾರರು ವೀರಶೈವ ಶಿವಾಚಾರ್ಯರು. ಈ ವೃಷಭ ರುದ್ರ ಸಂಸ್ಕೃತಿಯು ನಿರೂಪಿಸಿದ ನಿರ್ಮಲ ವಾಙ್ಮಯ ೨೮ ಶಿವಾಗಮಗಳು. ಇವು ಸಾರ್ವಕಾಲಿಕವಾಗಿ ಸರ್ವರಿಗೂ ಪ್ರಮಾಣಗಳು. ಕಾರಣ ವೃಷಭ (ವಿಶ್ವಾಧಿಕ ವಿಶ್ವಾಧಿಪ) ರುದ್ರ ಮತ್ತು ವೃಷಭ (ರುದ್ರ ನಿತ್ತ ಎತ್ತು) ವಾಹನ ಶಿವ ಇವರಿಬ್ಬರು ವಿಭೂತಿ ಪುರುಷರು ಪೃಜಿಸಿದ ವಾಙ್ಮಯ ಆಗಮ. ಇದರಿಂದಾಗಿ ಅವಕ್ಕೆ ಮೌಲ್ಯವಿದೆ. ಇವು ವೃಷಭ ಸಂಸ್ಕೃತಿಗೆ ಮೂಲ ಆಕರಗಳಾಗಿವೆ. ಇವುಗಳಿಗೆ ವ್ಯಾವಹಾರಿಕವಾಗಿ ಭೇದವಲ್ಲದೆ ವಾಸ್ತವವಾಗಿ ಅಂದರೆ ಪಾರಾಮಾರ್ಥಿಕವಾಗಿ ಭೇದವಿಲ್ಲ; ವಿಪ್ರ ಲಂಭವಿಲ್ಲ; ವಿಪ್ರತಿಪತ್ತಿಯನ್ನು ಹುಟ್ಟಿಸುವುದಿಲ್ಲ. ಜನಜೀವನಕ್ಕೆ ಬೇಕಾದು ದೆಲ್ಲವನ್ನೂ ಸುಲಭಶೈಲಿಯಲ್ಲಿ ಜಾನಪದ ಸಾಹಿತ್ಯದಂತೆ ಪ್ರತಿಪಾದಿಸುವ ಸಾಂಸ್ಕೃತಿಕ ವಿನೂತನ ವಾಙ್ಮಯ. ಜೀವನಕ್ಕೆ ಉಪಯೋಗವಾಗುವ ಜನ ಜನಿತ ವಾಙ್ಮಯ. ಆಗಮ (ಶಬ್ದ) ಪ್ರಮಾಣವಿಲ್ಲದ ಜೀವನವಿಲ್ಲ. ಆಗಮ ವೆಂದರೆ ಅರಿವು. ಅರಿವು ಬಾರದೆ ಬಾಳಿಗೆ ಬೆಳಕಿಲ್ಲ. ಶಿವಶಕ್ತಿಗೂ ಆಗಮ ವೆಂದೇ ಹೆಸರು. ಆಗಮವಾಣಿಯಿಂದ ಶಿವಶಕ್ತಿ ಸಮನಿಸುತ್ತದೆ; ಜೀವನಾನು ಭೂತಿ ಸಂಪತ್ತಿ ಸಂಪಾದಿತವಾಗುತ್ತದೆ. ಉತ್ತಮೋತ್ತಮಧರ್ಮ ನಿರೂಪಿತ ವಾಗಿರುವುದರಿಂದ ಅದರ ಅಧ್ಯಯನದಿಂದ ದಿವ್ಯ ಧರ್ಮ ಲಭಿಸುತ್ತದೆ. "ತಸ್ಮಾ ದತ್ಯುತ್ತಮಾ ಜಾತಾ ಅಷ್ಟಾದಶ ಸದಾಗಮಾಃ।"–ಎಂಬುದಾಗಿ ಮಹಾಪಶು ಪತ ವೀರಶೈವಾಗಮವು ನಿರೂಪಿಸಿದೆ. ಉಪಾಗಮಗಳು ಶಿವಾಚಾರ್ಯ ಪ್ರಣೀತ ಗಳಾಗಿವೆ. ವೃಷಭ ರುದ್ರ ಸಂಸ್ಕೃತಿಯನ್ನು ಸುಂದರಶೈಲಿಯಲ್ಲಿ ವಿವರವಾಗಿ ನಿರೂಪಿಸಿವೆ. ವೀರಶೈವರಲ್ಲಿ ವೃಷಭ ರುದ್ರಾರಾಧಕರಿಗೆ ಪ್ರಾಧಾನ್ಯತೆ ಪ್ರಾಪ್ತಿ ಸಿದೆ. ಉಳಿದ ಜೈನ ಶೈವ ಮೊದಲಾದವರೂ ವೃಷಭ ಧರ್ಮ ವೈಶಿಷ್ಟ್ಯ ವನ್ನೊಪ್ಪಿಕೊಂಡಿದ್ದಾರೆ. ರುದ್ರಸಂಸ್ಕೃತಿ ವೃಷಭ ಸಂಸ್ಕೃತಿಯಾಗಿ ವಿಶ್ವವಿಶಾಲ ವಾಗಿ ಹರಿದು ಬರುತ್ತಿದೆ–ಒಂದಿಲ್ಲ ಒಂದು ರೀತಿಯಲ್ಲಿ!

ಗೋತ್ರ–ಸೂತ್ರಗಳೆಂದೊಡನೆ ಪ್ರಜ್ಞಾತ್ಮಕವಾದ ಸ್ಮರಣ ಸ್ಫುರಿಸುತ್ತದೆ ಪಂಚಾಚಾರ್ಯರದು. ಸಾಮಾಜಿಕರಲ್ಲಿ ವೈವಾಹಿಕ ಸಂಬಂಧದ ಮಾತೆತ್ತಿ ದೊಡನೆ ಪ್ರಸಂಗ ಪ್ರಾರಂಭವಾಗುತ್ತದೆ ಗೋತ್ರಸೂತ್ರಗಳದು. ಗೋತ್ರ

ಸೂತ್ರಗಳಿಗೂ ಸಾಮಾಜಿಕರಿಗೆಲ್ಲರಿಗೂ ಅಷ್ಟೊಂದು ಅವಿರಳ ಸಂಬಂಧ ಬಂದಿದೆ. ಅಂತೆಯೇ ಗೋತ್ರ ಸೂತ್ರಗಳಿಗೂ ಪಂಚಾಚಾರ್ಯರಿಗೂ ಅದೇ ಆ ಅವಿರಳ ಸಕೀಲ ಸಮನಿಸಿದೆ. ಜನ ಜೀವನದಲ್ಲಿ ಹಾಸುಹೊಕ್ಕಾದ ಗೋತ್ರಸೂತ್ರಗಳ ಮೂಲ ಸ್ರೋತಾರ (ತುಂಗೋತ್ರಿ) ಅಥವಾ ಸ್ರಷ್ಟಾರ ಶ್ರೀರುದ್ರನೆಂದರೆ ಸೋಜಿಗವೆನಿಸಿದರೂ ಸತ್ಯಕ್ಕೆ ಸತ್ಯಸಂಗತಿ! ಏಕೆಂದರೆ ಮೊತ್ತಮೊದಲು ಕಾಡಿನಲ್ಲಿರುವ ಗೋವುಗಳನ್ನು ಹಿಡಿ ತಂದು ಸಾಕಿ ಸಲುಹಿ ನಾಡವರಿಗೆ ಉಪಯೋಗವಾಗುವಂತೆ ಮಾಡಿದಾತ ಅಂದರೆ ಗೋ ಸಂಸ್ಕೃತಿಯನ್ನು ಬೆಳಸಿದಾತ ಶ್ರೀರುದ್ರನಲ್ಲದೆ ಬೇರೊಬ್ಬರಿಲ್ಲ. ಧರ್ಮಾಚರಣೆ ವ್ಯವಸಾಯ ದಾನ ಅರ್ಚನ ಮೊದಲಾದವುಗಳಲ್ಲಿ ಗೋವು ಪ್ರಧಾನ ಪಾತ್ರವಹಿಸುವಂತೆ ಮಾಡಿದಾತ ಶ್ರೀರುದ್ರದೇವ. ಜೊತೆಗೆ ಈ ಎಲ್ಲ ಜೀವನಗಳಲ್ಲಿ ಪ್ರಾಯೋಗಿಕವಾಗಿ ಜೀವನ ಸ್ಪಂದನವನ್ನುಂಟು ಮಾಡಿ ಕೀರ್ತಿ ಪಡೆದವರು ಪಂಚಾಚಾರ್ಯರು. ಗೋತ್ರ ಸಂರಕ್ಷಣ ಸಂಕೇತ; ಸೂತ್ರ ಸ್ವಾವಲಂಬನ ಸಂಕೇತ. ಇವೆರಡಕ್ಕೂ ಸೂತ್ರಧಾರರು ಪಂಚಾಚಾರ್ಯರು. ಗೋತ್ರಾಧಿಕಾರಿಗಳೂ ಸೂತ್ರಾಧಿಕಾರಿಗಳೂ ಆಗಿದ್ದಾರೆ ಅಯ್ದು ಮಂದಿ ಆಚಾರ್ಯರು. ಆಚಾರ್ಯರ ಸಂತತಿ ಅಪಾರ, ಅನಾದಿ! ಗೋತ್ರ ಸೂತ್ರಗಳ ಬೆಸುಗೆಗೆ ಮಾಧ್ಯಮ ಪಂಚಾಚಾರ. ಕಾರಣ ಅಷ್ಟಾವರಣ; ಕಾರ್ಯ (ಕ್ರಿಯಾ) ಕ್ಷೇತ್ರ ಷಟ್‌ಸ್ಥಲ.

ಗೋ–ಗೋತ್ರ

ಗೋವಿಗೂ ಗೋತ್ರಕ್ಕೂ ಅವಿನಾಭಾವ ಸಂಬಂಧ. ಗೋತ್ರದ ಮೂಲವೇ ಗೋವು. ಅಥವಾಗೋ! ಗೋ–ಪದದ ಅರ್ಥವ್ಯಾಪ್ತಿ ಅನೇಕ ಬಗೆಯದಾಗಿದೆ. ಗೋ ಎಂದರೆ ಹಸು, ಎತ್ತು, (ವೃಷಭ) ಕಿರಣ, ಸ್ವರ್ಗ, ವಜ್ರಾಯುಧ, ಸಿಡಿಲು, ಬಾಣ, ಭೂಮಿ, ದಿಕ್ಕು, ನೀರು, ಕಣ್ಣು, ಮಾತು, ಸರಸ್ವತಿ, ಶರೀರ, ಶಿರ, ವೃಕ್ಷ, ವೀಚಿ, ಶೃಂಗ, ವಿಹಂಗಮ, ಸೂರ್ಯ, ಚಂದ್ರ, ಪರ್ವತ, ತಾಯಿ, ತೀರ ಎಂದು ಮುಂತಾದ ಅರ್ಥಗಳಿವೆ. ಅಲ್ಲದೆ ಗೋ ಶಬ್ದದೊಡನೆ ಸಂಬಂಧವಾಗಿ ಸಮಾಸವಾಗಿ ಇರುವ ಶಬ್ದಗಳಿಗೂ ಕಡಿಮೆಯೇನಿಲ್ಲ. ನಿದರ್ಶನಕ್ಕಾಗಿ; ಗೋಕರ್ಣ, ಗೋಧೂಳಿ, ಗೋಕುಲ, ಗೋಕಿಲ, ಗೋಕ್ಷುರ, ಗೋಗ್ರಹ, ಗೋಗ್ರಾಸ, ಗೋಕುಲಾಷ್ಟಮಿ, ಗೋಗರೆ, ಗೋಕ್ಷೀರ,

ಗೋಘೃತ, ಗೋಚರ, ಗೋಗಿಸು, ಗೋಚರ್ಮ, ಗೋಧನ, ಗೋದಾನ ಗೋಧ್ರ, ಗೋಪಾಲ, ಗೋತಮ, ಗೌತಮ ಮುಂತಾದ ಶಬ್ದ ಸಂದೋಹದಲ್ಲಿ ಗೋ ಸೇರಿ ಆಗುವ ಅನೇಕ ವಿಧದ ಅರ್ಥಗಳೊಡನೆ ಗೋ ಪದದ್ದೇ ಆದ ಸಂಸ್ಕೃತಿಯ ಬಾಹುಲ್ಯವನ್ನು ಭಾವಿಸಬಹುದಾಗಿದೆ. ಆದರೆ ಇಂತಹ ವಿಶಿಷ್ಟ ವಾದ ಗೋ ಸಂಸ್ಕೃತಿಯನ್ನು ಮುಮ್ಮೊದಲು ಜನ ಜೀವನಕ್ಕೆ ಶ್ರೀರುದ್ರದೇವನು ಒದಗಿಸಿಕೊಟ್ಟಿರುವುದನ್ನು ಬರಬರುತ್ತ ದ್ರಾವಿಡರು ಮರೆತರು. ಆರ್ಯರು ಗೋ ಸಂಸ್ಕೃತಿಯ ಮೌಲ್ಯವನ್ನು ಮನದಟ್ಟಾಗಿಸಿಕೊಂಡು ಮುಂದುವರಿಸಿ ತಮ್ಮದನ್ನಾಗಿಸಿಕೊಳ್ಳುವರು, ಕೊಂಡಿರುವರು. ಗೋಪಾಲ (ಕೃಷ್ಣ), ಗೋಕುಲ, ಗೋಕುಲಾಷ್ಟಮಿ, ಗೋವರ್ಧನಗಿರಿ, ಗೋಗ್ರಾಸ ಮೊದಲಾದವು ಗಳನ್ನು ಸೃಜಿಸಿ ರುದ್ರದೇವನ ಬಳಿಕ ತಮಗೆ ಸಂಬಂಧಿಸಿಕೊಂಡು ರುದ್ರನಿಂದ ಬಂದ ಸಂಸ್ಕೃತಿಯನ್ನು ಇತಿಹಾಸ ಪುಟಗಳಿಂದ ಮರೆ ಮಾಡಿರುವರು. ಹಸು, ವೃಷಭ, ನಂದಿ, ಬಸವ ನಾಮಗಳ ಸಂಬಂಧವನ್ನು ಇರಿಸಿಕೊಂಡರೂ ಮೂಲ ಕಾರಣವನ್ನು ಅರಿತು ಪ್ರಚಾರ ಮಾಡುವ ಕೆಲಸಕ್ಕೆ ಕೈಹಾಕಲಿಲ್ಲ. ಈಗಲೂ ಇಲ್ಲ. ಅದರಲ್ಲಿಯೂ ಶಿವಾಚಾರ್ಯರು ತೀರ ಕೈಬಿಟ್ಟಿರುವುದೊಂದು ದುರದೃಷ್ಟಕರ!

ಎಮ್ಮೆಗಿಂತ ಗೋವಿಗೆ ಹೆಚ್ಚು ಪ್ರಾಶಸ್ತ್ಯ-ಗೌರವುಗಳು ಸಂದಿವೆ; ಸಲ್ಲು ತ್ತಿವೆ- ಅದರ ಗುಣಧರ್ಮಗಳಿಂದಾಗಿ! ಪೂಜ್ಯತೆಯೊದಗಿದೆ. ಗೋಕ್ಷೀರ ಲಿಂಗಾಭಿಷೇಕಕ್ಕೆ ಸಲ್ಲುತ್ತಿದೆ. ಗೋದರ್ಶನ ಪುಣ್ಯಕರವೆನಿಸಿದೆ. ಗೋದಾನ ಶ್ರೇಷ್ಠ ವೆನಿಸಿದೆ. ಶಿವಾಚಾರ್ಯರು ಗೋವಿನ ಘನತೆಯನ್ನು ಪೂರ್ವದಲ್ಲಿಯೇ ಕಂಡು ಹಿಡಿದರು. ಶಿವಾಚಾರ್ಯರಲ್ಲಿ ಧೇನುಕರ್ಣ ನಾಮಾಂಕಿತರಾಗಿರುವರು. ದೀಕ್ಷಾ ಸಂಸ್ಕಾರದಲ್ಲಿ ಗೋಮೂತ್ರಕ್ಕೆ ಘನತೆಯನ್ನಿತ್ತರು. ಪಿಂಡಾಂಡ ಶುದ್ಧಿಗೆ ಕಾರಣವೆಂದರು. ಅಂತೆಯೇ ಗೋಮಯದಿಂದ ಮನೆಯ ನೆಲದ ಶುದ್ಧಿಯನ್ನು ಪಡಿಸುವಂತೆಸಗಿದರು.

ಆಚಾರ್ಯರ ಗೋತ್ರ ಜಾತಿಸಂಬಂಧವನ್ನು ಬೆಳಸುವದಲ್ಲ. ಜನ್ಮ ಜನ್ಯ ಮತ ಪಂಥಗಳನ್ನು ಹಿಡಿಸುವುದಲ್ಲ. ಜನ್ಮ ಸೂತಕವನ್ನು ಜನ್ಮಾಂಧ ಜಾತಿ ಯನ್ನು ಹೊಡೆದು ಹಾಕುವ ವಿಶುದ್ಧವೂ ವಿಶಾಲವೂ ಆದ ಗುರುಗೋತ್ರವನ್ನು ಗಮನಿಸುವಂತೆ ಆಚಾರ್ಯರು ಆರಂಭಿಸಿದರು; ಅಭಿವರ್ಧಿಸಿದರು. ತಮ್ಮ ಶಿವದೀಕ್ಷಾ ಸಂಸ್ಕಾರದಿಂದ ಶಿಷ್ಯಜನರ ಕಾಯಕರಣೇಂದ್ರಿಯಗಳೆಂಬ ಗೋವುಗಳನ್ನು ಶುದ್ಧೀಕರಿಸಿ ವೃದ್ಧಿಸುವಂತೆಸಗುವಿಕೆಯೆ ಆಚಾರ್ಯರ 'ಗೋ-ತ್ರ'ಗಳ ಗಮ್ಯ

ಗುರಿ; ಗುರುಗುರಿ. ಶಿವಾಚರಣೆಯಿಂದ ಹಸುಗಳಂತೆ ಪಾವನಪ್ರೇಮ (ಭಕ್ತಿ ಭಾವ)ವೆಂಬ ಹಾಲನ್ನು ಕರೆವಂತೆ ಕರುಣಿಸುವುದೇ ಗುರುಗೋತ್ರಗಳ ಘನ ಗಂಭೀರ ಗುರಿ. ತಮ್ಮ ಸಂಸ್ಕಾರಗಳಿಂದ ಶಿವಾಚಾರಗಳಿಂದ ಗೋವಿನಂತೆ ಸಾತ್ವಿಕ ತಾತ್ತ್ವಿಕ ಕಾಯಕರಣೇಂದ್ರಿಯಗಳನ್ನು ತ್ರಿವಿಧ ಲಿಂಗಕಿರಣಗಳನ್ನಾಗಿ ಸುವುದೇ ಮತ್ತು ಲಿಂಗಸ್ವರೂಪ ರುದ್ರದೇವನ ಅಕ್ಷ(ಅಕ್ಷಿ)ಗಳನ್ನಾಗಿಸುವುದೇ ಗೋತ್ರ-ಸೂತ್ರಗಳ ಮೂಲಭೂತ ನಿಯತಿ; ಅಂದರೆ ಕಟ್ಟು ಕಟ್ಟಳೆ! ಶಿಷ್ಯರನ್ನೆಲ್ಲ ಆಚಾರ ವಿಚಾರಗಳಲ್ಲಿ ಅರ್ಚನ ವಿಧಾನಗಳಲ್ಲಿ ನಡೆನುಡಿಗಳಲ್ಲಿ ಏಕ ಸೂತ್ರತೆಗೆ ತರುವುದೇ ಗೋತ್ರ ಸೂತ್ರಗಳ ದಿಟವಾದ ಧ್ಯೇಯ! ಗೋಧನಕ್ಕೆ ಪಂಚಾಚಾರ್ಯರು ಮೌಲ್ಯವಿತ್ತುದಕ್ಕೆ ಗ್ರಾಮೀಣ ರೈತರ ಆದರಾಭಿಮಾನ ಪಂಚಪೀಠಗಳ ಮೇಲೆ ಅತಿಶಯವಾಗಿದ್ದಿತು. ಅಲ್ಲದೆ ಕನ್ನಡದ ಅಭಿಮಾನಿಗಳೂ ಆಗಿದ್ದ ಆಚಾರ್ಯರು. ಇವೆರಡರ ಸತ್ಯ ಸಂಕೇತವಾಗಿ ಈ ಕೆಳಗಿನ ಕನ್ನಡ ಹೆಸರುಗಳು ಅಲ್ಲಲ್ಲಿ ದಟ್ಟಾಗಿವೆ; ಅವಿವು:

೧) ಗುಡುಗನುಳ್ಳವರು-ಶಂಭಾಪುರಿ ಪೀಠದ ಶಿಷ್ಯರು.
೨) ಹೊನ್ನುಳ್ಳವರು-ಉಜ್ಜಯಿನಿ ಪೀಠದ ಶಿಷ್ಯರು.
೩) ಐ (ಅಯ್ಯ) ನುಳ್ಳವರು-ಶ್ರೀಶೈಲ ಪೀಠದ ಶಿಷ್ಯರು.
೪) ಚಾಗುಳ್ಳವರು-ಕೇದಾರ ಪೀಠದ ಶಿಷ್ಯರು.
೫) ಜೈನುಳ್ಳವರು-ಕಾಶೀ ಪೀಠದ ಶಿಷ್ಯರು.

ಇವು ಗಮನೀಯವಾಗಿವೆ. ಇಲ್ಲಿ ಚಾಗು ಎಂಬುದು ತ್ಯಾಗ ಶಬ್ದದ ತದ್ಭವವಾಗಿದೆ. ಈ ದೃಷ್ಟಿಯಲ್ಲಿ ಇವು ಅರ್ಥಪೂರ್ಣವಾಗಿವೆ. ಗುಡುಗು ಧ್ವನಿ ಸೂಚಕವಾಗಿದೆ. 'ಸದ್ಯೋಜಾತ ಶಬ್ದಜ್ಞಾನಿ' ಎಂದಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಐ ಎಂದರೆ ಆರ್ಯ ಪೂಜ್ಯ ಎಂದರ್ಥವಿದೆ. 'ಜೈನು' ಈ ಪದದ ಅರ್ಥವಾಗದಿದೆಯಾದರೂ ವಿಲಾಸವೆಂದರ್ಥವಿಸಬಹುದಲ್ಲವೆ?

ವೃಷಭ ರುದ್ರನ ಕೃಷಿ ಕ್ರಾಂತಿ!
ವಿಶ್ವ ಜನ ಜೀವನ ಮೂಲಭೂತ ಮಹಾಕ್ರಾಂತಿ!

ಅನಾದಿಕಾಲದಲ್ಲಿ ಪಶುಪಾಲನಕ್ಕೆ ನಾಂದಿಯನ್ನು ಹಾಡಿ ಭಾರತದಲ್ಲಿ ಗೋ ಸಂಪತ್ತನ್ನು ಗೋ ಧರ್ಮವನ್ನು ಗೋತ್ರ ಸಂಸ್ಕೃತಿಯನ್ನು ವೃಷಭ

ವೈಶಿಷ್ಟ್ಯವನ್ನು ಅಭಿವೃದ್ಧಿಸಿದ ಅಪ್ರತಿಮ ಕೀರ್ತಿ ಶ್ರೀರುದ್ರ ದೇವನದಾಗಿದೆ. ಆತನಿಂದ ಅಂದಿನಿಂದ ಇಂದಿನವರೆವಿಗೂ ಬೃಹದ್ ಭಾರತವು ಕೃಷಿ ಪ್ರಧಾನವಾದ ರಾಷ್ಟ್ರವೆನಿಸಿದೆ. ಆಹಾರ ಧಾನ್ಯಗಳನ್ನು ಸ್ವಂತ ಬೆಳೆದು ಉಣ್ಣುವ ತೃಪ್ತಿಪಡುವ ನಾಗರಿಕತೆಯನ್ನು ತಂದಾತನು ಶ್ರೀರುದ್ರದೇವನು. ಆತನಿಂದಲೇ ಹಸಿರುಕ್ರಾಂತಿ ಆರಂಭವಾಯಿತು. ಬೇಸಾಯಕ್ಕೆ ಇಂದಿನ ಯುಗದಲ್ಲಿ ವೈಜ್ಞಾನಿಕವಾಗಿ ಯಾಂತ್ರಿಕ ಉಪಕರಣಗಳನ್ನು ಬಳಸುತ್ತಿದ್ದರೂ ವೃಷಭ (ಎತ್ತು)ಗಳು ಅನಿವಾರ್ಯವಾಗಿವೆ. ಹಲವು ಹತ್ತು ಬಗೆಯಲ್ಲಿ ಜನಜೀವನಕ್ಕೆ ನೆರವಾಗಿನಿಂತಿವೆ. ರೈಲು, ಲಾರಿ ಮೊದಲಾದ ಯಾಂತ್ರಿಕ ವಾಹನಗಳು ಓಡಾಡುತ್ತಿದ್ದರೂ ಎತ್ತುಗಳ ಸಹಾಯದಿಂದ ಚಕ್ಕಡಿ (ಬಂಡಿ)ಗಳ ಓಡಾಟ ತಪ್ಪಿಲ್ಲ; ತಪ್ಪುವಂತಿಲ್ಲವೇನೊ? ಬಾವಿಗಳಿಂದ ನೀರೆತ್ತುವ ಯಂತ್ರಗಳು ಬಂದಿದ್ದರೂ ಎತ್ತುಗಳಿಂದ ಕಪಲಿ ಹೊಡೆದು ಬಾವಿಗಳಿಂದ ನೀರೆತ್ತಿ ಬೇಸಾಯ ಸಾಗಿಸುವುದೂ ಇನ್ನೂ ಬಿಟ್ಟಿಲ್ಲ. ಬಿಡುವಂತೆ ತೋರುವುದಿಲ್ಲ. ಸಸ್ಯವೃದ್ಧಿಗೆ ಯಂತ್ರದಿಂದೆತ್ತುವ ಬಿಸಿನೀರಿಗಿಂತ, ಎತ್ತುಗಳಿಂದೆತ್ತುವ ಕಪಲಿ ಬಾನೆಗಳ ತಣ್ಣೀರು ಹೆಚ್ಚು ಪೋಷಕವೆಂದು ಬಲ್ಲ ಬೇಸಾಯಗಾರರು ಹೇಳುತ್ತಿದ್ದಾರೆ. ಹೀಗೆ ಎಂದಿಗೂ ಯಾವ ಕಾಲಕ್ಕೂ ವೃಷಭ ಕೃಷಿ ಕ್ರಾಂತಿಯು ತನ್ನ ವೈಶಿಷ್ಟ್ಯವನ್ನು ಅನಿವಾರ್ಯತೆಯನ್ನು ಕಾಪಾಡಿಕೊಂಡು ಬರುತ್ತಿರುವುದು ಶ್ರೀರುದ್ರದೇವನ ವೃಷಭ ಸಂಸ್ಕೃತಿಯ ಹೆಚ್ಚುಗಾರಿಕೆಯ ಸತ್ಯಸಂಕೇತವಾಗಿದೆ. ಶ್ರೀರುದ್ರದೇವನ ಕೃಷಿಯ ವಿಸ್ತಾರವನ್ನು ವೈಭವವನ್ನು ಕಂಡು ಆತನಿಗೆ "ಸಂ-ಕರ್ಷಣ-ಮೂರ್ತಿಸ್ವರೂಪ"ನೆಂದು "ಪರಮ ಪುರುಷ"ನೆಂದು ಪ್ರಶಸ್ತಿಗಳನ್ನಿತ್ತು ಮನ್ನಿಸಿರುವರು. ಸಮ್ಯಕ್ ಕೃಷಿಯೇ ಮೂರ್ತಿಮತ್ತಾಗಿ ಬಂದಾತನು, ಮತ್ತು ಪರಮ ಪುರುಷನು ಎಂದು ಸ್ತುತಿಸಿರುವರು. ಈ ದಿಸೆಯಲ್ಲಿ ವೃಷಭ ರುದ್ರನ ವ್ಯಕ್ತಿತ್ವ ವಿಶಿಷ್ಟತಮವಾಗಿದ್ದಿತು. ವಿಶ್ವವ್ಯಾಪಕವಾಗಿ 'ವಿಶ್ವಾಧಿಕ'ನೆಂದು ಹೆಸರಾಂತಿದ್ದನು. ಕೃಷಿಕ್ರಿಯೆಯೊಂದರಲ್ಲಿ ಮಾತ್ರವಲ್ಲ. ಕ್ರಿಯಾಚಾರ ಕ್ರಿಯಾಲಿಂಗಾರ್ಚನಾದಿಗಳನ್ನು ಉತ್ಪಾದಿಸಿ ಉನ್ನತ ಮಟ್ಟಕ್ಕೆ ತಂದಿದ್ದನು. ಬಾಹ್ಯಕೃಷಿಯನ್ನು ಕಂಡುಹಿಡಿದು ಭೂಮಿ ಸಂಸ್ಕಾರವನ್ನು ಮಾಡುತ್ತಿದ್ದಂತೆ ತ್ರಿವಿಧ ದೀಕ್ಷಾಸಂಸ್ಕಾರಗಳನ್ನು ಕಂಡುಹಿಡಿದು ಪಿಂಡಾಂಡಕೃಷಿಯನ್ನು ಅಂದರೆ ಸಂಸ್ಕಾರವನ್ನೂ ಉತ್ಪಾದಿಸಿ ಉತ್ತಮಗೊಳಿಸಿ ಪರತತ್ತ್ವದ ಬೆಳೆಯನ್ನು, ಬೆಳೆಯನ್ನೂ ಬೆಳೆಯುವ ಪರಂಪರೆ ಇಂದಿಗೂ ವೀರಶೈವರಲ್ಲಿ ಬಳಕೆಯಲ್ಲಿರುತ್ತದೆ. ಇದಕ್ಕಾಗಿ ವೃಷಭ (ಶ್ರೇಷ್ಠಧರ್ಮಿ) ರುದ್ರನು ಅಷ್ಟಾವರಣವನ್ನು ಉತ್ಪಾದಿಸುವನು. ಅಷ್ಟಾವರಣ ಕೃಷಿಯಲ್ಲಿ ಪಾದೋದಕ ಪ್ರಸಾದಗಳೇ ಪರಮ ಫಲಗಳು. ಹೀಗೆ ಬಹಿರಂಗ ಅಂತರಂಗ ಅಂದರೆ

ಬಾಹ್ಯಾಭ್ಯಂತರ ಕೃಷಿಯನ್ನು ಕಂಡುಹಿಡಿದ ಕೀರ್ತಿ ವೃಷಭ ರುದ್ರನಿಗೆ ಮೀಸಲಾಗಿದೆ. ಕೃಷಿ ಕ್ರಿಯಾಶೀಲತೆಗೆ (ಕಾಯಕಕ್ಕೆ) ಒಂದು ಪೂರ್ಣತೆಯನ್ನು ತಂದ ಕ್ರಾಂತಿ ಕಡೆಗಣ್ಣಿನಿಂದ ಕಾಣತಕ್ಕ ಮಾತಲ್ಲ. ಅದಕ್ಕೆ ಮಹಾಪಾಶುಪತ ಶಿವಾಚಾರ ಎಂದು ಹೆಸರಾಗುವುದು. ರುದ್ರಗಣ, ರುದ್ರಕನ್ನೆಯರು, ಮರುದ್ಗಣರು ಆ ಮಹಾಪಾಶುಪತ ಶಿವಾಚಾರ ಧರ್ಮದ ದೀಕ್ಷೆಯನ್ನು ವಹಿಸಿ ತ್ರಿವಿಧಲಿಂಗೋಪಾಸಕರಾಗುವರು. ಆಗ ಅವರೆಲ್ಲ ಇಷ್ಟಲಿಂಗವನ್ನು ಶಿರಸ್ಸಿನಲ್ಲಿ ಧರಿಸುತ್ತಿದ್ದು ಶಿರೋಧಾರಿಗಳೆಂದು ಪ್ರಸಿದ್ಧರಾಗಿರುವರು. ಇಷ್ಟೇ ಅಲ್ಲ ಗಂಗೆವಾಲುಕ ಸಮರುದ್ರರೆಲ್ಲ ಲಿಂಗಧಾರಿಗಳಾಗಿದ್ದರೆಂದು ಪ್ರಭು ಚನ್ನಬಸವಣ್ಣಾದಿಗಳೆಲ್ಲರೂ ತಂತಮ್ಮ ವಚನಗಳಲ್ಲಿ ಉಲ್ಲೇಖಿಸಿರುವರು. ಹೀಗೆ ಉಭಯ (ಲೌಕಿಕ ಪಾರಮಾರ್ಥಿಕ) ಕೃಷಿಗಳ ಉತ್ಪಾದಕನೂ ಪ್ರತಿಪಾಲಕನೂ ವೃಷಭ ರುದ್ರದೇವನು.

ವೃಷಭ ರುದ್ರನ ಕೃಷಿಕ್ರಾಂತಿಗೆ ಅವರಿವರೆಂಬ ಭೇದವಿಲ್ಲ. ಜಾತಿ ಮತ ಪಂಥಗಳ ಸೋಂಕಿಲ್ಲ. ಮಾನವರೆಲ್ಲರ ಜೀವನ ನಿರ್ವಹಣವೇ ಅದರ ಗುರಿ. ಕೃಷಿ ಕೈಕೊಂಡು ಬಾಳಲು ಬೇಕಾದ ಕಾಳುಕಡಿಗಳನ್ನು ಬೆಳೆಯುವುದೇ, ಬೆಳೆದು ಉಳಿದವರಿಗೂ ಒದಗಿಸುವುದೇ ಕೃಷಿ ಕಾಯಕದ ಉದ್ದೇಶ. ಒಡಲುಳ್ಳವರಿಗೆಲ್ಲರಿಗೂ ಒಕ್ಕಲುತನ ಅತ್ಯಗತ್ಯ. ಒಕ್ಕಲುತನದಿಂದ ಬಂದ ಆಹಾರ ಧಾನ್ಯಗಳ ಆಗತ್ಯ ಅದಾರಿಗಿಲ್ಲ? ಜೀವಿಸಲು ಮೊದಲು ಅನ್ನ; ಆಮೇಲೆ ಏನೆಲ್ಲ. ಇದರಿಂದ ವೃಷಭರುದ್ರನ ಕೃಷಿಕ್ರಾಂತಿಯ ಮೌಲ್ಯಯಾವ ಮಟ್ಟದ್ದೆಂಬುದು ಮನದಟ್ಟಾಗುತ್ತದೆ. ಉಳಿದೆಲ್ಲ ವ್ಯವಹಾರಗಳಿಗೆ ಕೃಷಿ ಕ್ರಾಂತಿ ಮೂಲಭೂತವಾಗಿದೆ; ಜೀವಾಳವಾಗಿದೆ, ಜೀವನವೇ ಆಗಿದೆ. ಈ ಕೃಷಿ ಕಾಯಕವನ್ನು ಕೆಲವರು ಕೀಳಾಗಿ ಪರಿಗಣಿಸಿದುದುಂಟು. ಇದು ಅವರ ಕೀಳರಿಮೆಯ ಕುರುಹಲ್ಲದೆ ಬೇರೇನೂ ಇಲ್ಲ. ಅವರು ಉಸಿರೆತ್ತಿ ಬಾಳುತ್ತಿದ್ದುದು-ಬಾಳುತ್ತಿರುವುದು-ಮುಂದೆ ಬಾಳುವುದು ಇದರಿಂದಲೇ ಎಂಬುದನ್ನರಿತರೆ ಈ ಬಗೆಗಿನ ಅವರ ದೃಷ್ಟಿ ಬದಲಾಗುವುದರಲ್ಲಿ ಯಾವ ಸಂಶಯವಿಲ್ಲ. "ಕೋಟಿ ವಿದ್ಯೆಗಳಿಗಿಂತ ಮೇಟಿವಿದ್ಯೆಯು ಲೇಸು" ಎಂಬಂತೆ ಮಾನವನ ಬಾಳಿನ ಬದುಕಿಗೆ ಮೇಟಿ (ಕೃಷಿ) ವಿದ್ಯೆಯೇ ವಿದ್ಯೆಯೆಂದು ವೃಷಭ ರುದ್ರದೇವನು ಪರಿಶೀಲಿಸಿ ಪ್ರಯೋಗಕ್ಕೆ ಪ್ರಕಾಶಕ್ಕೆ ತಂದ ಪ್ರಪ್ರಥಮ ಕೃಷಿಜನಕ; ಕೃಷಿಗಾರ. ಜನಜೀವನ ಜೀವಾಳವಾದ ರುದ್ರನ ಕೃಷಿಕ್ರಾಂತಿಯು ಎಂದೆಂದಿಗೂ ಅಚ್ಚಳಿಯದಂತಹದು; ಎಲ್ಲೆಲ್ಲಿಯೂ ಹಬ್ಬಿರುವುದು. ಇಂತಹ ಉತ್ತಮೋತ್ತಮ ಕ್ರಾಂತಿಯನ್ನು ಮಾಡಿದವರು ಇನ್ನೊಬ್ಬರಿಲ್ಲ—ಈ ವಿಶ್ವದಲ್ಲಿ!

ಆಹಾರಕ್ಕೆ ಬೇಕಾದ ಧಾನ್ಯೋತ್ಪತ್ತಿಯೇ ಕೃಷಿಯ ಜೀವಾಳ. ಅನ್ನಕ್ಕೆ ಆಢ್ಯತೆಯನ್ನು ಪ್ರಾಸಾದಿಕತೆಯನ್ನು ಮೊದಲಿಗಿತ್ತವನು ಶ್ರೀ ರುದ್ರದೇವನು. ಪ್ರಸಾದ (ಅನ್ನ) ವೇ ಪರಮಾತ್ಮ ಸ್ವರೂಪವೆಂದು ಶ್ರೀರುದ್ರನು ಸಾರಿದನು. ಇದನನುಕರಿಸಿ ಶ್ರುತಿಯು "ಅನ್ನಂಬ್ರಹ್ಮೇತಿ ವಿಜಾನೀಯಾತ್।" "ಅನ್ನಂ ಬಹು ಕುರ್ವೀತ" ಎಂದು ಸಾರಿದೆ. "ಅನ್ನದೇವರಿಗಿಂತ, ಇನ್ನುದೇವರಿಲ್ಲ; ಅನ್ನಕ್ಕಿಂತ ಹಿರಿದಿಲ್ಲ, ಲೋಕಕ್ಕೆ ಅನ್ನವೇ ದೈವ ಸರ್ವಜ್ಞ।" ಆಹಾರವಿಲ್ಲ ವಾದರೆ ಕಾಲುಗಳಾಡವು, ಕಣ್ಣು ಕಾಣದು, ಕಿವಿ ಕೇಳವು, ಶಕ್ತಿಯೇ ಇರು ವುದಿಲ್ಲ. 'ಅನ್ನತೋ ಪ್ರಾಣ, ಪ್ರಾಣತೋ ಪರಾಕ್ರಮ' ಎಂದೂ ನಾಣ್ಣುಡಿ ಯುಂಟು. ಜೀವನಕ್ಕೆ ಆಧಾರವಾದ ಅನ್ನವನ್ನು ತನ್ನ ಕೃಷಿಕಾಯಕದಿಂದ ವಿಶ್ವಕ್ಕೆ ಕೊಟ್ಟ ಶ್ರೀ ರುದ್ರದೇವನ ವೈಶಿಷ್ಟ್ಯ ಅಷ್ಟಿಷ್ಟಲ್ಲ.

"ಇದ್ದಲಿಗಿಂ ಕರಿದಿಲ್ಲ, ಬುದ್ಧಿಗಿಂ ಹಿರಿದಿಲ್ಲ,
ಸಿದ್ಧರಿಂದಧಿಕ ಬಲವಿಲ್ಲ, ದೈವದೊಳು
ರುದ್ರಗಿಂದಿಲ್ಲ ಸರ್ವಜ್ಞ॥"

—ಸರ್ವಜ್ಞ

ರಾಮ ನಾಮವೇ ನಾಮ, ಸಾಮವೇದ ವೇದ;
ಆ ಮಹಾರುದ್ರ ಪರದೈವ ಲೋಕದೊಳು
ಭೀಮನೇ ಭಕ್ತ ಸರ್ವಜ್ಞ॥

"ಏಕಏವ ರುದ್ರೋ ನ ದ್ವಿತೀಯಾಯ ತಸ್ಥುಃ" ಎಂದುದು "ಶೃತಿ; ನಂಬಿರೋ ನಂಬಿರೋ!" ಎಂದು ಮುಂತಾದ ಮಾತುಗಳಲ್ಲಿ ರುದ್ರಪಾರಮ್ಯ ವನ್ನು ಕಾಣಬಹುದಾಗಿದೆ. ಅಂತೆಯೇ,

ಗುರು_ವೃಷಭ ಸಂಬಂಧ

"ವೃಷಭ ನೇರಲು ಗುರುವು, ವಸುಧೆಯೊಳು ಮಳೆಯಕ್ಕು:
ಶಿಶು ಪಶು ಸ್ತ್ರೀಯರಿಗೆ ಜಯಮಕ್ಕ ಜನರೆಲ್ಲ,
ಮಿಸುನಿಯುಂತಕ್ಕ ಸರ್ವಜ್ಞ॥"

ಗುರು–ವೃಷಭ ಸಂಬಂಧ ಧ್ವನಿಪೂರ್ಣವೂ ಭಾವ ಪೂರ್ಣವೂ ಪ್ರಭಾವ ಪೂರ್ಣವೂ ಆಗಿದೆ. ಈ ಸಂಬಂಧ ಸರ್ವೋತ್ತಮ ಸಂಬಂಧ. ಇವರಿಂದ ಜಾಗ ತಿಕ ಜೀವನಕ್ಕೆ ಏನೆಲ್ಲ ಉತ್ತಮ ಯೋಗಗಳು ಉಂಟಾಗುತ್ತವೆ. ಭೋಗ

ಭಾಗ್ಯಗಳು ಉಂಟಾಗುತ್ತವೆ. ಮಳೆ ಬೆಳೆಗಳು ಸಮೃದ್ಧವಾಗುತ್ತವೆ. ಶಿಶು ಪಶು ಹೆಣ್ಣು ಗಂಡು ಮೊದಲಾಗಿ ಎಲ್ಲರ ಬಾಳಿನಲ್ಲಿ ಹದುಳತೆ ಗೆಲವು ಒಳಿತೊಲವುಗಳುಂಟಾಗುತ್ತವೆ. ಚಿನ್ನದಂತೆ ಅಂದರೆ ಅಪರಂಜಿಯಂತೆ ಚೊಕ್ಕಟವಾಗಿ ಬೆಲೆ ಕಳೆಗಳು ಶಾಂತಿಕಾಂತಿಗಳು ಒದಗುತ್ತವೆ.

ಗುರು–ವೃಷಭ ಸಂಬಂಧವೆಂದರೆ ಜ್ಯೋತಿಷ್ಯದಲ್ಲಿ ವೃಷಭರಾಶಿಗೆ ಗುರು ಬಂದು ಸೇರಿದರೆ ಮೇಲೆ ಹೇಳಿದಂತೆ ಜಾಗತಿಕ ಜನ ಜೀವನಕ್ಕೆ ಸಮೃದ್ಧಿ ಸಂವೃದ್ಧಿಗಳು, ಗೆಲವು–ನಲಿವುಗಳು, ಹಸನತೆ–ಹದುಳತೆಗಳು ಹೊಂದಿಬರುತ್ತವೆ. ಯೋಗದಲ್ಲಿ ಗುರುಯೋಗ, ಧರ್ಮದಲ್ಲಿ ಗುರುಧರ್ಮ, ದೀಕ್ಷೆಗಳಲ್ಲಿ ಗುರುದೀಕ್ಷೆ ಮಂತ್ರಗಳಲ್ಲಿ ಗುರುಮಂತ್ರ, ಜ್ಞಾನಗಳಲ್ಲಿ ಗುರುಜ್ಞಾನ, ಕಳೆಗಳಲ್ಲಿ ಗುರುಕಳೆ ಮುಮ್ಮಿಗಿಲಾದವುಗಳು, 'ನಗುರೋರಧಿಕಂ' ಎಂದು ಉಗ್ಗಡಿಸಿದೆ ಶ್ರುತಿ! ವಚನಗಳಲ್ಲಿ ಗುರುವಚನಕ್ಕೆ ಮೌಲ್ಯವಿದೆ; ಮಾಧುರ್ಯವಿದೆ. 'ಶ್ರೀ ಗುರುವಚನದಿಂದ ಅಧಿಕ ಸುಧೆಯುಂಟೆ' ಎಂದು ನಿಜವರಿತ ನಿಜಗುಣರು ಕೇಳಿದ್ದಾರೆ; ಹೇಳಿದ್ದಾರೆ.ಜ್ಯೋತಿಷ್ಯದಲ್ಲಿರುವ ರಾಶಿಗಳಲ್ಲಿ ಗುರುರಾಶಿ ಮತ್ತು ವೃಷಭರಾಶಿಗೆ ಪ್ರಾಶಸ್ತ್ಯವಿದೆ. ಕೃಷಿಕ್ಷೇತ್ರದಲ್ಲಿ ವೃಷಭಕ್ಕೆ ವೈಶಿಷ್ಟ್ಯವಿರುವಂತೆ ಜನಜೀವನದಲ್ಲಿ ಆದರಲ್ಲಿಯೂ ಧರ್ಮಕ್ಷೇತ್ರದಲ್ಲಿ ಗುರುವಿಗೆ ವೈಶಿಷ್ಟ್ಯವಿದೆ. ಜಾತಿ ಕುಲ ಪಂಥ ಪಂಗಡಗಳನ್ನು ಕಳೆವ ಜೀವಂತ ಸಂಜೀವಿನಿ ಶ್ರೀಗುರು. ಹೊಲಬು ಹಿಡಿದು ಹಸನಾದ ಬಾಳು ಬಾಳಿ ಹಸಾದಿಗನಾಗಬೇಕಾದರೆ ಗುರುಕಾರುಣ್ಯವಿಲ್ಲದಾಗದು. ಇದರಂತೆ ಜೀವನದಲ್ಲಿ ವೃಷಭ ಪಾತ್ರ ಪ್ರಾಮುಖ್ಯವಾಗಿದೆ. ಇದನರಿತ ಶ್ರೀ ಗಿರಿಪೀಠದವರು ಗುರು–ವೃಷಭ ಸಂಬಂಧವನ್ನು ಸಂಸ್ಕೃತಿಯನ್ನು ಬೆಳಸಿ ಉಳಿಸಿ ಬೆಳಗಿಸಿದ್ದಾರೆ; ಬೆಳಗಿಸುತ್ತಿದ್ದಾರೆ. ಬಾಳಸೊಡರಿಗೆ ವೃಷಭ ಸಂಸ್ಕೃತಿಯೆ ಬತ್ತಿ, ಗುರುಕರುಣೆಯೆ ಎಣ್ಣೆ! ಬಾಳಿಗೆ ಬೇಕಾದ ಅನ್ನವನ್ನು ವೃಷಭವಿತ್ತರೆ, ಆ ಅನ್ನವನ್ನು ಪ್ರಸಾದವನ್ನಾಗಿ ಕರುಣಿಸುತ್ತಾನೆ ಶ್ರೀಗುರು. ಪ್ರಸಾದಗಳಲ್ಲಿ ಗುರುಪ್ರಸಾದವೆ ಮೂಲ. ಅದಕ್ಕೆ ಮಹತ್ವದ ಮೌಲ್ಯವಿದೆ. ಅದಿಲ್ಲದ ಉಳಿದ ಪ್ರಸಾದಗಳು ಉಂಟಾಗವು. ಜೀವನಕ್ಕೆ ಬಿಡದೆಬೇಕಾದ ಕ್ರಿಯಾಶಕ್ತಿ ಜ್ಞಾನಶಕ್ತಿ ಭಾವಶಕ್ತಿಗಳನ್ನು ಕರುಣಿಸುವಾತನೇ ಶ್ರೀಗುರು. ಪ್ರಾಕೃತಿಕ ಜಡ ದೇಹವನ್ನು ಅಪ್ರಾಕೃತಿಕ ಅಜಡವಾದ ಅಂಗವನ್ನಾಗಿಸಿ ಆತ್ಮನನ್ನು ಲಿಂಗವನ್ನಾಗಿಸುವ ಶಿವಸಂಸ್ಕಾರಾಧಿಕಾರಿ ಶ್ರೀಗುರು. ಸಾಮಾಜಿಕ ಆಗು ಹೋಗುಗಳ ಭಾರವನ್ನು ನಿರ್ವಹಿಸಬಲ್ಲ ಸರ್ವಸಮರ್ಥ ಶ್ರೀಗುರು. ಅಂತೆಯೆ ಆಚಾರ್ಯನನ್ನು ಶಿವಾತ್ಮವಿದ್ಯಾಗುರು

ಎಂದು ಹೇಳಲಾಗುತ್ತದೆ. ಸ್ವಾತಿಮಳೆಯ ಹನಿಯು ಕಡಲ ಕಪ್ಪೆಚಿಪ್ಪಿನಲ್ಲಿ ಬಿದ್ದು ಮುತ್ತಾಗುವಂತೆ ಕಳಾಗುರುವಿನ ಮಂತ್ರೋಪದೇಶವೆಂಬ ಕಾರುಣ್ಯ ರಸವು ಶಿಷ್ಯನ ಮಾಂಸಮಯ ಪಿಂಡವನ್ನು ಮಂತ್ರಮಯ ಪಿಂಡವನ್ನಾಗಿಸಿ ಮಹಾಮೌಲ್ಯವನ್ನು ಬರಿಸುತ್ತದೆ; ಲಿಂಗರತ್ನವನ್ನಾಗಿಸುತ್ತದೆ. ಇದು ವೃಷಭ ರುದ್ರದೇವ ಜಗದ್ಗುರುವಿನಿಂದ ಬಂದ ಸಾಂಸ್ಕಾರಿಕ ಸಂಸ್ಕೃತಿಯಾಗಿದೆ. ವೃಷಭ ಸಂಸ್ಕೃತಿಯೆಂದರೆ ಧರ್ಮಪರಾಕ್ರಮವನ್ನು ಉತ್ತಮ ರೀತಿಯಲ್ಲಿ ಉಂಟುಮಾಡುವ ಅಪ್ರತಿಮ ಗತಿಯನ್ನು ಅಳವಡಿಸುವ ಶ್ರೀರುದ್ರ ಸಂಸ್ಕಾರ!

"ಹಸನಾಗಿ ಬದುಕುವಡೆ, ಕುಶಲನೆಂದೆನಿಸುವಡೆ
ಪಶುಪತಿಯ ಪದವಾ ಪಡೆಯುವಡೆ-ಹಸಿದರ್ಗೆ
ಅಶನವಿಕ್ಕುವುದು ಸರ್ವಜ್ಞ॥"

ಶ್ರೀರುದ್ರ ದೇವನ ಕಾರುಣ್ಯರಸಕ್ಕೆ ಬಹುಮುಖಗಳಿವೆ. ಜನತೆಗೆ ಬೇಕಾದ ಔಷಧಿ, ಯೋಗ, ಕಾವ್ಯ, ಧರ್ಮ ಇತ್ಯಾದಿಗಳನ್ನು ಭಾರತಕ್ಕೆ ಕರುಣಿಸಿದ ಕೀರ್ತಿ ರುದ್ರನದು. ಇವೆಲ್ಲಕ್ಕಿಂತ ಅನ್ನಪ್ರದಾನ ಕಾರುಣ್ಯ ಅತ್ಯಧಿಕವಾದುದು. ಹಸು ಹೋರಿ ಎತ್ತುಗಳನ್ನು ಪೋಷಿಸಿ, ಎತ್ತುಗಳಿಗೆ ವೃಷಭವೆಂಬ ನಾಮಕರಣ ಮಾಡಿ, ವೃಷಭಗಳಿಂದ ಪ್ರಪ್ರಥಮದಲ್ಲಿ ಕೃಷಿಯನ್ನು ಪ್ರಾರಂಭಿಸಿ, ದವಸಧಾನ್ಯಗಳನ್ನು ಬೆಳೆದುಣ್ಣುವಂತೆ ಮಾಡಿದ ಮಣಹ ಮಹತ್ತರವಾದುದು. ಅದಕ್ಕಾಗಿಯೆ ಸರ್ವಜ್ಞ ಮೇಲಿನ ಪದ್ಯದಲ್ಲಿ ಅನ್ನದಾನ ಅತ್ಯಧಿಕವಾದುದು. ಅನ್ನ ಬೆಳೆವ ಬೇಸಾಯಗಾರನ ಬಾಳು ಹಸನಾಗಿರಬಲ್ಲುದು ಬೇಸಾಯಗಾರ ಕುಶಲನಾಗಿರಬಲ್ಲ ಎಲ್ಲಕ್ಕೂ ಪಶುಪತಿಯಾದ ಶ್ರೀರುದ್ರನ ಪದವಿ ಪ್ರಾಪ್ತಿಸುವುದು ಜನ ಜೀವನಾಧಾರವಾದ ಅನ್ನದಾನದಿಂದ ಎಂದು ಹೇಳಿದುದು ಅರ್ಥಪೂರ್ಣವಾಗಿದೆ; ಅನುಭಾವಿಕವಾಗಿದೆ. ಅನ್ನದಲ್ಲಿರುವ ಭೌತಿಕ ಪದಾರ್ಥಭಾವವನ್ನು ಕಳೆದು ಪ್ರಸಾದವನ್ನಾಗಿಸಿದಾತನು ಶ್ರೀರುದ್ರ ದೇವನು ಮತ್ತು ದಾಸೋಹಧರ್ಮವನ್ನು ಪ್ರಾರಂಭಿಸಿದಾತನು ಶ್ರೀರುದ್ರ ದೇವನು. ಇಷ್ಟೇ ಅಲ್ಲ, ಅಷ್ಟಾವರಣಗಳನ್ನು ಉತ್ಪಾದಿಸಿದಾತನು ಶ್ರೀರುದ್ರ ದೇವನು. ಇದು ಚಾರಿತ್ರಿಕಸಿದ್ಧ, ಪ್ರಸಿದ್ಧ!

"ರುದ್ರಾಕ್ಷಿ ಮಾಲೆಯನು, ಹೊದ್ದು ಧರಿಸಿದವರ್ಗೆ,
ಹೊದ್ದದು ಪಾಪ; ಆ ಮೇಲೆ ಸಾಕ್ಷಾತ್
ರುದ್ರನೇ ಅಕ್ಕು ಸರ್ವಜ್ಞ"

ಕೃಷಿಕಾಯಕ ಉತ್ಪತ್ತಿ ಶ್ರೀರುದ್ರದೇವನಿಂದಾದಂತೆ ಅಷ್ಟಾವರಣಗಳಲ್ಲಿನ ಭಸ್ಮ-ರುದ್ರಾಕ್ಷಿ-ಮಂತ್ರಗಳೆಂಬ ಸಾಧನತ್ರಯದ ಉತ್ಪತ್ತಿಯೂ ಶ್ರೀರುದ್ರ

ದೇವನಿಂದಾಗಿದೆ. ರುದ್ರಾಕ್ಷಿಯಂತೆ ಮಂತ್ರ ವಿಭೂತಿಗಳ ಮಹಿಮಾನ್ವಿತ ಪ್ರಭಾವವು ಮಹತ್ತಮವಾಗಿದೆ. ಅಂತೆಯೇ ಫಲದ್ವಯವಾದ ಪಾದೋದ-ಪ್ರಸಾದಗಳ ಪ್ರವರ್ತಕನೂ ಶ್ರೀರುದ್ರದೇವನೇ ಆಗಿದ್ದಾನೆ "ರುದ್ರೇಣಾತ್ತಮ ಶ್ನೀತ, ರುದ್ರ ಪೀತಂಪಿಬೇತ;........"

ಎಂಬುದಾಗಿ ಶ್ರುತಿ ರುದ್ರ ಪಾದೋದ, ರುದ್ರಪ್ರಸಾದ ವಿಧಾನವನ್ನು ವಿಧಿಸಿವೆ. ಇನ್ನು ಗುರು-ಲಿಂಗ-ಜಂಗಮ ತತ್ತ್ವವನ್ನು ತಾನೇ ಕಂಡುಕೊಂಡು ತ್ರಿವಿಧ ಸ್ವರೂಪವೂ ಆತನೆ ಆಗಿದ್ದನೆಂದು ಅಂದಿನ ಆಗಮಗಳು, ಇಂದಿನ ವಚನಗಳು ಉಚ್ಚಸ್ವರದಲ್ಲಿ ಉಗ್ಗಡಿಸಿವೆಯಲ್ಲದೆ ರೂಢಿನಿಷ್ಠವಾಗಿ ಜೀವನಾನುಷ್ಠಾನದಲ್ಲಿ ಸಾಮಾಜಿಕ ಪ್ರಯೋಗ-ಉಪಯೋಗಗಳಲ್ಲಿ ಬಂದಿರುವಾಗ ಬೇರೆ ಪ್ರಮಾಣ ಬೇಕಿಲ್ಲ.

ರುದ್ರದೇವನು ಕಂಡುಹಿಡಿದು ವಿಶ್ವಕ್ಕೆ ಒದಗಿಸಿಕೊಟ್ಟ ಹಸು ಮತ್ತು ಹಸುವಿನ ಹಾಲು ಮೊಸರು ಬೆಣ್ಣೆ ಮಜ್ಜಿಗೆ ತುಪ್ಪಗಳು ಹಾಗೂ ಎತ್ತುಗಳು (ವೃಷಭಗಳು) ಅಲ್ಲಿಂದ ಇಲ್ಲಿಯವರೆವಿಗೂ ಜೀವನಾಧಾರವಾಗಿ ಅದೇಕೆ ಜೀವಾಳವೇ ಆಗಿ ನಿಂತಿವೆ.

"ಇಂದ್ರನಾನೇಯನೇರಿ, ಒಂದನೂ ಕೊಡಲರಿಯ;
ಚಂದ್ರಶೇಖರನು ಮುದಿಯೆತ್ತನೇರಿ-ಬೇ-
ಕೆಂದುದನು ಕೊಡುವ ಸರ್ವಜ್ಞ॥"

ಇದು ಏನೆಲ್ಲವನೂ ತಿಳಿದ ಅಂದರೆ ಸರ್ವಜ್ಞನ ವೃಷಭನ ಬಗೆಗೆ ಘನ ಗಂಭೀರ ಆಶಯವಿದು; ಘನಕ್ಕೆ ಘನ ಮೌಲ್ಯವಿದು. ಸ್ವರ್ಗೀಯ ಸಂಪತ್ತಿಗೆ ಅರಸ ಇಂದ್ರ. ಬಲಶಾಲಿಯಾದ ಆನೆಯ ನೇರಿದಾತ. ಆದರೇನು ಯಾರಿಗೂ ಏನೊಂದನೂ ಕೊಡಲಾರನು. ಅದೇ ಚಂದಿರ ಸೂಡಿದ ಶಿವನು ಮುದಿಯೆತ್ತ ನೇರಿರುವನು; ಬೇಡಿದುದನೆಲ್ಲ ಕೊಡುವನು. ಇಂದ್ರ ಆನೆಯ ಮೇಲಿದ್ದು ಜಿಪುಣನಾದನು. ಚಂದ್ರಶೇಖರನು ಮುದಿಯೆತ್ತಿನ ಮೇಲೆ ಇದ್ದು ಉದಾರಿಯಾಗಿರುವನು ಎಂದು ಹೇಳಿ ಎತ್ತಿನ ಗುಣ ಮೌಲ್ಯವನ್ನು ಎತ್ತಿಹಿಡಿದಿರುವನು ಸರ್ವಜ್ಞನು. ಎತ್ತು ನಿಜವಾಗಿ ಸಾತ್ವಿಕ; ಅನ್ನದಾತೃ; ಪೂಜಾರ್ಹ. ಆದನ್ನಿತ್ತ ವೃಷಭರುದ್ರನೂ ಅಗ್ರಗಣ್ಯ, ಮಾನ್ಯ:

"ಹರಿಯಜರು ಅನ್ನುವರು ಹರನಿಂದಲಾದವರು,
ಅರಸಿಂಗೆ ಆಳು ಸರಿಯಹನೆ? ಪಶುಪತಿಗೆ
ಸರಿಯಹರ ಕಾಣೆ ಸರ್ವಜ್ಞ।"

ಇಂದ್ರ ಮಾತ್ರವಲ್ಲ, ವಿಷ್ಣು ಬ್ರಹ್ಮರು ಸಹ ವೃಷಭರುದ್ರನಿಂದಾದವರು. ಅವರೆಲ್ಲ ಪಶುಪತಿಯಾದ ರುದ್ರದೇವನಿಗೆ ಸರಿಯಾಗಲರಿಯರು. ಅರಸನಿಗೆ ಆಳು ಹೆಗಲೆಣೆಯಾಗಬಲ್ಲನೆ?

"ಅಸಿಯಾಗಲಿ, ಮಸಿಯಾಗಲಿ, ಕೃಷಿಯಾಗಲಿ;
ವಾಣಿಜ್ಯ ಮುಂತಾದ ಕೃಷಿಯು ಮಾಡುವಾಗ,
ಪಶುಪತಿಗೆಂದೇ ಪ್ರಮಾಣಿಸಿ ಭಕ್ತಿ ಎಸಕದಿಂದೆ,
ಹಸುವಿಲ್ಲದೆ-ತೃಷೆಯಿಲ್ಲದೆ, ವಿಷಯುವನರಿಯದೆ
ಮಾಡುವ ಭಕ್ತಿಯಲ್ಲಿ ಹುಸಿಯಿಲ್ಲದೆ
ಮಾಡುತ್ತಿಪ್ಪ ಭಕ್ತನ ಅಂಗಳವೆ ವಾರಣಾಸಿ,
ಆತನ ಆಶ್ರಯವೆ ಅವಿಮುಕ್ತ ಕ್ಷೇತ್ರ,
ಆತನ ಮುಖವೇ ಮೋಕ್ಷದಾಗರ,
ಆತನ ಅಂಗವೇ ಲಿಂಗದ ಬೆಳಗು,
ಆತನ ಪಾದವೇ ಪವಿತ್ರದ ಪುಂಜ.
ಹೀಗೆ ತ್ರಿಕರಣ ಶುದ್ಧವಾದ ಕೃಷಿವಂತನ-
ಒಕ್ಕುದ ಕಾಯ್ದುಕೊಂಡಿಪ್ಪ ಕುಕ್ಕುಟನಂತೆ ಮಾಡಾ।
ಇದೇ ನಿಶ್ಚಯ ನಿಃಕಳಂಕ ಮಲ್ಲಿಕಾರ್ಜುನಾ!
"ಆನೆ ಕುದುರೆ ಭಂಡಾರವಿದ್ದದೇನೊ?
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು;
ಮಲಗುವುದರ್ಧ ಮಂಚ!
ಈ ಹುರುಳಿಲ್ಲದ ಸಿರಿಯು ನಚ್ಚಿ ಕೆಡಬೇಡ ಮನುಜಾ!...."

—ಮೋಳಿಗೆಯ ಮಾರಯ್ಯ

ಗುರು ಸಾಂಸ್ಕಾರಿಕವಾಗಿ ಪಿಂಡಾಂಡ ಕೃಷಿ ಮಾಡಿ ಪರಶಿವ ತತ್ತ್ವದ ಬೆಳೆಯನ್ನು ಬೆಳೆದರೆ ವೃಷಭ ಬ್ರಹ್ಮಾಂಡದ ಕೃಷಿಮಾಡಿ ಆಹಾರಧಾನ್ಯಗಳನ್ನು ಬೆಳೆಯುತ್ತದೆ. ಗುರುಸಂಸ್ಕೃತಿ, ವೃಷಭ ಸಂಸ್ಕೃತಿಗಳ ಮೂಲ ಮಹಾ ಚೈತನ್ಯ ಪಶುಪತಿ ವೃಷಭ ಪತಿ ರುದ್ರದೇವ! ಪುರಾತನ ಕಾಲದಲ್ಲಿ ಮೊತ್ತಮೊದಲು ಭಾರತೀಯ ಜನತೆಯನ್ನು ಕ್ರಿಯಾಶೀಲತೆ-ಧರ್ಮಪರತೆಗಳಿಗೆ ತೊಡಗುವಂತೆ ಮಾಡಿ ನಾಗರಿಕ ಜೀವನದಲ್ಲಿ ಹೆಜ್ಜೆ ಹಾಕುವಂತೆ ಮಾಡಿದ ಕೀರ್ತಿ ರುದ್ರದೇವನದು. ಜನ ಜೀವನವನ್ನು ಕೃಷಿ ವಿದ್ಯೆ ವೈದ್ಯ ಯೋಗ ಧರ್ಮ ಕ್ರಿಯೆ ಮುಂತಾದವುಗಳಿಂದ ನವೀನಗೊಳಿಸಿ ಮಾನವೀಯ ಚೈತನ್ಯವನ್ನು ತುಂಬುವನು. ಇದಕ್ಕಾಗಿ ಗಂಗಾವಾಲುಕಸಮರಾಗಿರುವ ರುದ್ರಗಣರನ್ನು ರುದ್ರಕನ್ನಿಕೆಯರನ್ನು ಮರುದ್ಗಣರನ್ನು ನಾಗಜನಾಂಗವನ್ನು ಮೀಸಲಾಗಿರಿಸುವನು. ಅಂದರೆ ಧರ್ಮಾರ್ಥ

ವಾಗಿ ದುಡಿಯುವಂತೆ ಮಾಡುವನು. ಸಹಸ್ರ ಸಹಸ್ರ ಹಸುಗಳನ್ನು ಕಾಡಿನಿಂದ ಹಿಡಿದುತಂದು ಪೋಷಿಸಿ ಕ್ಷೀರಾಹಾರವನ್ನು ಸಮೃದ್ಧಿಗೊಳಿಸಿದಂತೆ ಸಹಸ್ರ ಸಹಸ್ರ ವೃಷಭಗಳಿಂದ ವ್ಯವಸಾಯವನ್ನು ಸಾಗಿಸಿ ಆಹಾರಧಾನ್ಯಗಳನ್ನು ಸಮೃದ್ಧಿಗೊಳಿಸುವನು. ಯೋಗಬಲದಿಂದ ಮೇಘ ಮಂಡಲಾಧಿಕಾರವನ್ನು ಸಂಪಾದಿಸಿ ಸಕಾಲಕ್ಕೆ ಮಳೆ ಬರಿಸಿ (ಸುರಿಸಿ) ಬೆಳೆ ಹುಲುಸಾಗಿ ಬೆಳೆಯುವಂತೆಸಗುವನು. ಬೇಸಾಯಕ್ಕೆ ರುದ್ರಗಣರನ್ನು ನಿಯಮಿಸಿದರೆ, ಮಳೆ ಬರಿಸಲು ಮರುದ್ಗಣರನ್ನು ನೇಮಿಸುವನು. ನೀತಿರೀತಿಗಳಿಂದ ಪಾತಿವ್ರತ್ಯ ಧರ್ಮದಿಂದ ಸ್ತ್ರೀತ್ವವನ್ನು ಕಾಪಾಡಿಕೊಂಡು ಬಾಣಸ (ಅಡುಗೆ) ಕೆಲಸದಲ್ಲಿ ಮತ್ತು ಧರ್ಮ ಪ್ರಸಾರದಲ್ಲಿ ರುದ್ರಕನ್ನೆಯರನ್ನು ನೇಮಿಸಿದ್ದನು. ನಾಗಜನಾಂಗಕ್ಕೆ ಪಶುಸಂಗೋಪನ ಬೇರೆ ಕೈಗಾರಿಕೋದ್ಯಮ ಪಶು ಪೋಷಣಾದಿಗಳಿಗೆ ನಿಯಮಿಸಿದ್ದನು. ಒಟ್ಟಾರೆ ಭಾರತೀಯರ ಜೀವನ ಕಲ್ಯಾಣ ಕಾರ್ಯಗಳನ್ನು ಕೈಕೊಳ್ಳುವಂತೆಸಗುವನು. ಎಲ್ಲರೂ ಕ್ರಿಯಾಶೀಲರಾಗಿ ಜ್ಞಾನಿಗಳಾಗಿ ಧರ್ಮಿಗಳಾಗಿ ಸಂಯಮಿಗಳಾಗಿ ಬಾಳುವಂತೆಸಗುವನು. ಶ್ರೀರುದ್ರದೇವನು ಪಶುಪತಿಯಾಗಿ ಧನಪತಿಯಾಗಿ ವನಪತಿಯಾಗಿ ಜಗತ್ಪತಿಯಾಗಿ ದಿಕ್ಪತಿಯಾಗಿ ಗಣಪತಿಯಾಗಿ ಜನಪತಿಯಾಗಿ ಕ್ಷೇತ್ರಪತಿಯಾಗಿ ಶಿವಾಚಾರಪತಿಯಾಗಿ ಔಷಧಿಪತಿಯಾಗಿ ಕುಲುಂಚುಪತಿಯಾಗಿ ವಾಣಿಜಪತಿಯಾಗಿ ಭಾರತೀಯ ಸಂಸ್ಕೃತಿಯನ್ನು ಸರ್ವತೋಮುಖವಾಗಿ ಸಜಿಸಿ ಸಂವೃದ್ಧಿಸಿ ಭಾರತೀಯರನ್ನು ಹೃಷ್ಟಪುಷ್ಟರನ್ನಾಗಿಸಿ ಅನಂತರುದ್ರನೆಂದು ಮಹಾರುದ್ರನೆಂದು ಕಾಲಾಗ್ನಿರುದ್ರನೆಂದು ಸಂ-ಕರ್ಷಣ ಮೂರ್ತಿಯೆಂದು ಭಾರತೀಯರ ಬಾಳಿಗೆ ಬೆಳಕನ್ನಿತ್ತಕಾರಣ ಆದಿತ್ಯನೆಂದು, ಏನೆಲ್ಲದಕ್ಕೆ ಒಡೆಯನಾದುದರಿಂದ ಪರಮ ಪುರುಷನೆಂದು, ವಿಶ್ವಾಧಿಪನೆಂದು, ವಿಶ್ವಾಧಿಕನೆಂದು, ವಿಶ್ವರೂಪನೆಂದು ಮಹರ್ಷಿಯೆಂದು, ಭಿಷಕ್ತಮನೆಂದು, ಲೋಕಕಂಟಕರಾದ ಅಜೇಯರಾದ ತ್ರಿಪುರ ಸಂಹಾರ ಮಾಡಿ ತ್ರಿಪುರಾರಿಯೆಂದು, ಜಗನ್ಮಾತೆ-ಮತ್ತು ಜಗದಾದಿ ಶಕ್ತಿಯಾದ ಕಾಳಿಕಾಧವನೆಂದು ವಿಖ್ಯಾತನಾಗಿದ್ದಾನೆ. ಮಹಾಪಾಶುಪತ ಶಿವಾಚಾರ (ಅನಾದಿವೀರಶೈವ) ಧರ್ಮ ತತ್ತ್ವಗಳನ್ನು ಉತ್ಪಾದಿಸಿ, ಅಸಂಖ್ಯ ರುದ್ರಗಣರಿಗೆ ರುದ್ರಕನ್ನೆಯರಿಗೆ ಮರುದ್ಗಣರಿಗೆ ಬೋಧಿಸಿ ಪ್ರಪ್ರಥಮ ಜಗದ್ಗುರುವಾಗಿ ಜಗದ್ವಂದ್ಯನಾಗಿರುವನು. ರೋಗ-ಭವರೋಗ ಚಿಕಿತ್ಸಕನಾಗಿ ಸಚ್ಚಾರಿತ್ರವನ್ನು ರೂಪಿಸಿಕೊಂಡನು. ಪ್ರಪ್ರಥಮ ವೀರಶೈವ ಜಗದ್ಗುರುವೆನಿಸಿರುವನು. "ಅನಂತರುದ್ರಭಗವಾನ್ ಪ್ರಣತೋಽಸ್ಮಿ ಜಗದ್ಗುರೋ" ಎಂದು ಚಂದ್ರಜ್ಞಾನಾಗಮ ನಿರೂಪಿಸಿದೆ. "ರುದ್ರೋಲಿಂಗಂ......" ಎಂದು ರುದ್ರಹೃದಯೋಪನಿಷತ್ ಉಗ್ಗಡಿಸಿದೆ. ವೃಷಭರುದ್ರದೇವನು ಯಾವುದನ್ನು ಕಡೆ

ಗಣ್ಣಿಂದ ಕಂಡಿಲ್ಲ. ಗಣರ ಬೆಂಬಲ ಆತನಿಗೆ ಸಾಕಷ್ಟಿದ್ದಿತು. ಆತನಲ್ಲಿ ಕ್ರಿಯಾಶಕ್ತಿ ಜ್ಞಾನಶಕ್ತಿ ಭಾವಶಕ್ತಿಗಳು ಜಾಗ್ರತವಾಗಿದ್ದವು, ಜ್ವಲಂತವಾಗಿದ್ದವು. ಯೌಗಿಕ ಶಕ್ತಿ, ವೈದ್ಯವೈದುಷ್ಯ, ದೂರ ದೃಷ್ಟಿ, ದಾರ್ಶನಿಕ ದೀಪ್ತಿ, ವಿಶಾಲ ಮನೋಭಾವ, ಸಮತಾಭಾವ, ಪಶುಪಾಲನ, ಗಣತಂತ್ರ,ಕವಿಹೃದಯ, ನೈತಿಕ ಸಂಪತ್ತಿ, ಆತ್ಮಿಕಸತ್ವ,ಶಿವಾಚಾರ ಪರಿಪಾಲನ, ಲೋಕಕಲ್ಯಾಣ, ಆದಿತ್ಯದೀಪ್ತಿ, ಮಹಿಳಾದರಣ, ಧರ್ಮಾಚರಣ ಇತ್ಯಾದಿ ಗುಣಗಣಗಳು ಆತನಲ್ಲಿದ್ದವು. ಮಿಗಿಲಾಗಿ ಗಣಪ್ರಿಯತೆಯಿದ್ದಿತು. ಜನಪ್ರಿಯತೆಗೆ ಬೇಕಾದ ಉದಾರಗುಣಗಳಿದ್ದವು. ಅನುಕಂಪ ಹೃದಯನಾಗಿದ್ದನು. ಉಜ್ವಲ ಭಾವನೆಗಳಿದ್ದವು. ಉದಾತ್ತ ಕ್ರಿಯೆಗಳಿದ್ದವು. ಗಣರಲ್ಲಿ ಜನರಲ್ಲಿ ಸದ್ಭಾವ ಸತ್‌ಸಂಕಲ್ಪಗಳನ್ನು ಚಿಗುರಿಸಿ ಬೆಳಸುವ ಅಸಾಧಾರಣ ಶಕ್ತಿ ಶ್ರೀರುದ್ರದೇವನಲ್ಲಿದ್ದಿತು ಮತ್ತು ಜನರ ಬೇನೆ ಬಡತನ ಅಜ್ಞಾನ ಅಶಕ್ತಿ ಆಲಸ್ಯಗಳನ್ನು ಅಳಿಸಿ ಆರೋಗ್ಯ ಸಿರಿತನ ಜ್ಞಾನ ಶಕ್ತಿ ಚಟುವಟಿಕೆಗಳನ್ನು ಅಳವಡಿಸುತ್ತಿದ್ದನು. ಯಾರಿಗೂ ಮುಪ್ಪುಬಾರದಂತೆಸಗಿದ್ದನು. ಇದ್ದವರಿಗೂ ಸತ್ತವರಿಗೂ ಮೋಕ್ಷವನ್ನುಂಟುಮಾಡುವ 'ಮುಕ್ತಿ ಮಂಟಪ' ವೊಂದನ್ನು ಸ್ಥಾಪಿಸಿ ಮಂಟಪ ಇತಿಹಾಸಕ್ಕೆ ಬುನಾದಿಯನ್ನು ಹಾಕಿ ಆದಿಕಾರಣನಾಗಿರುವನು. ಜನ ಜೀವನದ ಏನೆಲ್ಲ ಕೊಳೆಗಳನ್ನು ಕಳೆದು ಕಳಾವಂತರನಾಗಿಸುತ್ತಿದ್ದ ಕಾರಣ ಆತನಿಗೆ 'ಹರ' ಎಂದು ಹೆಸರಿದ್ದಿತು. ಹರ ಹೆಸರು ಪಾರ್ವತೀಪತಿ ಶಿವನಿಗೆ ಹೇಳುವ ರೂಢಿ ಬಂದಿದೆ. ಇದು ಸರಿಯಲ್ಲ. ತನ್ನ ಬಳಸಿ ಇರುವ ಜನರ ಬಾಳು ಬದುಕನ್ನು ಬೆಳುಪಾಗಿಸಿ ಅಂದರೆ ನಿರ್ಮಲವಾಗಿಸುವ ತೇಜಸ್ವಿಯಾಗಿದ್ದ ಕಾರಣ ಆತನಿಗೆ 'ಆದಿತ್ಯ'ನೆಂದು ಹೇಳುತ್ತಿರಲಾಗಿದೆ. ಹದಗೆಟ್ಟ ಜನರ ಬಾಳನ್ನು ಹದಗಳಿಸಿ ಸತ್ಯವೂ ಸುಂದರವೂ ಆಗುವಂತೆಸಗುತ್ತಿದ್ದನು. ಜನರಿಗೆ ಧರ್ಮ ಪರಾಕ್ರಮ ಉತ್ತಮ ಗುಣಗಳನ್ನು ಬೋಧಿಸುವಲ್ಲಿ ಅಗ್ರಗಣ್ಯನಾಗಿದ್ದುದರಿಂದ 'ವೃಷಭ' ನೆಂಬೆನಿಸಿದ್ದನು.ತನ್ನಂತೆ ಅನಂತ ಗಣರನ್ನು ರೂಪಿಸಿ ರುದ್ರಗಣರನ್ನು ಅಸಂಖ್ಯಗೊಳಿಸಿದ್ದರಿಂದ 'ಅನಂತರುದ್ರ'ನೆಂದು ಖ್ಯಾತನಾಗಿರುವನು. ರುದ್ರಗಣರ ಮುಪ್ಪನ್ನು ಕಳೆದು ಆ ಜೀವ ತರುಣರನ್ನಾಗಿಸಿದ್ದಕಾರಣ 'ಭಿಷಕ್ತಮ'ನೆನಿಸಿದ್ದನು. ಮೃತ್ಯು (ಕಾಲ)ವಿಗೆ ಮೃತ್ಯು ಬರಿಸುವ ಶಕ್ತಿ ಸಂಪನ್ನನಾಗಿದ್ದುದರಿಂದ 'ಕಾಲಾಗ್ನಿರುದ್ರ'ನೆನಿಸಿರುವನು. ಜನರಿಗೆ ಅನ್ನ ನೀರು ಔಷಧಿಗಳನ್ನು ಹೊಲಮನೆಗಳನ್ನು ಹಸು ಹೋರಿ ಎತ್ತುಗಳನ್ನು ಒದಗಿಸುತ್ತಿದ್ದುದರಿಂದ ಜನ-ಗಣರಿಗೆ ಹೆಚ್ಚು ಹತ್ತಿರದವನಾಗಿದ್ದನು. ಹೆಚ್ಚೇನು ಎಲ್ಲರೊಡನೆ ಅಂದರೆ ಮಿತ್ರ ಶತ್ರುಗಳೊಡನೆ ಬೆರೆದು ವಿಶ್ವಮಾನವನಾಗಿ ಬಾಳಿ ಬೆಳಗಿದನು.

ವಿಶ್ವಾಧಿಕ, ವಿಶ್ವಾಧಿಪ, ವಿಶ್ವರೂಪ ಎಂಬೀ ವಿಶಿಷ್ಟವೂ ವ್ಯಾಪಕವೂ ಆದ ನಾಮತ್ರಯುಗಳಿಂದ ಕರೆಯಿಸಿಕೊಳ್ಳುತ್ತಿದ್ದನು. ಆತನ ಶತ್ರುಗಳೂ ಮಿತ್ರರಾಗಿ ಪರಿಣಮಿಸುತ್ತಿದ್ದರು. ಪಶುಗಳನ್ನು ಪಶುಗಳಂತಿರುವ ಮನುಷ್ಯರನ್ನೂ ಪರಿ ಪರಿಯಾಗಿ ಪೋಷಿಸುತ್ತಿದ್ದ ಕಾರಣ 'ಪಶುಪತಿ' ಎಂದು ಹೆಸರಾಂತನು. ಇದನ್ನು ಪಾರ್ವತೀಪತಿಗೆ ಜೋಡಿಸಿ ಹೇಳುತ್ತಾರೆ. ಇದು ಅಸಂಗತವಾಗಿದೆ. ಅಪರ ಶಿವನು ವೃಷಭ ವಾಹನನಲ್ಲದೆ ಪಶುಪತಿಯಲ್ಲ. ಆತನಿಗೆ ವೃಷಭವನ್ನಿತ್ತವನೂ ಶ್ರೀರುದ್ರನೆ! ಜನ ಜೀವನದ ಮೂಲಭೂತಿ ವೃತ್ತಿ (ಕಾಯಕ)ಯಾದ ಕೃಷಿ ಯನ್ನು ಕಂಡು ಹಿಡಿದು ಭಾರತಾದ್ಯಂತ ಹರವಾಗಿ ಹಬ್ಬಿಸಿ ಜನತೆಯ ಆಹಾರ ಅರ್ಥಗಳನ್ನು ಸಮೃದ್ಧಿಗೊಳಿಸಿದ ಕಾರಣ'ಸಂಕರ್ಷಣ ಮೂರ್ತಿಸ್ವರೂಪ'ನೆಂದೂ 'ಹಿರಣ್ಯಬಾಹು' ಎಂದೂ ನತ್ವಿಸರುಗಳಿಗೆ ಕಾರಣನಾದನು. ಯೌಗಿಕ ಅಸಾ ಧಾರಣ ಶಕ್ತಿ ಸಂಪನ್ನನಾಗಿ ಲೋಕಕಂಟಕರಾದ ತ್ರಿಪುರ ಸಂಹಾರ ಮಾಡಿ ಲೋಕಹಿತಯುಹತ್ಕಾರ್ಯವನ್ನು ಮಾಡಿ 'ಮಹರ್ಷಿ'ಯೆಂದೆನಿಸಿರುವನು. ಜನತೆಯ ಶ್ರೇಯೋಭಿವೃದ್ಧಿಗಾಗಿ ತನ್ನೆಲ್ಲ ತ್ಯಾಗ-ಯೋಗಗಳನ್ನೆಲ್ಲ ವಿನಿಯೋಗಿಸಿ 'ಭಗವಾನ್' ಎಂಬ ಭವ್ಯ ಮನ್ನಣೆಗೆ ಪಾತ್ರನಾದನು. ಪ್ರಪ್ರಥಮದಲ್ಲಿ ಶ್ರೇಷ್ಠ ವಾದ ಅಷ್ಟಾವರಣಗಳನ್ನು ಉತ್ಪಾದಿಸಿ ವಾಸ್ತವವಾಗಿ ಜಗದ್ಗುರುವಾದಂತೆ ಇಷ್ಟಲಿಂಗವನ್ನು ಧರಿಸಿ ಆರಾಧಿಸಿ ಲಿಂಗವೇ ಆಗಿದ್ದರಿಂದ "ರುದ್ರೋಲಿಂಗ ಮುಮಾ ಪೀಠಂ ತಸ್ಮೈ ತಸ್ಯೈನಮೋ ನಮಃ" ಎಂದು ರುದ್ರ ಹೃದಯೋಪ ನಿಷತ್ತು ಉಗ್ಗಡಿಸಿದೆ. ಇಲ್ಲಿ ಉಮಾ ಅಂದರೆ ಅಪರ್ಣಾ ಅಲ್ಲ; ಕಾಳಿಕಾದೇವಿ! ಮುಂದೆ ಗುರುಗಳಿಗೆಲ್ಲ ಗುರುವಾಗಿ ಅಷ್ಟಾವರಣಾಂತರ್ಗತ ವಿಶೇಷ ಜಂಗಮನೂ ಆಗಿದ್ದನು. "ವೀರಭದ್ರೋಯಥಾ ರುದ್ರಸ್ತ್ವನ್ಯೇ ಚ ಗುರವಃ ಸ್ಮೃತಾಃ। ಗುರೋರ್ರಾಜ್ಞಾತಾಶ್ಚ ಗುರವೋ ವಿಖ್ಯಾತಾ ಭುವನತ್ರಯೇ॥" ರುದ್ರ ಗುರುದೇವ ನಿಂದ ವೀರಭದ್ರಾದಿ ಗುರುವರ್ಗವು ಭುವನತ್ರಯದಲ್ಲಿ ಬೃಹತ್ತಾಗಿ ವಿಖ್ಯಾತ ವಾಯಿತು. ಹದಿನಾಲ್ಕು ಸಾವಿರ ಗುರುಗಳೆಂದು ಕ್ರಿಯಾಸಾರ ನಿರೂಪಿಸಿದೆ. ಗುರುಗಳಿಗೆಲ್ಲ ಆದಿಗುರು, ಅತ್ಯಂತ ಹಿರಿಯ ಗುರು ಶ್ರೀರುದ್ರದೇವನು. ಅಷ್ಟೇ ಅಲ್ಲ, "ಸರ್ವದೇವಾತ್ಮಕಂ ರುದ್ರಂ ನಮಸ್ಕುರ್ಯಾತ್ ನಿರಂತರಂ"ಎಂದೂ"ಕಥಿಕಾಃ ಶ್ರೀರುದ್ರೇಣೈವ ಲಿಂಗಸ್ಯಾರ್ಚನ ಸೂಚಿತಾಃ।" ಎಂದೂ ಮತ್ತು "ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಃ ಸನಾತನಾಃ।" ಎಂದೂ "ರುದ್ರೇಣ ದೀಕ್ಷಿತೋ ಭೂತ್ವಾಸ್ಕಂದಃ ಶಿವಸಮುದ್ಭವಃ। ಶಿವಾಚಾರರಹಸ್ಯಸ್ಯ ಪಾತ್ರತಾಂ ಪ್ರಥಮಂ ಗತಃ॥" ಎಂದೂ "ಯೋದೇವಾನಾಂ ಪ್ರಥಮಂ ಪುರಸ್ತಾತ್ ವಿಶ್ವಾಧಿಕೋ

ರುದ್ರೋ ಮಹರ್ಷಿಃ।" ಎಂದೂ ಮತ್ತು "ಯೋ ದೇವಾನಾಂ ಪ್ರಭವಶ್ಚೋ ದ್ಭವಶ್ಚ ವಿಶ್ವಾಧಿಪೋ ರುದ್ರೋ ಮಹರ್ಷಿಃ॥" ಎಂದು ಮುಂತಾಗಿ ತೈತ್ತರೀಯ, ಶ್ವೇತಾಶ್ವತರ ಮೊದಲಾದ ಉಪನಿಷತ್ತುಗಳು ಆಗಮ ಪುರಾಣಗಳು ಪುಂಖಾನುಪುಂಖವಾಗಿ ಪ್ರಾಮಾಣಿಕವಾಗಿ ರುದ್ರದೇವನ ಪ್ರಭಾವ ಪ್ರತಿಭೆ ಗಳನ್ನು ಮನಗಂಡು ಆತನ ಆ ವ್ಯಕ್ತಿತ್ವವನ್ನು ಪ್ರತಿಪಾದಿಸಿವೆ; ಪ್ರಕಾಶಪಡಿ ಸಿವೆ. ರುದ್ರದೇವನ ವೃಷಭತ್ವವನ್ನು ಅಂದರೆ ಧರ್ಮಪರಾಕ್ರಮವನ್ನು ಅಗ್ರ ಗಣ್ಯತ್ವವನ್ನು ಯಥಾರ್ಥವಾಗಿ ಕಂಡುಕೊಂಡು ಕೊಂಡಾಡಿವೆ.

ವಿಚಾರಿಸಿ ನೋಡಿದರೆ ಎಲ್ಲ ಜನಜೀವನ ಮೂಲ (ಇಂದಿಗೂ) ಕೃಷಿ ವೃತ್ತಿ! ಶ್ರೀಸಾಮಾನ್ಯರಾದಿಯಾಗಿ ಎಲ್ಲರೂ ಬದುಕಿ ಬಾಳುವುದು ಈ ಕೃಷಿ ವೃತ್ತಿಯ ಫಲದಿಂದ! ಇದನ್ನು ಪುರಾತನ ಕಾಲದಲ್ಲಿಯೆ ಶ್ರೀರುದ್ರದೇವನು ತನ್ನ ದೂರದೃಷ್ಟಿಯಿಂದ ಕಂಡುಕೊಂಡು ಕಾಡಿನಲ್ಲಿದ್ದ ಹಸುಗಳನ್ನು ಹಿಡಿದು ತಂದು ಪೋಷಿಸಿ, ಅವುಗಳಿಂದ ಹುಟ್ಟಿದ ಹೋರಿ-ಎತ್ತುಗಳಿಗೆ ವೃಷಭ ಎಂದು ಹೆಸರಿಸಿ ವ್ಯವಸಾಯಕ್ಕೆ ತೊಡಗಿಸಿ ಹಾಲು-ಕಾಳುಗಳನ್ನು ಉತ್ಪಾದಿಸಿ ಜನ ಜೀವನವನ್ನು ತೃಪ್ತಿಕರವಾಗಿ ರೂಪಿಸಿದ ಹಿರಿಮೆ ಎಲ್ಲ ಬಗೆಯಲ್ಲಿ ಶ್ರೀರುದ್ರ ದೇವನಿಗೆ ಸಾವಿರ ಪಾಲಿಗೂ ಸಲ್ಲತಕ್ಕದ್ದಾಗಿದೆ. ಉಂಡುಟ್ಟು ಬಾಳುವಾಗ ಬರುವ ಬೇನೆ ಬೇಸರಿಕೆಗಳನ್ನು ಕಳೆಯಲು ಬಗೆಬಗೆಯ ಮದ್ದು (ಔಷಧಿ) ಗಳನ್ನು ಕಂಡು ಹಿಡಿದು ಎಲ್ಲ ಬಗೆಯ ರೋಗಿಗಳಿಗೆ ಚಿಕಿತ್ಸೆ ಮಾಡಿ ನಿರೋಗಿ ಗಳನ್ನು ಮಾಡಿದ ಮೊದಲ ಕೀರ್ತಿ ಶ್ರೀರುದ್ರದೇವನದಾಗಿದೆ. ಆ ಬಳಿಕ ಆಯು ರ್ವೇದ, ಸುಶ್ರುತ, ಧನ್ವಂತರಿ ಮೊದಲಾದವುಗಳು ಹುಟ್ಟಿಕೊಳ್ಳುವವೆಂಬುದನ್ನು ಗುರುತಿಸುವವರೇ ಇಲ್ಲವಾಗಿದೆ. ಕಾಯೇಂದ್ರಿಯಗಳಿಂದ ನಿರೋಗಿಗಳಾದರೂ ಮನ ಭಾವಗಳಿಂದ ಭವರೋಗಿಗಳಾಗುವುದು ಪ್ರಕೃತಿ ಸಹಜವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಈ ಭವರೋಗವನ್ನು ಕಳೆಯಲು ಶಿವಾಚಾರಾದಿ ಶಿವ ಧರ್ಮಗಳನ್ನು ಶ್ರೀರುದ್ರದೇವನೇ ಪ್ರಪ್ರಥಮದಲ್ಲಿ ನಿರೂಪಿಸಿರುವನು. "ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಃ ಸನಾತನಾಃ।" ಎಂಬೀ ಪುರಾತನೋಕ್ತಿ ಸತ್ಯ ಸಾಕ್ಷಿಯಾಗಿದೆ. ಹೀಗೆ ಜನಜೀವನ ಶ್ರೇಯೋಽಭಿವೃದ್ಧಿಗಾಗಿ ಬೇಕಾದ ಅಗತ್ಯ ಗಳನ್ನೆಲ್ಲ ಉತ್ಪಾದಿಸಿ ಕರುಣಿಸಿದ ಕಾರಣ ಅಗ್ರಗಣ್ಯತೆಯ ಸೂಚಕವಾದ ಮತ್ತು ಧರ್ಮ ಸಾಮರ್ಥ್ಯವನ್ನು ಸಂಕೇತಿಸುವ 'ವೃಷಭ' ಎಂಬ ಪ್ರಕೃಷ್ಟ ಪ್ರಶಸ್ತಿಯನ್ನು ಅಂದಿನ ಆರ್ಯರಿಂದ ಪಡೆದುದನ್ನು ಋಗ್ವೇದ ಋತವಾಗಿ ಉಗ್ಗಡಿಸಿದೆ. ಮುಂದೆ ಪಶುಪಾಲನ, ಕೃಷಿ ಉತ್ಪಾದನ ಸಂವರ್ಧನಾದಿಗಳ ಮುಖಾಂತರ ವೃಷಭ ಸಂಸ್ಕೃತಿಯನ್ನೆ ಭಾರತಾದ್ಯಂತ ಸಂವೃದ್ಧಿಸಿದ ಸತ್ಕೀರ್ತಿ ಶ್ರೀರುದ್ರದೇವನದಾಗಿದೆ

ಯೆಂದರ ಇದಕ್ಕೆ ಎರಡು ಮಾತಿಲ್ಲ. ಅಂತೆಯೇ ನಮ್ಮೀ ರಾಷ್ಟ್ರಕ್ಕೆ 'ರುದ್ರ ಭಾರತ' ಎಂದೇ ಹೆಸರಿದ್ದಿತು.

ಕೇದಾರ ಕ್ಷೇತ್ರ–ರುದ್ರನ ಕೃಷಿ ಭೂಮಿ!

ಭಾರತದ ಪ್ರಪ್ರಥಮ ರೈತ ರುದ್ರದೇವ! ತಾನು ರೈತನಾಗಿ ರೈತರನ್ನು ಉತ್ಪಾದಿಸಿದಾತ ವೃಷಭರುದ್ರ! ಕಾಡಿನಿಂದ ಅಸಂಖ್ಯ ಹಸುಗಳನ್ನು ಹಿಡಿದು ತಂದು ಸಾಕಿದ ಹಸುಗಳಲ್ಲಿ ಅಸಂಖ್ಯ ಎತ್ತುಗಳ ಉತ್ಪನ್ನವಾಗುವುವು. ಅವುಗಳನ್ನು ಸಾರ್ಥಕಪಡಿಸಬೇಕೆಂದು ಯೋಚಿಸಿ ಕೃಷಿಕಾಯಕವನ್ನು ಕಂಡು ಹಿಡಿದು ಅದಕ್ಕೆ ಎತ್ತು (ವೃಷಭ)ಗಳನ್ನು ಯೋಜಿಸುವನು. ತಾನು ಸ್ವಂತ ಬೇಸಾಯಗಾರನಾಗಿ ಕೇತಾರವನ್ನು ಕೃಷಿಭೂಮಿಯನ್ನಾಗಿಸಿಕೊಳ್ಳುವನು. ಕೇತಾ (ದಾ) ರವೆಂದರೆ ನೆಲ್ಲುಗದ್ದೆ ಎಂದೇ ಅರ್ಥ! ಆ ಪ್ರದೇಶಕ್ಕೆ ರುದ್ರದೇವನ ಬೇಸಾಯದಿಂದಲೇ ಬಂದಿದೆ–ಕೇತಾರ ಎಂದು! ಆ ಕೇದಾರಕ್ಕೆ ರುದ್ರದೇವನೊಡೆಯನಾದುದರಿಂದ ರುದ್ರದೇವನಿಗೆ ಕೇದಾರೇಶ್ವರ ಎಂದು ಹೆಸರು ಬಂದಿದೆ. ಇದೇ ಹೆಸರಿನ ಒಂದು ಜ್ಯೋತಿರ್ಲಿಂಗವೂ ಅಲ್ಲಿ ಪ್ರತಿಷ್ಠಿತವಾಗಿ ಪ್ರಸಿದ್ಧವಾಗಿದೆ. ಕೇದಾರದಲ್ಲಿ ರುದ್ರಗಣರು ಬೇಸಾಯ ಪ್ರಾರಂಭಿಸಿ ಅತ್ಯಂತ ಉತ್ತಮ ಬೆಳೆಯನ್ನು ತೆಗೆಯುತ್ತಿದ್ದರು. ಕೇತಾರದ ಪಕ್ಕದ ಪರಿಸರದಲ್ಲಿಯೆ ಬಂದ ಬೆಳೆಯಿಂದ ಪ್ರಸಾದ (ಅನ್ನ)ದಾಸೋಹ ನಡೆಸುತ್ತಿದ್ದರು. ಅದರಿಂದ ಅದಕ್ಕೆ 'ಅನ್ನಪೂರ್ಣ' ಪ್ರದೇಶವೆಂದು ನಾಮಕರಣವಾಗಿ ಇಂದಿಗೂ ಆ ಪ್ರದೇಶ ಅದೇ ಹೆಸರಿನಿಂದ ಪ್ರಸಿದ್ಧವಾಗಿದೆ. ಕಾಯಕ ದಾಸೋಹಗಳು ರುದ್ರದೇವನಿಂದಲೇ ಉತ್ಪಾದಿತವಾಗಿ ಪ್ರಾರಂಭವಾಗಿವೆ. ಈ ಪ್ರಭಾವ ಆದಿಕಾಲದ ವೀರಶೈವರಾದ ಶಿವಾಚಾರ್ಯರ ಮೇಲೆ ಮಿಗಿಲಾಗಿ ಆದಿ ರೇಣುಕರ ಮೇಲೆ ಪರಿಣಾಮ ಮಾಡಿ ಕಾಯಕದಾಸೋಹಗಳನ್ನು ಮುಂದುವರಿಸುವಂತೆ ಮಾಡಿತು. ವೃಷಭ ರುದ್ರನ ಸಂಸ್ಕೃತಿಯೂ ಮುಂದುವರಿಯುವಂತೆಸಗಿತು. ಇಂದಿನ ಈ ವಿಜ್ಞಾನ ಕಾಲದಲ್ಲಿ ಆಗದಷ್ಟು ಬೇಸಾಯದ ಯಾವ ಕೊರತೆಯಿಲ್ಲದಂತೆ ಅಂದೇ ನೆರವೇರಿಸಿದ ಬೇಸಾಯ ಕೇವಲ ವೃಷಭಗಳಿಂದ ನಡೆಯುತ್ತಿದ್ದಿತು. ಇಂದು ಕೃಷಿ ತೃಪ್ತಿಕರವಾಗಿ ಸಾಗದ್ದಕ್ಕೆ ರೈತ ಆಂದೋಲನ ಆಗಾಗ ಸಾಗುತ್ತ ನಡೆದಿದೆ. ಆದರೂ ಭಾರತ ಕಿಸಾನ್ ಯೂನಿಯನ್ ಮತ್ತು ಶೇತ್ಕರೀ ಸಂಘಟನಾ ಸಂಸ್ಥೆಗಳೆರಡೂ ಕೂಡಿ ರೈತ ಆಂದೋಲನವನ್ನು ಮಾಡುತ್ತಿದ್ದರೂ ಸಾಧ್ಯವಿಲ್ಲ

ದಾಗಿದೆ. ಕೊರತೆಯಿಲ್ಲದ ಗುರಿಗೆ ಮುಟ್ಟದಿದೆ. ಆಹಾರದ ಹಾಹಾಕಾರ ತಪ್ಪದಿದೆ. ಇಂದಿನ ಯುಗಕ್ಕೆ ತಕ್ಕಂತೆ ವೈಜ್ಞಾನಿಕ ಯಂತ್ರಗಳನ್ನು ಅಂದರೆ ಟ್ರಾಕ್ಟರು, ನೇಗಿಲುಗಳಿಗೆ ಬದಲು ಊಳುವ ಯಂತ್ರ, ನೀರೆತ್ತುವ ಪಂಪುಷೆಟ್‌ಗಳನ್ನು ಉಪಯೋಗಿಸುತ್ತಿದ್ದರೂ ಕೇದಾರದಲ್ಲಿ ಅಂದು ನಡೆಯುತ್ತಿದ್ದ ವೃಷಭ ಕೃಷಿಯ ಮಟ್ಟವನ್ನು ಮುಟ್ಟಲಾಗಿಲ್ಲ. ಅದುವೇ ಭಾರತದ ಕೃಷಿಯ ಆದರ್ಶವೂ ಆರಂಭವೂ ಆದ ಭೂಮಿ, ಕೇದಾರೇಶ್ವರ (ರುದ್ರ) ಜ್ಯೋತಿರ್ಲಿಂಗ ಭೂಮಿ. ಅದರ ಪರಿಸರದಲ್ಲಿ ವೀರಶೈವ ಪಂಚಪೀಠಗಳಲ್ಲಿ ಒಂದಾದ ವೈರಾಗ್ಯ ಸಿಂಹಾಸನ ಪೀಠ ಪ್ರಾಚೀನ ಕಾಲದಿಂದಲೂ ಸ್ಥಾಪಿತವಾಗಿ ಶೋಭಿಸುತ್ತದೆ. ಧಾರ್ಮಿಕ ಸಾಂಸ್ಕೃತಿಕ ಕೃಷಿಯೂ ಅಲ್ಲಿ ಸಾಗುತ್ತಿದೆ. ಸನಾತನ ವೀರಶೈವೋತ್ಕರ್ಷವನ್ನು ಸಾರುತ್ತಿದೆ ಮತ್ತು ಕೃಷಿಕಾಯಕ ಕೇದಾರದಲ್ಲಿ ಪ್ರಪ್ರಥಮವಾಗಿ ಪ್ರಾರಂಭವಾದಂತೆ ತಿಳಿಯುತ್ತದೆ. ಅಂತೆಯೇ ಕೇತಾರ (ಬತ್ತದಗದ್ದೆ) ಎಂಬ ಹೆಸರದಕೆ ಬಂದಿದೆ. "ಕೃತಯುಗದಲ್ಲಿ ಓಂಕಾರ ಸತ್ಯರೂಪ ದೇವಾಂಗನೆಂಬ ಭಕ್ತ ಸ್ಥೂಲ ಕಾಯನೆಂಬ ಜಂಗಮ; ಅಂದಿಗೆ ಪ್ರಥಮ ಮೂಲಸ್ಥಾನ ಕೇತಾರೇಶ್ವರ।" ಎಂದು ಶಿವಾಚಾರ್ಯ ಚನ್ನಬಸವಣ್ಣನವರು ತಮ್ಮ ಸೂಳ್ನುಡಿಯೊಂದರಲ್ಲಿ ನಿರೂಪಿಸಿದಂತೆ ಕೇದಾ (ತಾ)ರ ಕ್ಷೇತ್ರದಲ್ಲಿ ಕೇತಾರೇಶ್ವರ ಜ್ಯೋತಿರ್ಲಿಂಗವು ಇರುವುದು ಸುಪ್ರಸಿದ್ಧವಾಗಿದೆ. ಇದನ್ನು ತನ್ನ ಕೇತಾರದಲ್ಲಿ ರುದ್ರನೇ ಪ್ರಥಮದಲ್ಲಿ ಸ್ಥಾಪಿಸಿ ಕ್ಷೇತ್ರವನ್ನಾಗಿಸಿರುವನು.

———

ಸಂಶೋಧನ ಕೃತಿಗಳು

೧ ಚಿಗುರಿಟ್ಟ ಚಿಂತನ
೨ ಜಗದ್ಗುರು ಆದಿರೇಣುಕರು (ವೀರಾಗಮ ಸಂಶೋಧಿತ)
೩ ವಿಶ್ವಜ್ಯೋತಿ ವೀರಭದ್ರ
೪ ರುದ್ರದೇವನ ವಿಶ್ವವೈಭವ ಕ್ರಾಂತಿ
೫ ಶಿವಾಗಮ ಸಾಹಿತ್ಯ
೬ ವೀರಶೈವ ಉಗಮ ನಿಗಮ
೭ ಶ್ರೀರುದ್ರ ಸೂಳ್ನುಡಿಗಳು

ತ್ವರಿತ ಮುದ್ರಣ ಗಂಗಾಪೂರಪೇಟ, ಗದಗ